# ಅಪರಂಜಿ

ತಿಳಿನಗೆಯ ಕಾರಂಜಿ

ಅಕ್ಟೋಬರ್ 2017





# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 35
ಸಂಚಿಕೆ - 1
ಅಕ್ಟೋಬರ್ - 2017

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | *ಪ್ರಕಾಶ್* | 2 |
| ಟಿಪ್ಪು ಕಾಲದ ಪಿಂಗಾಣಿ.. | *ವತ್ಸಲ* | 3 |
| ಕುಮಾರವ್ಯಾಸನ ಉತ್ತರ... | *ಎಸ್. ಆರ್. ವಿಜಯಶಂಕರ* | 9 |
| ಚಂಚಲ್ ಭಾಯಿ.... | *ನಂದಿನಿ ಕಾಪಡಿ* | 14 |
| ತುಂತುರು | *ದಂಡಾ* | 21 |
| ಬ್ರಾಹ್ಮಣ್ರ ಟೋಪಿ | *ಪಾಲಹಳ್ಳಿ ವಿಶ್ವನಾಥ್* | 22 |
| ಕಾಕಾಯಣ | *ಆರತಿ ಘಟಿಕಾರ್* | 27 |
| ಪಂಚ್ ಪದ್ಯಗಳು | *ಎಚ್. ಡುಂಡಿರಾಜ್* | 31 |
| ಬಾಯಿಗೆ ಬಾರದ ತುತ್ತು | *ಅನಿತಾ ನರೇಶ್ ಮಂಚಿ* | 32 |
| ಕುಟುಂಬದಲ್ಲಿ ಹಾಸ್ಯ | *ಕೆ.ಬಿ. ಪ್ರಭುಪ್ರಸಾದ್* | 35 |
| ವ್ಯಂಗ್ಯ ಮೆಲುಕು | *ಪ್ರಕಾಶ್ ಶೆಟ್ಟಿ* | 40 |

**ಮುಖಪುಟ ವ್ಯಂಗ್ಯಚಿತ್ರ - ಜಿ.ಎಸ್. ನಾಗನಾಥ್**

*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: beluruRamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ರಾಮ್ ರಹೀಮ್ ಸಿಂಗ್ ಬಂಧನ – ಸುದ್ದಿ

***• ಅಪ್ಪಟ ''ಸೆಕ್ಯುಲರ್'' ದೇವಮಾನವ !!***

★★★

ತೈಲ ಕಳವು ತಡೆಗೆ ಹೊಸ ಸಾಧನ – ಸುದ್ದಿ

***• ಅದು ಕೈಯಿಂದ ಜಾರದಿದ್ದರೆ ಉತ್ತಮ !!***

★★★

ಯಾರ ಕಣ್ಣಿಗೂ ಬೀಳದ ತಮಿಳುನಾಡಿನ ಶಾಸಕರು – ಪತ್ರಿಕೆ

***• ಅವರೆಲ್ಲಾ ಅದೃಶ್ಯವಾಗೇ ಇರಲಿ !!***

★★★

''ವಂಶ ಪಾರಂಪರ್ಯ ಆಡಳಿತದಲ್ಲಿ ತಪ್ಪೇನು?'' – ರಾಹುಲ್ ಗಾಂಧಿ

***• ಅಂಗೈ ಹುಣ್ಣಿಗೆ ಕನ್ನಡಿ ಬೇಕೆ ?!***

★★★

ಸೂಟ್‌ಕೇಸ್ ಮತ್ತು ವಿಧಾನಸೌಧದ ಬಗ್ಗೆ ಹೇಳಿಕೆ ಹಗರಣ – ಪತ್ರಿಕೆ

***• ಇದ್ದದ್ದು ಇದ್ದ ಹಾಗೆ ಹೇಳಬಾರದು !!***

★★★

ಬೇಳೆ ರೋಗಗಳ ಅಧ್ಯಯನಕ್ಕೆ ಹೆಚ್ಚು ಆದ್ಯತೆ – ಹೇಳಿಕೆ

***• ಹೌದು, ನಮ್ಮ ಮನೆಯಲ್ಲೂ ಬೇಳೆ ಬೇಯುತ್ತಿಲ್ಲ !!***

★★★

ನೇತ್ರಾಧಿಕಾರಿ ವೇತನ ಹೆಚ್ಚಿಸಲು ಆಗ್ರಹ – ಸುದ್ದಿ

***• ಸರ್ಕಾರ ಕಣ್ಣು ಬಿಡಬೇಕು !!***

★★★



# ಟಿಪ್ಪು ಕಾಲದ ಪಿಂಗಾಣಿ ಹೂಜಿ ಪ್ರಕರಣ

**- ವತ್ಸನ**

ಅದೇನು ರಾಕ್ಷಸ ಮಳೇರೀ ಆ ವಾರ ! ಅಬ್ಬಬ್ಬ, ನಮ್ಮ ಬಡಾವಣೆ ರಸ್ತೆಗಳಲ್ಲಿ ಒಂದು ಪುಟ್ಟ ದೋಣಿಯಲ್ಲಿ ಸರಾಗವಾಗಿ ಓಡಾಡಬಹುದಾಗಿದ್ದಂತಹ ಮಳೆ ! ಆ ವಾರ ಪೂರ್ತಾ ಶರಲೇಖ ಮತ್ತು ನಾನು ನಮ್ ಫ್ಲಾಟ್ ಬಿಟ್ಟು ಆಚೆಗೆ ಕಾಲೇ ಇಡಲಿಲ್ಲ. ಅಂತಹ ಒಂದು ಸಂಜೆ ನಮ್ಮ ಕ್ರಿಕೆಟಿಗರು ಶ್ರೀಲಂಕಾ ಟೀಮನ್ನು ಚಚ್ಚಿ ಕುಟ್ಟಿ ಬಜಾಯಿಸುವುದನ್ನು ನೋಡುತ್ತಾ ಟಿ.ವಿ. ಮುಂದೆ ಕುಳಿತಿದ್ದಾಗ ಶರಲೇಖನಿಗೊಂದು ಕರೆ ಬಂತು. ಫೋನಿನಲ್ಲಿ ಮಾತನಾಡುವಾಗ ಶರಲೇಖ ಅತೀ ಮಿತಭಾಷಿ. ಮಾತನಾಡಿದರೆ ಎಲ್ಲಿ ಮುತ್ತು ಸುರಿದು ಹೋಗುತ್ತದೋ ಅಂತ ಬಾಯಿ ಮುಚ್ಚಿರುತ್ತಾನೆ. ಹಾಗಾಗಿ ಶರಲೇಖನ ಅಲ್ಲೊಂದು ಇಲ್ಲೊಂದು ಹುಂಗುಟ್ಟುವಿಕೆಯನ್ನೇ ಗಮನಿಸುತ್ತಾ ಕುಳಿತೆ. ಸಂಭಾಷಣೆ ಮುಗಿಸಿ ಶರಲೇಖ, 'ಉನ್ನಿ ಕೃಷ್ಣನ್ ಫೋನ್ ಮಾಡಿದ್ದು. ಉನ್ನಿ ನೆನಪಿದೆ ತಾನೆ?' ಅಂತ ಕೇಳಿದ. 'ಓಹೋ ನೆನಪಿಲ್ಲದೇ ಏನು? ಹಿಂದೊಮ್ಮೆ ಅವನ ರಿಸಾರ್ಟಿಗೆ ಹೋಗಿ ಅವನಲ್ಲಿ ತಂಗಿದ್ದ ಡಿಪ್ಲೋಮ್ಯಾಟಿಕ್ ದಂಪತಿಗಳನ್ನು ನೀನು ಹೆದರಿಸಿ ಓಡಿಸಿದ್ದೆಯಲ್ಲಾ'' ಅಂತ ನಾನು ನಗುತ್ತಾ ಹೇಳಿದೆ. 'ಹ್ಞಾ, ಅದೇ ಉನ್ನಿ. ಈಗ ಮತ್ತೊಮ್ಮೆ ನಮ್ಮ ಸಹಾಯ ಕೇಳಿ ಅರ್ಜೆಂಟಾಗಿ ನಮ್ಮನ್ನ ಅವನಲ್ಲಿಗೆ ಕರೆದಿದ್ದಾನೆ. ನಾಳೆ ಬೆಳಗ್ಗೆ ಅವನ ಇನ್ನೋವಾ ಏಳುಗಂಟೆಗೆ ಸರಿಯಾಗಿ ಬರುತ್ತೆ. ಆರೂವರೆಗೇ ಸಿದ್ಧವಾಗಬೇಕು ನಾವಿಬ್ಬರೂ' ಅಂತ ಶರಲೇಖ ಹೇಳಿದ. ಅವನು ಕೆಲಸದ ಮೇಲೆ ಹೋಗುವಾಗ ನಾನು ಅವನೊಂದಿಗೆ ಹೋಗಲು ಸದಾ ಸಿದ್ಧನಾಗಿರುವುದರಿಂದ ಅವನ ಹೇಳಿಕೆ ನನಗೆ ಸಮ್ಮತವಾಗಿಯೇ ಇತ್ತು. ಹಾಗಾಗಿ ನಾವು ಪುನಃ ಕ್ರಿಕೆಟ್ ವೀಕ್ಷಣೆಯಲ್ಲಿ ನಮ್ಮನ್ನು ತೊಡಗಿಸಿಕೊಂಡೆವು.

ಬೆಳಗ್ಗೆ ಹೊರಡುವ ಹೊತ್ತಿಗೆ ಮಳೆ ಸ್ವಲ್ಪ ನಿಂತಿತ್ತು. ಆದರೆ ಮೋಡ ಮಾತ್ರ ಕವಿದೇ ಇದ್ದು ಏಳು ಗಂಟೆ ಹೊತ್ತಿನಲ್ಲೂ ಕತ್ತಲು ಕತ್ತಲಾಗಿಯೇ ಇತ್ತು.

ಮೈಸೂರಿನಲ್ಲಿ ಉಪಹಾರ ಮುಗಿಸಿ ಎಂಟೂ ಮುಕ್ಕಾಲರ ಹೊತ್ತಿಗೆ ನಾವು ಗುಂಡ್ಲು ಪೇಟೆ ದಾರಿ ಹಿಡಿದೆವು. ಗುಂಡ್ಲು ಪೇಟೆ ಹತ್ತಿರ ಬಲಕ್ಕೆ ತಿರುಗಿದ ಒಂದು ಗಂಟೆಯೊಳಗೆ ಕೇರಳ ಬಾರ್ಡರ್ ಸಿಗುತ್ತದೆ. ಅಲ್ಲಿಂದ ಸುಲ್ತಾನ್ ಬತೇರಿಗೆ ಸುಮಾರು ಒಂದು ಗಂಟೆಯ ಹಾದಿ. ಟಿಪ್ಪೂ ಸುಲ್ತಾನ್ ಇಲ್ಲಿ ಒಂದು ಪದಾತಿ ದಳ ಇರಿಸಿದ್ದನಂತೆ. ಈಗ ಇಲ್ಲೊಂದು ಅಭಯಾರಣ್ಯವೂ ಇದೆ. ನಾವು ಸುಲ್ತಾನ್ ಬತೇರಿ ಸೇರಿದಾಗ ಮಧ್ಯಾಹ್ನ ಒಂದು ಗಂಟೆ ಆಗಿತ್ತು. ಅಲ್ಲಿ ಹೋಟೆಲೊಂದರಲ್ಲಿ ಕುಸುಬಲ ಅಕ್ಕಿ ಅನ್ನ ತಿಂದು ನಮ್ಮ ಪ್ರಯಾಣವನ್ನು ಮುಂದುವರಿಸಿದೆವು. ಸ್ವಲ್ಪ ದೂರ ಸಾಗುವಷ್ಟರಲ್ಲಿ ಪಶ್ಚಿಮ ಘಟ್ಟಗಳನ್ನು ಇಳಿಯುವ ತಿರುವಿನ ರಸ್ತೆ ಶುರುವಾಯಿತು. ದೂರದಲ್ಲಿ ದಟ್ಟವಾಗಿ ಹರಡಿದ್ದ ಮಳೆ ಮೋಡಗಳಿಗೆ ಬಿಸಿಲು ಬೆಳ್ಳಿಯ ಅಂಚನ್ನು ಕಟ್ಟಿತ್ತು. ಇಲ್ಲಿಂದ ಸಮುದ್ರ ತೀರಕ್ಕೆ ಮೂರು ಗಂಟೆಗಳ ಪಯಣವಾದರೂ, ಹಕ್ಕಿ

ಹಾರಿದಂತೆ ಕಡಲಿನ ದೂರ ಕೇವಲ ಅರವತ್ತು ಕಿ.ಮೀ. ಮಾತ್ರ. ಹಾಗಾಗಿ ಕೆಲವು ತಿರುವುಗಳಲ್ಲಿ ಆಗುಂಬೆಯಲ್ಲಿ ಕಾಣುವಂತೆ ದಿಗಂತದಲ್ಲಿ ಕಡಲಿನ ಹೊಳೆಯುವ ರೇಖೆಯನ್ನು ಕಾಣಬಹುದಾಗಿತ್ತು. ನಿಸರ್ಗ ನಮ್ಮ ಮುಂದೆ ಧಾರಾಳವಾಗಿ ಹರಡಿದ್ದ ಸೌಂದರ್ಯವನ್ನು ಸವಿಯುತ್ತಾ ಕಾಲ್‌ಪೆಟ್ಟದಲ್ಲಿದ್ದ ರಿಸಾರ್ಟ್ ಸೇರಿದಾಗ ಮಧ್ಯಾಹ್ನ ಮೂರು ಗಂಟೆ. ರಿಸೆಪ್ಷನ್ನಿನಲ್ಲಿ ಸ್ವತಃ ಉನ್ನಿಯೇ ನಿಂತಿದ್ದು ನಮ್ಮನ್ನು ಬಹು ಆತ್ಮೀಯತೆಯಿಂದ ಸ್ವಾಗತಿಸಿದ. ಸ್ವಾಗತಿಸುವ ಹಜಾರದಲ್ಲಿ, ಹಸಿರು ಮಿಶ್ರಿತ ಚಿನ್ನದ ಜರಿ ಅಂಚಿನ ಬಿಳಿಯ ಸೀರೆ ಉಟ್ಟಿದ್ದ ಮೋಹಕ ಯುವತಿಯೊಬ್ಬಳು ಕೊಟ್ಟ ಹಣ್ಣಿನ ರಸವನ್ನು ಕುಡಿದ ನಂತರ ನಮಗಾಗಿ ಕಾದಿರಿಸಿದ್ದ ಕೊಠಡಿಗೆ ಹೋದೆವು. ಅದೇನು ರಾಜವೈಭವ ಅಂತೀರಿ ಈ ರಿಸಾರ್ಟು! ಕೊಠಡಿಯ ಬಾಲ್ಕನಿಯಿಂದ ಕೇರಳದ ಪ್ರಕೃತಿ ಸೌಂದರ್ಯ ಉಸಿರು ಸಿಕ್ಕಿಕೊಳ್ಳುವಷ್ಟು ಮೋಹಕವಾಗಿತ್ತು. ದೂರದಲ್ಲಿ ಹಸಿರು ಹೊದ್ದ ಬೆಟ್ಟಗಳು, ಅವುಗಳ ಮುಂದೆ ವಿಶಾಲವಾದ ಹರಹಿನ ಸರೋವರ, ರಿಸಾರ್ಟಿನ ಆವರಣದಲ್ಲಿ ತುಂಬಿ ತುಳುಕುತ್ತಿದ್ದ ಹಣ್ಣಿನ ಮರಗಳು, ಬಹು ಚೆನ್ನಾಗಿ ಆಲೋಚಿಸಿ ನಿರ್ಮಿಸಿದ್ದ ಕಾಟೇಜುಗಳು ಇವನ್ನೆಲ್ಲ ಮತ್ತೊಮ್ಮೆ ನೋಡುವ ಅವಕಾಶ ಸಿಕ್ಕಿದ್ದು ಬಹು ಸಂತಸಕರವಾಗಿತ್ತು.

ನಾವೆಲ್ಲರೂ ರಿಸಾರ್ಟಿನ ಹಜಾರದಲ್ಲಿ ಕುಳಿತಾಗ ನಮ್ಮೊಂದಿಗೆ ಬಿಳಿಯ ಸಫಾರಿ ಸೂಟ್ ಧರಿಸಿದ್ದ ಚೂಟಿ ತರುಣನೊಬ್ಬನೂ ಇದ್ದ. ಉನ್ನಿ ಅವನನ್ನು ನಮಗೆ ಪರಿಚಯಿಸುತ್ತಾ, 'ಇವರು ಇನ್ಸ್‌ಪೆಕ್ಟರ್ ರವೀಂದ್ರನ್. ಇಲ್ಲಿನ ಪೋಲೀಸ್ ಮುಖ್ಯಸ್ಥರು. ನನಗೆ ಇವರ ತಂದೆಯವರದ್ದು ಬಹುದಿನಗಳ ಪರಿಚಯ. ನನಗೆ ಸಹಾಯ ನೀಡಲು ಖಾಸಗಿಯಾಗಿ ಇಲ್ಲಿ ಬಂದಿದ್ದಾರೆ' ಎಂದ. ರವೀಂದ್ರನ್ ಶರಲೇಖನನ್ನು ಕುರಿತು 'ನಿಮ್ಮ ಬಗ್ಗೆ ಬಹುವಾಗಿ ಕೇಳಿದ್ದೇನೆ. ನಿಮ್ಮನ್ನು ಭೇಟಿಯಾಗಿದ್ದು ನನ್ನ ಸೌಭಾಗ್ಯ' ಎಂದ ನಂತರ ನಾವೆಲ್ಲಾ ಅಲ್ಲಿನ ಡೈನಿಂಗ್ ಹಾಲ್‌ನ ಮೇಜೊಂದರ ಸುತ್ತ ಕುಳಿತೆವು. ಉನ್ನಿ ನೇರವಾಗಿ ವಿಷಯಕ್ಕೆ ಬಂದ. 'ಮೊನ್ನೆ ಸಂಜೆ ಈ ಹಜಾರದಲ್ಲಿರುವ ಷೋಕೇಸಿನಿಂದ ಒಂದು ಅತ್ಯಮೂಲ್ಯ ಪಿಂಗಾಣಿ ಹೂಜಿಯೊಂದು ಕಾಣೆಯಾಗಿದೆ. ಅದು ನಮ್ಮ ವಂಶಕ್ಕೆ ತಲತಲಾಂತರಗಳಿಂದ ಬಳುವಳಿಯಾಗಿ ಬಂದ ಹೂಜಿ. ನಮ್ಮ ಪೂರ್ವಜರೊಬ್ಬರು ಟಿಪ್ಪುವಿನ ಪದಾತಿ ದಳದಲ್ಲಿ ಅಧಿಕಾರಿಯಾಗಿದ್ದರಂತೆ. ಅವರ ಶೌರ್ಯಕ್ಕೆ ಮೆಚ್ಚಿ ಟಿಪ್ಪು ಅವರಿಗೆ ಈ ಹೂಜಿಯನ್ನು ಕಾಣಿಕೆಯನ್ನಾಗಿ ನೀಡಿದ್ದನಂತೆ. ನಮ್ಮ ರಿಸಾರ್ಟಿಗೊಂದು ಹೆಮ್ಮೆ ತರುವ ವಿಷಯವೆಂದು ಅದನ್ನು ಇಲ್ಲಿನ ಷೋಕೇಸಿನಲ್ಲಿ ಇರಿಸಿದ್ದೆ. ಒಂದು ಸಣ್ಣ ಫಲಕದಲ್ಲಿ ಅದರ ಚರಿತ್ರೆಯನ್ನೂ ಬರೆದು ಇಟ್ಟಿದ್ದೆ. ಈಗ ಅದು ಕಾಣೆಯಾಗಿರುವುದು ನನಗೊಂದು ದೊಡ್ಡ ಆಘಾತವಾಗಿದೆ' ಎಂದ ಉನ್ನಿ.

'ನೇರವಾಗಿ ಇದೊಂದು ಪೋಲೀಸ್ ಕೇಸ್ ಅಲ್ಲವೇ? ಖಾಸಗೀ ಪತ್ತೇದಾರಿ ಕೆಲಸಕ್ಕೆ ಅಗತ್ಯವಾದರೂ ಏನು?' ಶರಲೇಖನ ಪ್ರಶ್ನೆ.

ಉನ್ನಿ ಮತ್ತು ರವೀಂದ್ರನ್ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಅನಂತರ ಉನ್ನಿ ಹೇಳಲು ಪ್ರಾರಂಭಿಸಿದ 'ನೋಡಿ, ಪೋಲೀಸರು ಎಂದ ತಕ್ಷಣ ಹೊಟೇಲಿನ ಎಲ್ಲಾ ಅತಿಥಿಗಳನ್ನು ತಪಾಸಣೆ ಮಾಡಲು ಪ್ರಾರಂಭಿಸುತ್ತಾರೆ. ನಮ್ಮ ಅತಿಥಿಗಳೆಲ್ಲಾ ಶ್ರೀಮಂತ ವರ್ಗದವರು. ಇಂತಹ ತನಿಖೆಗಳನ್ನು ನೋಡಿಯೇ ನಮ್ಮಿಂದ ದೂರ ಉಳಿಯುತ್ತಾರೆ. ಮತ್ತೆ ನಮ್ಮಲ್ಲಿಗೆ ಬರುವ ಸಾಧ್ಯತೆಯೇ ಮಾಯವಾಗುತ್ತದೆ. ಅದಕ್ಕೇ ನಾನು ಈ ರವಿಂದ್ರನಿಂದ ಖಾಸಗಿಯಾಗಿಯೇ ಸಹಾಯ ಕೇಳಿದೆ. ನೀನು ಅವನೊಂದಿಗೆ ನಿಂತರೆ ಯಶಸ್ಸು ಖಂಡಿತ ಅಂತ ನಿನ್ನನ್ನು ಕರೆದೆ'

ಎಂದು ಹೇಳಿ ಉನ್ನಿ ತನ್ನ ಸ್ಮಾರ್ಟ್ ಫೋನಿನಲ್ಲಿದ್ದ ಆ ಹೂಜಿಯ ಇಮೇಜನ್ನು ನಮ್ಮ ಮುಂದೆ ಇರಿಸಿದ. ಬಿಳಿಯ ಪಿಂಗಾಣಿಯ ಮೇಲೆ ಕಡು ನೀಲಿ ಬಣ್ಣದ ಗೆರೆಗಳಿಂದ ಚಿತ್ತಾರವಾಗಿ ಅಲಂಕರಿಸಲ್ಪಟ್ಟ ಸುಮಾರು ಒಂದು ಅಡಿ ಎತ್ತರದ ಹೂಜಿಯಾಗಿತ್ತು ಅದು. ಅದರ ಮುಂದಿದ್ದ ಹೊಳೆಯುತ್ತಿದ್ದ ಹಿತ್ತಾಳೆಯ ಫಲಕದ ಮೇಲೆ ಅದರ ಹಿರಿಮೆಯನ್ನು ಇಂಗ್ಲೀಷಿನಲ್ಲಿ ನಮೂದಿಸಿತ್ತು.

'ಸರಿ, ಇನ್ನು ನಮ್ಮ ತಪಾಸಣೆ ಪ್ರಾರಂಭಿಸೋಣ. ಮೊದಲು ನೌಕರರ ವಿಚಾರಣೆ, ಹೂಜಿ ಇದ್ದ ಜಾಗದ ಸೂಕ್ಷ್ಮ ಪರಿಶೀಲನೆ ಇತ್ಯಾದಿ. ವತ್ಸನ ನೀನು ರೂಮಿಗೆ ಹೋಗಿ ಆರಾಮ ಮಾಡು. ಸಂಜೆ ಊಟದ ವೇಳೆಗೆ ಸಿಗೋಣ ಎನ್ನುತ್ತಾ ಶರಲೇಖ ರವೀಂದ್ರನೊಡನೆ ಹೊರಟುಹೋದ. ಉನ್ನಿ ನನ್ನನ್ನು ನನ್ನ ರೂಮಿನತ್ತ ಕರೆದೊಯ್ದ. ಒಂದು ಹತ್ತು ನಿಮಿಷಗಳ ನಂತರ ಉನ್ನಿ ನನಗೆ ಫೋನ್ ಮಾಡಿ, 'ಈಗಿನ್ನೂ ನಾಲ್ಕು ಗಂಟೆ. ಸಂಜೆ ಐದರ ಹೊತ್ತಿಗೆ ನೀವು ರೆಡಿಯಾದರೆ ನಮ್ಮ ಕಸ್ಟಮರ್ ರಿಲೇಷನ್ಸ್ ಅಧಿಕಾರಿ ನಿಮ್ಮನ್ನು ಇಲ್ಲೇ ಹತ್ತಿರ ಇರುವ ಸುಪ್ರಸಿದ್ಧ ಬಾಣಾಸುರ ಮಣ್ಣಿನ ದಂಡೆ ನೋಡಲು ಕರೆದೊಯ್ಯುತ್ತಾರೆ. ಸಂಜೆ ಅಲ್ಲಿ ಅಡ್ಡಾಡಲು ಬಹು ಚೆನ್ನ. ಹೇಗೂ ಇವತ್ತು ಮಳೆ ಇಲ್ಲವಲ್ಲ' ಎಂದು ಹೇಳಿದ. ಅನಂತರ ನಾನು ಒಂದು ಗಂಟೆ ಮಲಗಿ ಎದ್ದು ರೂಮಿನ ಬಾಲ್ಕನಿಯಲ್ಲಿ ನಿಂತೆ. ಇಡೀ ರಿಸಾರ್ಟನ್ನು ಒಂದು ಇಳಿಜಾರಿನ ಮೇಲೆ ಕಟ್ಟಿದ್ದರು. ಎಲ್ಲ ಕಾಟೇಜುಗಳೂ ವಿವಿಧ ಮಟ್ಟಗಳಲ್ಲಿದ್ದವು. ದೂರದಲ್ಲಿ ಕೆಳಗೆ ಒಂದು ಇನ್ಫಿನಿಟಿ ಈಜುಕೊಳ ಬೇರೆ. ಎಲ್ಲೆಲ್ಲೂ ಕಿತ್ತಳೆ ಸೀಬೆ ಗಿಡಗಳದ್ದೇ ಸಾಮ್ರಾಜ್ಯ. ಅಷ್ಟರಲ್ಲಿ ರೂಮಿನ ಕರೆಘಂಟೆ ಟ್ರಣ್ ಗುಟ್ಟಿತು. ನಾನು 'ಕಮ್ ಇನ್' ಎನ್ನುತ್ತಾ ಹೋಗಿ ಬಾಗಿಲು ತೆಗೆದೆ. ಬಾಗಿಲಲ್ಲಿ ಒಬ್ಬ ತರುಣಿ ನಿಂತಿದ್ದಳು. ಅವಳ ಹಿನ್ನೆಲೆಯಲ್ಲಿ ದೂರ ದಿಗಂತದ ನೀಲಿ ಪರ್ವತ ಶ್ರೇಣಿ. ಅದರ ಮೇಲಿನ ತೆಳುನೀಲಿ ಆಗಸ. ಫೋರ್ ಗ್ರೌಂಡಿನಲ್ಲಿ ಅದೇ ಆಗಸದಿಂದ ಇಳಿದುಬಂದಂತೆ ಕಾಣುತ್ತಿದ್ದ ಮೋಹಕ ಯುವತಿ. ಮಧ್ಯಾಹ್ನ ನೋಡಿದ ರಿಸೆಪ್ಷನ್ ತರುಣಿಯಂತೆ ಈಕೆಯೂ ಹಸಿರು ಮಿಶ್ರಿತ ಚಿನ್ನದ ಜರಿ ಅಂಚಿನ ಬಿಳಿಯ ಸೀರೆ ಉಟ್ಟಿದ್ದಳು.

ನನ್ನನ್ನು ನೋಡಿ ಆಕೆ ನಸುನಗುತ್ತಾ, 'ನಾನು ಸುಚಿತ್ರಾ, ಇಲ್ಲಿನ ಕಸ್ಟಮರ್ ರಿಲೇಷನ್ಸ್ ಆಫೀಸರ್. ನಿಮ್ಮನ್ನು ಬಾಣಾಸುರ ಮಣ್ಣಿನ ದಂಡೆಗೆ ಕರೆದೊಯ್ಯಲು ಬಂದಿರುವೆ' ಎಂದು ಹೇಳಿದಳು. ಅಬ್ಬ ಈ ಕೇರಳದ ಕನ್ಯೆಯರ ರೂಪವೇ ರೂಪ! ಅಷ್ಟೇ ಅಲ್ಲ, ಅವರುಗಳ ಗತ್ತು, ದಿಟ್ಟತನ, ವ್ಯಕ್ತಿತ್ವ ಇವೆಲ್ಲವೂ ಒಂದು ಬೇರೆಯದೇ ಆದ ಲೋಕಕ್ಕೆ ಸೇರಿದವು ಎಂಬುದರಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಇಂತಹ ಆಘಾತಗಳನ್ನು ಸುಲಲಿತವಾಗಿ ಎದುರಿಸಬಲ್ಲ ಇಳಿವಯಸ್ಸನ್ನು ದೇವರು ದಯಪಾಲಿಸಿದ್ದಾನಲ್ಲಾ ಎಂದುಕೊಳ್ಳುತ್ತಾ 'ಸೋ ನೈಸ್ ಆಫ್ ಯು ಸುಚಿತ್ರಾ, ಐದು ನಿಮಿಷದಲ್ಲಿ ನಾನು ರಿಸೆಪ್ಷನ್ ಹಾಲಿಗೆ ಬರುವೆ' ಎಂದು ಆಶ್ವಾಸನೆ ನೀಡಿ ಅವಳನ್ನ ಕಳಿಸಿದೆ.

ಸಂಜೆ ಆ ಅಪ್ಸರೆಯೊಂದಿಗೆ ನನ್ನ ಬಾಣಾಸುರ ದಂಡೆಯ ವಾಯುವಿಹಾರ ಮುಗಿದು ರೂಮಿಗೆ ಬರುವ ಹೊತ್ತಿಗೆ ಎಂಟು ಗಂಟೆ ಆಗಿತ್ತು. ಶರಲೇಖ ನನಗಾಗಿ ಕಾಯುತ್ತಿದ್ದ. ನನ್ನನ್ನು ನೋಡಿದ ತಕ್ಷಣ 'ಈಗ ಅರ್ಜೆಂಟಾಗಿ ಇಲ್ಲಿಂದ ಹೊರಡಬೇಕು. ಊಟಕ್ಕೆ ಸಮಯವಿಲ್ಲ, ದಾರಿಗೆಂದು ಉನ್ನಿ ಸ್ಯಾಂಡ್‌ವಿಚ್ ಪ್ಯಾಕೆಟ್ ಕೊಟ್ಟಿದ್ದಾನೆ' ಎಂದು ನನ್ನನ್ನು ಅವಸರಿಸಿದ. ಅಷ್ಟು ಹಿತವಾದ ವಾಯುವಿಹಾರದ ನಂತರ ಈ ಊಟವಿಲ್ಲದ ಪ್ರಯಾಣವೇ ಅಂತ ನನಗೇನೂ

ಪಿಚ್ಚೆನಿಸಲಿಲ್ಲ. (ಕಳೆದ ಒಂದು ತಿಂಗಳಿನಿಂದ ನಾನು ಈಶ್ವರ ಪ್ರಸಾದ ಭಾವವನ್ನು ಅನುಷ್ಠಾನ ಮಾಡಲು ಯತ್ನಿಸುತ್ತಿರುವೆ) ನಿರ್ಲಿಪ್ತತೆಯಿಂದ ಶರಲೇಖನೊಂದಿಗೆ ಹೊರಟೆ. ರವೀಂದ್ರನೂ ನಮ್ಮೊಂದಿಗೆ ಬರುವವನಿದ್ದ.

ದಾರಿಯಲ್ಲಿ ಶರಲೇಖ ಮತ್ತು ರವೀಂದ್ರ ಇಬ್ಬರೂ ಮೌನ ತಾಳಿದ್ದರು. ಅವರಿಗೆ ತೊಂದರೆ ಕೊಡಲು ನನಗೂ ಮನಸ್ಸು ಬರಲಿಲ್ಲ. ನಮ್ಮ ವಾಹನ ಪುನಃ ಕರ್ನಾಟಕದ ದಿಕ್ಕಿನಲ್ಲೇ ಹೊರಟಿತ್ತು. ಬೆಳಗಿನ ಜಾವ ಮೂರು ಗಂಟೆಯ ಹೊತ್ತಿಗೆ ನಾವು ನಾಗರ ಹೊಳೆಯಲ್ಲಿನ ಒಂದು ರಿಸಾರ್ಟಿನ ಗೇಟಿನ ಮುಂಭಾಗದಲ್ಲಿ ನಿಂತಿದ್ದೆವು. ರವೀಂದ್ರನನ್ನು ನೋಡಿದ ತಕ್ಷಣ ಅಲ್ಲಿನ ವಾಚ್‌ಮನ್ ಗೇಟನ್ನು ತೆಗೆದ. ನೇರವಾಗಿ ನಾವು ರಿಸಾರ್ಟಿನ ಮ್ಯಾನೇಜರಿನ ಕಾಟೇಜಿಗೆ ಹೊರಟೆವು. ಶರಲೇಖ ನನ್ನನ್ನು ಕುರಿತು ಈಗ ನಿನ್ನನ್ನ ನಿನ್ನ ರೂಮಿಗೆ ಕರೆದೊಯ್ಯಲು ಹೇಳುತ್ತೇನೆ. ಮುಂದಿನ ವಿದ್ಯಮಾನಗಳಿಗೆ ಸಾಕ್ಷಿಗಳಿಲ್ಲದಿದ್ದರೇ ಒಳಿತು' ಎಂದು ಹೇಳಿದ ನಂತರ ಒಬ್ಬ ರೂಮ್ ಬಾಯ್ ನನ್ನ ಸೂಟ್‌ಕೇಸನ್ನು ಕೈಯ್ಯಲ್ಲಿ ಹಿಡಿದು ನನ್ನನ್ನು ಒಂದು ಪುಟ್ಟ ಕಾಟೇಜಿಗೆ ಕರೆದೊಯ್ದ. ಪ್ರಯಾಣದ ಗಾಬರಿಯಲ್ಲಿ ನಾನು ಸ್ಯಾಂಡ್‌ವಿಚ್ ತಿನ್ನುವುದನ್ನೂ ಮರೆತಿದ್ದೆ. ಕಾಫಿಶಾಪಿಗೆ ಫೋನ್ ಮಾಡಿ ಬಿಸಿ ಬಿಸಿ ಕಾಫಿ, ಸ್ಯಾಂಡ್‌ವಿಚ್ ಆರ್ಡರ್ ಮಾಡಿ ಮಲಗಲು ಅಣಿಯಾದೆ.

ಬೆಳಗ್ಗೆ ಎದ್ದಾಗ ಏಳೂವರೆ. ಶರಲೇಖನ ಸುಳಿವೇ ಇರಲಿಲ್ಲ. ಅವನೊಂದಿಗೆ ಬಂದಾಗ ಇವೆಲ್ಲಾ ಮಾಮೂಲು ಅಂದುಕೊಂಡು ರೆಸಾರ್ಟಿನ ತೋಟದಲ್ಲೇ ವಾಕಿಂಗ್ ಮುಗಿಸಿದೆ. ಅನಂತರ ಸ್ನಾನಮಾಡಿ ಬೆಳಗಿನ ಉಪಹಾರಕ್ಕೆ ಗೋಲ್ ಘರ್‌ಗೆ ಬಂದಾಗ ರಿಸಾರ್ಟಿನ ಅತಿಥಿಗಳೆಲ್ಲಾ ತಂಡ ತಂಡವಾಗಿ ಜೀಪುಗಳಲ್ಲಿ ಸಫಾರಿಗೆ ಹೊರಟಿದ್ದರು. ತಿಂಡಿ ಸಮಯದಲ್ಲೂ ಶರಲೇಖ ಕಾಣಿಸಲಿಲ್ಲ. ತಿಂಡಿ ಮುಗಿಸಿ ರೂಮಿಗೆ ಹೋಗಿ ಪೇಪರ್ ಓದಲು ಶುರುಹಚ್ಚಿದೆ. ಹತ್ತೂವರೆಗೆ ರಿಸಾರ್ಟಿನ ಮ್ಯಾನೇಜರ್ ನನ್ನ ಕಾಟೇಜಿಗೆ ಬಂದ. 'ನೀವು ಈ ಕ್ಷಣವೇ ವೇನಾಡಿನ ರಿಸಾರ್ಟಿಗೆ ಹಿಂತಿರುಗಬೇಕು ಅಂತ ಶರಲೇಖ ಹೇಳಿದ್ದಾರೆ. ನಿಮ್ಮೊಂದಿಗೆ ನಮ್ಮ ರಿಸಾರ್ಟಿನ ಇಬ್ಬರು ನೌಕಕರೂ ಬರುತ್ತಾರೆ. ಶರಲೇಖ ಮತ್ತು ರವೀಂದ್ರನ್ ಮತ್ತೊಂದು ವಾಹನದಲ್ಲಿ ಬರುವರಂತೆ. ತ್ವರೆ ಮಾಡಿ ಹೊರಡಬೇಕು' ಅಂತ ಮ್ಯಾನೇಜರ್ ಅವಸರ ಪಡಿಸಿದ. ಅವನ ದನಿಯಲ್ಲಿ ಆತಂಕದ ಛಾಯೆಯನ್ನು ಗುರುತಿಸಿದೆ.

ನಾನು ಇನ್ನೋವಾ ಹತ್ತಿದಾಗ ರಿಸಾರ್ಟಿನ ನೌಕರರಿಬ್ಬರು ಆಗಲೇ ಹತ್ತಿ ಕುಳಿತಿದ್ದರು. ಒಬ್ಬ ಸ್ವಲ್ಪ ವಯಸ್ಸಾದವನು. ಇನ್ನೊಬ್ಬ ತರುಣ. ಇಬ್ಬರೂ ರಿಸಾರ್ಟಿನ ಯೂನಿಫಾರಂ ತೊಟ್ಟಿದ್ದರು. ವಯಸ್ಸಾದವನು ಸ್ವಲ್ಪ ಮೊದ್ದನಂತೆ ಕಾಣುತ್ತಿದ್ದ. ವಿಚಿತ್ರ ಮುಖಗಳನ್ನು ಮಾಡುತ್ತಾ ಕುಳಿತಿದ್ದ. ಚಿಕ್ಕವನು ಷೋಕಿನ ಆಸಾಮಿ. ಕಪ್ಪು ಕನ್ನಡಕ ಧರಿಸಿದ್ದ ಅವನ ಜಂಭ ಹೇಳುಕ್ಕಿಲ್ಲ. ನನ್ನ ಕಡೆ ತಿರುಗಿಯೂ ನೋಡಲಿಲ್ಲ. 'ನನಗೇನಾಗಬೇಕು. ರಿಸಾರ್ಟ್ ಸೇರಿದರೆ ಸಾಕು' ಅಂದುಕೊಂಡು ನಾನು ಪುಸ್ತಕ ಓದುತ್ತಾ ಕುಳಿತೆ. ಸುಲ್ತಾನ್ ಬತೇರಿಗೆ ಸ್ವಲ್ಪ ಮುಂಚೆಯೇ ಕರ್ನಾಟಕದ ಎಲ್ಲೆಯನ್ನು ನಾವು ದಾಟಿದೆವು. ಮುಂದಿನ ಡಾಬಾದಲ್ಲಿ ಡ್ರೈವರ್ ಕಾಫಿಗಾಗಿ ನಿಲ್ಲಿಸಿದ. ನಾನು ನಮ್ಮ ಸಹಪ್ರಯಾಣಿಕರ ಕಡೆ ಕಣ್ಣೆತ್ತಿಯೂ ನೋಡದೆ, ಡಾಬಾ ಕಡೆ ನಡೆದೆ. ಕಾಫಿ ಕುಡಿದು ವಾಹನಕ್ಕೆ ಹಿಂತಿರುಗಿದಾಗ ನನ್ನ ಕಣ್ಣುಗಳನ್ನು ನಾನೇ ನಂಬದಾದೆ. ನನ್ನ ಸಹ ಪ್ರಯಾಣಿಕರ ಜಾಗದಲ್ಲಿ ಶರಲೇಖ ಮತ್ತು ರವೀಂದ್ರನ್ ಕುಳಿತಿದ್ದರು. 'ಅರೆ , ನೀವು? ಇಲ್ಲಿ?' ಅಂತ ನಾನು

ಬಡಬಡಿಸಿದೆ. 'ಸ್ವಲ್ಪ ತಡೆದುಕೋ ವೇನಾಡ್ ಸೇರಿದ ನಂತರ ಎಲ್ಲವನ್ನು ವಿವರಿಸುವೆ' ಎನ್ನುತ್ತಾ ಶರಲೇಖ ರವೀಂದ್ರನತ್ತ ನೋಡಿದ. ಆತ ಮೆಲುನಗೆ ನಕ್ಕ.

ವೇನಾಡಿನ ರಿಸಾರ್ಟಿನ ಡೈನಿಂಗ್ ಹಾಲ್ ಮೇಜೊಂದರ ಸುತ್ತ ನಾವೆಲ್ಲರೂ ಕುಳಿತಿದ್ದೆವು. ಉನ್ನಿ ಉತ್ಸುಕನಾಗಿದ್ದರೂ ಮುಖದಲ್ಲಿ ಆತಂಕದ ಛಾಯೆ ಮಾಯವಾಗಿರಲಿಲ್ಲ. 'ಕಳುವಾದ ಹೂಜಿಯ ಬಗ್ಗೆ ಏನಾದರೂ ಸುಳಿವು ಸಿಕ್ಕಿತೇ?' ಎಂದು ಆತ ಕಾತರದಿಂದ ಕೇಳಿದ.

'ಹೂಜಿಯೇ? ಕಳುವಾಯಿತೇ? ಅದು ಹೇಗೆ ಹೇಳುವೆ? ಅದು ಇದ್ದಲ್ಲೇ ಇದೆಯಲ್ಲಾ' ಅಂತ ಶರಲೇಖ ಉದ್ಗರಿಸಿದ. ಉನ್ನಿ ಹಿಂದೆ ಇದ್ದ ಷೋಕೇಸಿನ ಕಡೆ ಕಣ್ಣು ಹಾಯಿಸಿದ. ಅವನ ಅತ್ಯಮೂಲ್ಯ ಹೂಜಿ ಮಧ್ಯದ ಅಂತಸ್ತಿನಲ್ಲಿ ಭದ್ರವಾಗಿ ಕುಳಿತಿತ್ತು. ಉನ್ನಿ ಎದ್ದು ಓಡಿಹೋಗಿ ಅದನ್ನು ಕೈಯಿಂದ ಎತ್ತಿ ನೋಡಿ ಆನಂದಿಸಿ, 'ಈಗ ಹೇಳಿ ಈ ಪವಾಡ ನಡೆದಿದ್ದಾದರೂ ಹೇಗೆ?' ಅಂತ ಕೇಳಿದ.

ಶರಲೇಖ ತನ್ನ ವಿವರಣೆ ಪ್ರಾರಂಭಿಸಿದ.

'ಅದೊಂದು ದೊಡ್ಡ ಕಥೆ. ಕೆಲವು ಮುಖ್ಯ ಅಂಶಗಳನ್ನ ಹೇಳ್ತೀನಿ. ತಪಾಸಣೆ ಪ್ರಾರಂಭದಲ್ಲೇ ಷೋಕೇಸಿನ ಬೀಗದಕೈ ಕಾಣೆಯಾಗಿರುವುದು ಗೊತ್ತಾಯಿತು. ಸಾಮಾನ್ಯವಾಗಿ ರಿಸೆಪ್ಷನಿಸ್ಟ್ ಹತ್ತಿರ ಇರಬೇಕಾದ ಕೀಲಿ ಅಲ್ಲಿ ಇರಲಿಲ್ಲ. ಅನಂತರ ಕಳುವಿನ ಮಾರನೆಯ ಬೆಳಗ್ಗೆ ಚೆಕ್ ಔಟಾದ ಅತಿಥಿಗಳ ಪಟ್ಟಿ ನೋಡಿದೆ. ಮೂರು ಕಾಟೇಜುಗಳು ಖಾಲಿಯಾಗಿದ್ದವು ಆ ಬೆಳಗ್ಗೆ. ಅದರಲ್ಲಿ ಮುಖ್ಯವಾದದ್ದು ಇಂಗ್ಲೆಂಡಿನ ಕ್ರಾಫರ್ಡ್ ದಂಪತಿಗಳ ಹೆಸರು. ಅವರು ಇಂಡಿಯಾದ ಆ್ಯಂಟೀಕ್‌ಗಳ ಬಗ್ಗೆ ಬಹು ಆಸಕ್ತರೆಂದು ನನಗೆ ಮೊದಲಿನಿಂದ ತಿಳಿದಿತ್ತು. ಅವರೇನಾದರೂ ಈ ಸಾಹಸಕ್ಕೆ ಕೈ ಹಾಕಿದ್ದರೆ ಖಂಡಿತವಾಗಿ ಅವರಿಗೆ ಇಲ್ಲಿನ ಸಿಬ್ಬಂದಿ ಯಾರಾದರೂ ಸಹಾಯ ಮಾಡಿರಲೇಬೇಕು ಅಂತ ನಾನು ಮತ್ತು ರವೀಂದ್ರ ತೀರ್ಮಾನಿಸಿದೆವು. ಅವರೊಂದಿಗೆ ಬಹು ಸಲುಗೆಯಿಂದ ಓಡಾಡಿಕೊಂಡಿದ್ದ ಸಿಬ್ಬಂದಿಯೆಂದರೆ ಕಸ್ಟಮರ್ ರಿಲೇಷನ್ಸ್‌ನ ಸುಚಿತ್ರಾ. ಅವಳ ಆಫೀಸ್ ರೂಮನ್ನು ಅವಳಿಗೆ ಗೊತ್ತಾಗದಂತೆ ತಲಾಷ್ ಮಾಡಬೇಕಾದರೆ ಅವಳನ್ನು ಬೇರೆಲ್ಲಾದರೂ ಕಳುಹಿಸಬೇಕಾಗಿತ್ತು. ಆಗಲೇ ಉನ್ನಿ ಅವಳನ್ನು ನಿನ್ನೊಂದಿಗೆ ಬಾಣಾಸುರ ಮಣ್ಣಿನ ದಂಡೆಗೆ ಕಳುಹಿಸುವ ಸನ್ನಾಹ ಮಾಡಿದ್ದು. ಅವಳು ಹೊರಟ ಮೇಲೆ ಅವಳ ರೂಮನ್ನು ಹುಡುಕಿದಾಗ ಷೋಕೇಸಿನ ಕೀಲಿ ಅಲ್ಲಿ ಸಿಕ್ಕಿತು. ಅಲ್ಲದೇ ಕ್ರಾಫರ್ಡ್ ಅವಳಿಗೆ ಕೊಟ್ಟಿದ್ದ ಆಭರಣದ ಉಡುಗೊರೆ ಬಾಕ್ಸಿನ ಮೇಲೆ 'ಸುಚಿತ್ರಾಗೆ ನೆನಪಿನ ಕಾಣಿಕೆ' ಎಂಬ ಕಾರ್ಡೂ ಇತ್ತು. ಸರಿ ಇನ್ನು ನಮ್ಮ ಕ್ರಾಫರ್ಡ್‌ನನ್ನು ಹುಡುಕುವ ಕೆಲಸ ಅತ್ಯಂತ ಜರೂರಾಯಿತು. ಅವನು ಇಲ್ಲಿಂದ ನಾಗರಹೊಳೆಯಲ್ಲಿನ ರಿಸಾರ್ಟೊಂದಕ್ಕೆ ಹೋಗಿರುವುದು ತಿಳಿದು ಅಲ್ಲಿಗೆ ದೌಡಾಯಿಸಿದೆವು. ಅಲ್ಲಿನ ಮ್ಯಾನೇಜರ್ ಉನ್ನಿಯ ಆಪ್ತ ಸ್ನೇಹಿತ. ಹಾಗಾಗಿ ಅವನಿಂದ ಎಲ್ಲ ಸಹಕಾರ ದೊರಕಿತು. ಅಲ್ಲಿಗೆ ಹೋದ ನಂತರ ನಾವಿಬ್ಬರೂ ರಿಸಾರ್ಟ್‌ನ ರೂಮ್ ಬಾಯ್‌ಗಳಂತೆ ವೇಷ ಧರಿಸಿ ಕ್ರಾಫರ್ಡ್ ದಂಪತಿಗಳು ಸಫಾರಿಗೆ ಹೊರಡುವುದನ್ನೇ ಕಾಯುತ್ತಿದ್ದೆವು. ಅವರು ಅತ್ತ ಹೊರಟ ನಂತರ ನಾವು ಅವನ ಕಾಟೇಜನ್ನು ತಲಾಷ್ ಮಾಡಿದಾಗ ಹೂಜಿ ಬಹು ಸುಲಭವಾಗಿಯೇ ದೊರಕಿತು. ಇನ್ನು ಅಲ್ಲಿಂದ ಹೊರಡುವ ಸನ್ನಾಹ. ಅಲ್ಲಿನ ಮ್ಯಾನೇಜರ್ 'ಕರ್ನಾಟಕ ಗಡಿಯನ್ನು ದಾಟುವವರೆಗೂ ನಿಮ್ಮ

ಛದ್ಮವೇಷದಲ್ಲೇ ಇರಿ. ನಿಮ್ಮ ಗುರುತು ಯಾರಿಗಾದರೂ ತಿಳಿದರೆ ಮುಂದೆ ಕಷ್ಟವಾಗಬಹುದು ಎಂದು ಎಚ್ಚರಿಕೆ ನೀಡಿದ್ದರಿಂದ ನಾವು ಗಡಿ ದಾಟುವವರೆಗೆ ನಮ್ಮ ವೇಷ ಬದಲಿಸಲಿಲ್ಲ. ಇಲ್ಲಿಗೆ ಬಂದನಂತರ ಹೂಜಿಯನ್ನು ತನ್ನ ಸ್ವಸ್ಥಾನದಲ್ಲಿರಿಸಿ ನಿನಗೆ ಸರ್ಪ್ರೈಸ್ ಮಾಡುವ ಎಂದು ಆಲೋಚಿಸಿ ಹೀಗೆ ಮಾಡಿದೆ' ಎಂದ ಶರಲೇಖ.

'ಕ್ರಾಫರ್ಡ್ ಪೋಲೀಸ್ ಕಂಪ್ಲೇಂಟ್ ಕೊಡಲ್ಲ ಅಂತ ಏನು ಗ್ಯಾರಂಟಿ?' ಅಂತ ನಾನು ಕೇಳಿದೆ.

'ಯಾವುದೇ ರಿಸಾರ್ಟಿನಲ್ಲಿ ಒಂದು ಫಲಕ ನೀನು ನೋಡಿರಬಹುದು, ನಿಮ್ಮ ಬೆಲೆಬಾಳುವ ವಸ್ತುಗಳನ್ನು ನಮ್ಮ ಲಾಕರಿನಲ್ಲಿಡಿ. ಲಾಕರಿನಲ್ಲಿಡದ ವಸ್ತುಗಳು ಕಾಣೆಯಾದರೆ ನಾವು ಜವಾಬ್ದಾರರಲ್ಲ. ನಾಗರಹೊಳೆ ರಿಸಾರ್ಟಿನವರಿಗೆ ಏನೂ ಭಯವಿಲ್ಲ. ಅಲ್ಲದೇ ಪೋಲೀಸಿನವರ ಬಳಿ ಹೋಗಬೇಕಾದರೆ ಕಳುವಾದ ಮಾಲು ನಿಮ್ಮದು ಅಂತ ಮೊದಲು ಸಾಬೀತುಪಡಿಸಬೇಕಾಗುತ್ತೆ' ಎಂದು ರವೀಂದ್ರನ್ ಉತ್ತರಿಸಿದ.

ಅಂದು ರಾತ್ರಿ ಊಟಕ್ಕೆ ಹೋಗುವಾಗ ಒಮ್ಮೆಲೇ ಬಾಣಾಸುರ ಮಣ್ಣಿನ ದಂಡೆಯ ವಿಹಾರ ನೆನಪಿಗೆ ಬಂತು. ಯಾಕೋ ಊಟ ಸೇರಲಿಲ್ಲ.

❋

## ಬಿದ್ದು ಹೋದ ಘಟ

ಮಹಾತ್ಮಾಗಾಂಧಿಯವರು ಕೊಲೆಪಾತಕನ ಗುಂಡಿಗೀಡಾದಾಗ ಒಂದು ತಿಂಗಳ ಪರ್ಯಂತ ದೇಶಾದ್ಯಂತ ಯಾವ ಕಾರ್ಯಕ್ರಮಗಳೂ ಇರಲಿಲ್ಲ. ಈ ಸಂದರ್ಭದಲ್ಲಿ ಆಕಾಶವಾಣಿ ಸಂಗೀತ ಕಾರ್ಯಕ್ರಮಗಳಲ್ಲಿ ಬರೀ ಭಕ್ತಿ ರಸ ಮತ್ತು ಶೋಕರಸಗಳು ಎದ್ದು ಕಾಣುವಂತಿರಬೇಕು ಎಂಬ ಉದ್ದೇಶದಿಂದ ತಬಲ, ಮೃದಂಗ, ಖಂಜಿರ, ಘಟ ಎಲ್ಲದರ ಉಪಯೋಗ ನಿಂತಿತು. ಕಲಾವಿದರನ್ನು ಕರೆದು ಇನ್ನು ಒಂದು ತಿಂಗಳು ನಿಮಗೂ ನಿಮ್ಮ ಸಂಗೀತ ಉಪಕರಣಗಳಿಗೂ ಕೆಲಸವಿಲ್ಲ. ನೀವು ಮನೆಯಲ್ಲಿರಬಹುದು ಎನ್ನುವ ಸಂದೇಶ ಹೋಯಿತು. ಘಟ ನುಡಿಸುವ ಕಲಾವಿದರು ಸರ್, ನನ್ನ ಘಟ, ಈ ಸಂದರ್ಭದಲ್ಲಿ ಅದೂ ಬೇಡ ಅಂತೀರಾ ಅಂತ ಕೇಳಿದರು. ಆಗ "ಹೋಗ್ರೀ ಹೋಗ್ರೀ ಗಾಂಧೀಜಿಯಂತಹ ಮಹಾನ್ ಘಟವೇ ಬಿದ್ದು ಹೋಗಿರುವಾಗ ನಿಮ್ಮ ಘಟವನ್ನು ಯಾರು ಕೇಳುತ್ತಾರೆ" ಎಂದಾಗ ಇಡೀ ಆಕಾಶವಾಣಿಯಲ್ಲಿ ನಗೆ ತೇಲಿತ್ತು.

# ಕುಮಾರವ್ಯಾಸನ ಉತ್ತರ ಕುಮಾರ ಎಂದರೆ ಕೇವಲ ಹಾಸ್ಯವೇ?

**- ಎಸ್.ಆರ್. ವಿಜಯಶಂಕರ**

ಮಲ್ಲೇಶ್ವರಂನ ಸಂಪಿಗೆ ರೋಡಿನ ಶ್ರೀಕೃಷ್ಣ ಭವನದಲ್ಲಿ ಮಲ್ಲಿಗೆ ಇಡ್ಲಿ ಎಂಬ ಹೊಸ ಪಾಕ ವಿಶೇಷ ಪ್ರಾರಂಭವಾಗಿದೆ ಎಂದು ಪೊಮ್ಮನಿಗೆ ಅವನ ಬಸ್‌ಸ್ಟ್ಯಾಂಡ್ ಮೇಟ್ ಸುರೇಶ ಹೇಳಿದ್ದನಂತೆ. ಸುರೇಶ – ಪೊಮ್ಮ ಇಬ್ಬರೂ ಒಂದೇ ಬಡಾವಣೆ. ಇಬ್ಬರೂ ಬಡಾವಣೆಗಿರುವ ಏಕಮಾತ್ರ ಬಸ್‌ಸ್ಟಾಪ್ ಪ್ಲಸ್ ಬಸ್‌ಸ್ಟ್ಯಾಂಡ್‌ನಲ್ಲಿ ಬೆಳಿಗ್ಗೆ ಬಸ್ಸಿಗೆ ಕಾಯುತ್ತಾರೆ. ಬಸ್ ಟರ್ನ್ ಆಗಿ ಬರುವ ವರೆಗೆ ಅಲ್ಲಿರುವ ಕಲ್ಲು ಬೆಂಚಿನಲ್ಲಿ ಕುಳಿತಿರುತ್ತಾರೆ. ಹಾಗಾಗಿ ಅವರು ಬಸ್‌ಸ್ಟ್ಯಾಂಡ್ ಮೇಟುಗಳು. ಸುರೇಶ ಚಾಲುಕ್ಯ ಹೋಟೆಲ್ ಸ್ಟಾಪಿನಲ್ಲಿಳಿದು ಸೆಂಟ್ರಲ್ ಕಾಲೇಜಿನ ಸಾಹಿತ್ಯ ಅಕಾಡೆಮಿ ಆಫೀಸುವರೆಗೆ ನಡೆದು ಹೋಗಿ ಕಛೇರಿ ಸೇರುತ್ತಾನೆ. ಪೊಮ್ಮ ಕಾರ್ಪೊರೇಷನ್ ಸ್ಟಾಪಿನಲ್ಲಿಳಿದು ಬಸ್ಸು ಬದಲಿಸಿಕೊಂಡು ಕೆಲಸಕ್ಕೆ ಹೋಗುತ್ತಾನೆ.

ನಾಟಿಕೋಳಿ ಮಾಂಸ ಮೆಚ್ಚುವ ಸುರೇಶನೇ ಹೊಗಳಿದ್ದಾನೆ ಎಂದ ಮೇಲೆ ಮಲ್ಲಿಗೆ ಇಡ್ಲಿ ರುಚಿ ನೋಡಲೇಬೇಕು ಎಂದು ಕೃಷ್ಣ ಭವನದ ಎದುರಿರುವ ಪಾರ್ಕಿನಲ್ಲಿ ವಾಕಿಂಗ್ ಶಾಸ್ತ್ರಕ್ಕೊಂದು ಸುತ್ತು ಹಾಕಿ, ನೇರ ಹೋಟೆಲ್‌ಗೆ ನುಗ್ಗಿ ಮೂರು ಪ್ಲೇಟು ಮಲ್ಲಿಗೆ ಇಡ್ಲಿಗೆ ಆರ್ಡರ್ ಕೊಟ್ಟರು.

ರೆಡಿ ಆಗಲು ಐದು ನಿಮಿಷ ಬೇಕೆಂದು ಸಪ್ಲೈಯರ್ ಮಾಣಿ ಹೇಳಿದ್ದರಿಂದ ಅದ್ರಾಮ ಅವನ ಮೊಬೈಲ್‌ನಿಂದ ಸಣ್ಣದೊಂದು ವೀಡಿಯೋ ತೋರಿಸಿದ. ಅಧಿಕಾರಕ್ಕಾಗಿ ಧರ್ಮದ ಹೆಸರಿನಲ್ಲಿ ಹೀಗೂ ಗಲಾಟೆ ಹುಟ್ಟಿಸುವುದಾ ಎಂದು ಜನ ಸಾಮಾನ್ಯನೊಬ್ಬ ನಿರರ್ಗಳವಾಗಿ ರಾಜಕಾರಣಿಗಳನ್ನು ಬೈಯ್ಯುವ ವೀಡಿಯೋದಲ್ಲಿ ಬೈಗುಳಗಳನ್ನು ಮಂತ್ರಾರ್ಚನೆಯೋ ಎಂಬಂತೆ ಹಸನ್ಮುಖಿಯಾಗಿ ಸ್ವೀಕರಿಸುತ್ತಿರುವ ರಾಜಕಾರಣಿಯ ಚಿತ್ರವಿತ್ತು.

''ಒಂದು ಪೀಠಕ್ಕಾಗಿ ಇಷ್ಟೆಲ್ಲಾ ರಾಜಕೀಯ ಮಾಡಬೇಕಾ?'' ಎಂದು ಅದ್ರಾಮ ವೀಡಿಯೋ ಮುಗಿಯುತ್ತಿದ್ದಂತೆ ಕೇಳಿದ.

''ಅವರಿಗೆ ಕುರ್ಚಿ ಹೋಗುವ ಭಯ. ನಿನ್ನ ಕೆಲಸ ಹೋದರೆ ಹೇಗಾದೀತೆಂದು ಊಹಿಸು. ಆಗ ತಿಳಿಯುತ್ತೆ. ಹಾಗಾಗಿ ಬೇಕಾದ್ದು, ಬೇಡದ್ದು – ಎಲ್ಲವೂ ಮಾಡುವುದು ಕುರ್ಚಿಗಾಗಿ, ಮೇಲು ಖರ್ಚಿಗಾಗಿ'' ಎಂದ ಪೊಮ್ಮ ಹೋಟೆಲ್ ಮೇಜಿಗೆ ಸುಮ್ಮನೆ ಬೆರಳಿಂದ ತಬಲೆ ಬಾರಿಸಿದ.

'ನಿನಗೆ ಮಲ್ಲಿಗೆ ಇಡ್ಲಿಯ ನಿರೀಕ್ಷೆಯಲ್ಲಿ ಎಲ್ಲವೂ ಕ್ಷಮ್ಯ' ಎಂದ ಅಪ್ಪಣ್ಣ.

''ಅದಕ್ಕೇ ಹೇಳುವುದು ದೇರಾಜೆಯವರು ಹೇಳಿದ ಕುರ್ಚಿಯೇ ಕುರ್ಚಿ. ಯಾವ ಭಯವೂ ಇಲ್ಲ'' ಎಂದ ಅದ್ರಾಮ.

ಯಕ್ಷಗಾನ ತಾಳ ಮದ್ದಳೆ ಕ್ಷೇತ್ರದಲ್ಲಿ ರಸ ಋಷಿ ಎಂದೇ ಪ್ರಖ್ಯಾತರಾಗಿದ್ದವರು ದೇರಾಜೆ ಸೀತಾರಾಮಯ್ಯ. ಈಗಾಗಲೇ ಅವರ ಜನ್ಮ ಶತಮಾನೋತ್ಸವ ದಾಟಿದ್ದರೂ, ಅವರು ಹಿಂದೆ ಹೇಳಿದ ಮಾತುಗಳು ಜನರ ಬಾಯಿಂದ ಬಾಯಿಗೆ ದಾಟುತ್ತಾ ಇದೆ.

'ದೇರಾಜೆಯವರು ವಿರಾಟಪರ್ವದ ಗೋಗ್ರಹಣ ಪ್ರಸಂಗದಲ್ಲಿ ಉತ್ತರನ ಅರ್ಥ ಹೇಳುವಾಗ ನೋಡು ಬಂದ ಮಾತು. ನನ್ನ ಪೀಠ ಅಂದರೆ ನಿಜವಾಗಿಯೂ ಯಾರೂ ಅಲ್ಲಾಡಿಸಲಾರದ ಭದ್ರ ಪೀಠ. ನಮ್ಮ ಊರಿನ ಶ್ರೇಷ್ಠ ಬಡಗಿಯೇ ಕೀಲು ಹೊಡೆದು ಗಟ್ಟಿಮಾಡಿದ ಇದನ್ನು ಯಾರೂ ಅಲ್ಲಾಡಿಸಲಾರರು'' ಎನ್ನಲಿಲ್ಲವೇ ದೇರಾಜೆಯ ಉತ್ತರ ಕುಮಾರ. ಇಂದಿನ ರಾಜಕೀಯದವರು ಬಾಯಿ ಬಡಾಯಿಗಳು. ಕೆಲಸದಲ್ಲಿ ಉತ್ತರ ಕುಮಾರರು ಎಂದ ಅದ್ರಾಮ.

''ಉತ್ತರ ಕುಮಾರನನ್ನು ಯಾಕೆ ಹೇಳ್ತಿ ಮಾರಾಯ. ಕುಮಾರವ್ಯಾಸನಿಗೆ ಹಾಸ್ಯರಸ ತರಬೇಕಾಗಿತ್ತು. ಅದಕ್ಕೆ ವ್ಯಾಸರ ಪಾತ್ರವನ್ನು ಬೇಕಾದಂತೆ ಬದಲಾಯಿಸಿ ಬಿಟ್ಟ. ಮೂಲತಃ ವ್ಯಾಸರ ಸಂಸ್ಕೃತದಲ್ಲಿ ಅವನೇನು ಹಾಸ್ಯ ಪಾತ್ರ ಅಲ್ಲ'' ಎಂದ ಪೊಮ್ಮ.

ನಿನ್ನ ಎಂಚಿನ ಪೊಮ್ಮ. 'ತಿಳಿಯ ಹೇಳುವೆ ಕೃಷ್ಣ ಕಥೆಯನು' ಎಂದು ಹೇಳಿ ಮಹಾಭಾರತವನ್ನು ಕೃಷ್ಣ ಕಥೆಯನ್ನಾಗಿ ಪರಿವರ್ತಿಸಲು ಹೊರಟವನಲ್ಲವಾ ಕುಮಾರವ್ಯಾಸ. ಮಹಾಭಾರತಕ್ಕೆ ರಾಮಾಯಣದ ಹಾಗೆ ಪಾರಾಯಣದ ಮಹತ್ವ ಇಲ್ಲ. ಹಾಗಾಗಿ ಈ ಕಥೆಯನ್ನು ಕೃಷ್ಣ ದೇವರ ಕಥೆಯನ್ನಾಗಿ ಮಾಡುತ್ತೇನೆ ಎಂಬ ಭಕ್ತಿಯಲ್ಲಿ ಹೊರಟವನಲ್ಲವ ನಮ್ಮ ನಾರಣಪ್ಪ. ಇಲ್ಲಿ ನವರಸ ಇತ್ಯಾದಿ ಸಂಗತಿ ಬೆದಕಲಾಗದು ಎಂದಿದ್ದಾನೆ. ನೆನಪಿಲ್ಲವಾ,

*ಪದದ ಪ್ರೌಢಿಯ ನವರಸಂಗಳ*

*ವುದಿತವೆನುವಭಿದಾನ ಭಾವವ*

*ಬೆದಕಲಾಗದು ಬಲ್ಲ ಪ್ರೌಢರುಮೀ ಕಥಾಂತರಕೆ*

ಎಂದು ಹೇಳಿದ್ದಲ್ಲವಾ. ಇದು ತುಳಸಿಯನ್ನು ನೀರಲ್ಲಿ ಅದ್ದಿದ ತೀರ್ಥದ ಹಾಗೆ. ಭಕ್ತಿಯಿಂದ ಪದುಮನಾಭನ ಮಹಿಮೆಯನ್ನು ಈ ಕಥೆಯನ್ನು ಬದಲಾಯಿಸಿರುವುದರಲ್ಲಿ ಕಾಣಬೇಕು ಸರಳ ಭಕ್ತಿ. ನವರಸ ಅದು ಇದು ಎಂತದೂ ಇಲ್ಲ ಅಂತ 'ಪೀಠಿಕಾ ಸಂಧಿ'ಯಲ್ಲೇ ಕವಿ ಹೇಳಿದ್ದಾನಲ್ಲ. ಮತ್ತೆ ನಿನ್ನದು ಎಂತದು ಎಂದ ಅಪ್ಪಣ್ಣ.

ಕವಿಗಳದ್ದೆಲ್ಲಾ ಕಣ್ಕಟ್ ಆಯ್ತಾ. ರಸ, ಗಿಸ ಇದ್ದು ಎಲ್ಲಾ ಪಂಡಿತರೂ ಹೊಗಳಬೇಕೆಂದು ಮನಸ್ಸಲ್ಲಿ ಇಲ್ಲದ ಕವಿ ಯಾರು? ಅದಿಲ್ಲ-ಇದಿಲ್ಲ ಅಂತ ವಿಮರ್ಶಕರು ರಗಳೆ ಮಾಡಬಾರದು ಅಂತ ಇಲ್ಲಿ ಬರಿ ಡಿಫೆನ್ಸ್ ಸ್ಟೇಟ್‌ಮೆಂಟ್ಸ್. ಅದನ್ನೆಲ್ಲಾ ನಂಬಲಿಕ್ಕೆ ನೀನೊಬ್ಬ, ಎಂದ ಪೊಮ್ಮ. ಅಷ್ಟಕ್ಕೂ ಬೇಂದ್ರೆಯವರೇ ಉತ್ತರವನ್ನು 'ಹಾಸ್ಯಮೂರ್ತಿ' ಎಂದು 'ಕುಮಾರವ್ಯಾಸನ ಉತ್ತರ ಕುಮಾರ' ಎಂಬೊಂದು ಲೇಖನ ಬರೆದಿದ್ದಾರಲ್ಲ. ನಾವು ಹೈಸ್ಕೂಲಲ್ಲಿ ಇದ್ದಾಗ ಮುಲ್ಕಿಯ ವಿಜಯಾ ಕಾಲೇಜಿನಲ್ಲಿ ಬೇಂದ್ರೆಯವರ ಭಾಷಣಕ್ಕೆ ಹೋಗಿದ್ದೆವಲ್ಲ - ಬೇಂದ್ರೆಯವರನ್ನು ನೋಡಬೇಕು ಅಂತ. ಅವರು ಅಲ್ಲಿಯೂ ಉತ್ತರನ ಪ್ರಸ್ತಾಪ ಮಾಡಿದ್ದರು ನೆನಪಿಲ್ಲವಾ, ಎಂದ ಪೊಮ್ಮ.

ಕುಮಾರವ್ಯಾಸನ ಉತ್ತರವನ್ನು 'ರಣ ಹೇಡಿ' 'ಹಗರಣದರಸು' 'ಸ್ವಭಾವತಃ ಹಾಸ್ಯಾಸ್ಪದ' ಎಂದು ಮುಂತಾಗಿ ಬೇಂದ್ರೆ ವರ್ಣಿಸಿದ್ದು ನಿಜ. ಆದರೆ ಅವನ ಹೇಡಿತನ ಹೋಗಿ ಉತ್ತರ ಕುಮಾರ ಕಲಿಯಾಗಿ ಬದಲಾವಣೆ ಆಗುವುದನ್ನೂ ಕವಿ ಚಿತ್ರಿಸಿದ್ದಾನೆ ಎಂದು ಕುವೆಂಪು ಹೇಳಿದ್ದಾರಲ್ಲ. ಆ ಬದಲಾವಣೆ ನಿನ್ನ ನೆನಪಿಗೆ ಬಂದರೆ ಉತ್ತರವನ್ನು ನೀನು ಹೀಗೆ ಡೌನ್ ಮಾಡುತ್ತಿರಲಿಲ್ಲ ಎಂದ ಅಪ್ಪಣ್ಣ.

ಆದರೆ ಕುವೆಂಪು ಮಾತು ಸಂಸ್ಕೃತ ಭಾರತದ ಉತ್ತರನಿಗೇ ಹೆಚ್ಚು ಅನ್ವಯ ಅಂತ ನಮ್ಮ ಯಕ್ಷಗಾನದ ಜಬ್ಬರ್ ಸಮೊ ಹೇಳುತ್ತಿದ್ದರಪ್ಪ. ದೇರಾಜೆ ಸೃಷ್ಟಿಸುತ್ತಿದ್ದುದು ನಮ್ಮ ಕನ್ನಡದ ಕುಮಾರ ವ್ಯಾಸನ ಉತ್ತರವನ್ನೇ. ಸಂಸ್ಕೃತ ಭಾರತದಲ್ಲಿ ಅವನ ಹೆಸರು ಭೂಮಿಂಜಯ. ಇನ್ನೊಂದು ಹೆಸರು ಉತ್ತರ. ಆದರೆ ಕನ್ನಡದಲ್ಲಿ ಉತ್ತರನ ಪೌರುಷ ಅಂತ ಗಾದೆ ಮಾತು ಆಗಿದೆ. ದೇರಾಜೆಗೆ ಆ ಹಾಸ್ಯರಸ ಸೃಷ್ಟಿಯಾಗಬೇಕು ಎಂಬುದು ಮುಖ್ಯ. ಅವರು ರಸ ಋಷಿಯಲ್ಲವೆ? ಎಂದ ಅದ್ರಾಮ. ಸಂಸ್ಕೃತ ಭಾರತದಲ್ಲಿ ಉತ್ತರನ ದೈನ್ಯ ದಯನೀಯವಾಗಿದೆಯೇ ಹೊರತು ಹಾಸ್ಯಾಸ್ಪದವಲ್ಲ ಅಂತ ಜಿ.ಎಸ್. ಆಮೂರರು ಕೂಡಾ ಹೇಳಿದ್ದಾರೆ ಅಂತ ಯಾರೋ ಹೇಳಿದ ನೆನಪು. 'ಸಾತ್ವಿಕ ಪಥ'ವೋ ಎಂತದೋ ಪುಸ್ತಕ. ಇತ್ತೀಚೆಗಂತೂ ನಮ್ಮ ಲೇಖಕರೆಲ್ಲಾ ಓದುಗರ ಜೊತೆ ಪೈಪೋಟಿಗೆ ಇಳಿದು ತಿಂಗಳಿಗೆ ಎಷ್ಟು ಪುಸ್ತಕ ಬರುತ್ತದೆಂದರೆ ಯಾವ ಪುಸ್ತಕದ ಹೆಸರೂ ನೆನಪಿಗೇ ಬರುವುದಿಲ್ಲ ಎಂದು ತನ್ನ ಗೋಳು ತೋಡಿಕೊಂಡ ಅದ್ರಾಮ.

ಈ ಉತ್ತರ ಎಂದರೆ ಶೇಕ್ಸ್‌ಪಿಯರ್‌ನ ಫಾಲ್‌ಸ್ಟಾಫ್ ಅಥವಾ ಬೆನ್‌ಜಾನ್ಸನ್‌ನ ಬಾಬಡಿಲ್ ಹಾಸ್ಯ ಪಾತ್ರಗಳ ರೀತಿಯ ಒಂದು ಕ್ಯಾರೆಕ್ಟರ್ ಅಂತ ಒಮ್ಮೆ ಇಂಗ್ಲಿಷ್ ಮೇಷ್ಟ್ರು ಕಾಲೇಜಲ್ಲಿ ಹೇಳಿದ್ದು ನೆನಪಿಗೆ ಬರ್ತಾ ಇದೆ. ಜಾನ್ಸನ್‌ನ ಎವೆರಿ ಮ್ಯಾನ್ ಇನ್ ಹಿಸ್ ಹ್ಯೂಮರ್ ನಾಟಕದ ಬಾಬಡಿಲ್ ನೆನಪಿದೆ ಎಂದು ಅಪ್ಪಣ್ಣ ಹೇಳಿದಾಗ ಅದ್ರಾಮ ಶೇಕ್ಸ್‌ಪಿಯರ್‌ನ ಪಾತ್ರ ಹೆನ್ರಿ ನಾಲ್ಕು ಹಾಗೂ ಐದು ನಾಟಕಗಳಲ್ಲಿ ಬರುವುದಲ್ಲವ. ಇಂಗ್ಲಿಷ್ ಲೆಕ್ಚರರ್ ರಾಜಪ್ಪ ಅದರ ಬಗ್ಗೆ ಹೇಳ್ತಿದ್ದರು ನೋಡು ಎಂದ ಅದ್ರಾಮ. ಅದೇ ಸ್ವೇಡ್ ಲೆದರ್ ಶೂ ಹಾಕಿಕೊಂಡು ಯಾವಾಗಲೂ ಫುಲ್‌ಕೈ ಶರ್ಟಿನಲ್ಲೇ ಕ್ಲಾಸಿಗೆ ಬರುತ್ತಿದ್ದ ರಾಜಪ್ಪ ಅಲ್ವಾ ಎಂದ ಪೊಮ್ಮಚ್ಚ.

ಅಷ್ಟರಲ್ಲಿ ಬಿಸಿಬಿಸಿಯಾಗಿ ಬಂದ ಮಲ್ಲಿಗೆ ಇಡ್ಲಿಯನ್ನು ಕಣ್ಣರಳಿಸಿ ನೋಡಿದ ಪೊಮ್ಮಚ್ಚ ಅದರ ಮೇಲೆ ನಿಧಾನವಾಗಿ ಕರಗುತ್ತಿದ್ದ ಬೆಣ್ಣೆಯ ಚೂರನ್ನು ಗಮನಿಸುತ್ತಾ 'ಕಾಯಿ ಚಟ್ನಿಯ ಕೊಟ್ಟ ನಾದೊಡೆ ಬಾಯಿಗಬ್ಬವುವಾಗುವಂದದಿ' ಎಂದು ಕುಮಾರವ್ಯಾಸನ ಉತ್ತರನು ಹೇಳಿದ, ''ಸಾರಥಿಯ ಶಿವಕೊಟ್ಟನಾದೊಡೆ / ಮಾರಿಗುಬ್ಬಸವಾಗದಂತಕ / ನೂರು ತುಂಬದೆ ಡೊಳ್ಳು ನೂಕದೆ ರಣ ಪಿಶಾಚರರಿಗೆ'' ಎಂಬ ಭಾಮಿನಿಯ ಭಾಗವನ್ನು ನಕಲು ಮಾಡಿದ.

ನೀನು ಎಂತ ಬೇಕಾದರೂ ಹೇಳು ಮಾರಾಯ. ಕುರುಸೇನೆಯನ್ನು ಹೆಂಗಸರ ಎದುರು ಉತ್ತರ ಲೇವಡಿ ಮಾಡುವುದು ಉಂಟಲ್ಲ, ಅದು ಕ್ಲಾಸಿಕ್. ಆರೊಡನೆ ಕಾದುವೆನು ಅಂತ ಉತ್ತರ ಹೇಳುತ್ತಾ ಕೆಲವರು ಹಾರುವರು, ಭೀಷ್ಮರಂತಹ ಮುದುಕರನ್ನು ಕುರಿತು 'ಕೆಲರಂತಕನ ನೆರೆಯೂರವರು' ಅಂತ ಹೇಳ್ತಾನೆ ನೋಡು. ಸಾಯಿಲ್ಕಕ್ಕೆ ಹತ್ತಿರವಾದ ಮುದುಕರು ಎನ್ನುವ

ಬದಲು ಯಮನ ಊರಿನ ಹತ್ತಿರ ಇರುವವರು ಎಂಬ ವ್ಯಂಗ್ಯ. ಸಾರಥಿ ಸತ್ತಿದ್ದಾನೆ ನಿನ್ನಿನ ಯುದ್ಧದಲ್ಲಿ. ಸಾರಥಿ ಸಿಕ್ಕಿದರೆ ಸಾಕು ಎಂದು ಅವ ಕೊಚ್ಚಿಕೊಳ್ಳುವಾಗ ಅಲ್ವಾ ಪಾಂಚಾಲಿಗೆ ಎಕ್ಕಟಿ ನುಡಿದು ಪಾರ್ಥನ ಸಾರಥಿ ಇದ್ದಾನೆ ಬೃಹನ್ನಳೆ ಅಂತ ಅರ್ಜುನ ಹೇಳಿಕಳಿಸುವುದು ಎಂದ ಅಪ್ಪಣ್ಣ.

ಎಕ್ಕಟಿ ಕರೆದು ಎಂದರೆ ಒಬ್ಬಳನ್ನೇ ಕರೆನು ಅಂತ ಅರ್ಥ ಅಲ್ವಾ. ಈಗ ಗೊತ್ತಾಯಿತು ಇಸ್ಪೇಟ್ ಆಟದಲ್ಲಿ ಒಂದೇ ಇರುವ 'ಎ' ಅಥವಾ ಏಸ್‌ಗೆ 'ಎಕ್ಕ' ಅಂತ ಹೇಳ್ತಾರಲ್ವಾ ಎಂದ ಪೊಮ್ಮ.

ಅಯ್ಯೋ ಮಾರಾಯ ಉತ್ತರ ರಥದಿಂದ ಹಾರಿ ಓಡುವಾಗ, ಅರ್ಜುನ ಅವನನ್ನು ಹಿಡಿದೆಳೆದು ತರುವಾಗ ನಿನ್ನ ಹೊಟ್ಟೆಯಲ್ಲಿ ಹುಟ್ಟಿ ಬಂದವ ಅಂತ ಭಾವಿಸಿ ನನ್ನನ್ನು ಬದುಕಿಸು ಅಂತ ಬೇಡುವುದೇನು, ನೀನು ನಪುಂಸಕನೆ ಎಂದು ಜರೆದಾಗ ಹೇಳುವ ಮಾತು

*ನೀವು ವೀರರು, ನೆರೆ ನಪುಂಸಕ*
*ರಾವು, ಸಾವವರಲ್ಲ, ಲೋಕದ*
*ಜೀವಗಳ್ಳರಿಗಾವು ಗುರುಗಳು ಬಿಟ್ಟು ಕಳುಹೆಂದ.*

ಲೋಕದ ಜೀವಗಳ್ಳರಿಗೆ ನಾವು ಗುರುಗಳು ಎಂಬ ಉತ್ತರನಿಗೆ ಸತ್ತರೆ ವೀರ ಸ್ವರ್ಗ, ಸುರಲೋಕದ ಅಪ್ಸರೆಯರ ಜೊತೆ ಜೀವನ ಎಂದಾಗ ಸುರರ ಸತಿಯರನೊಲ್ಲೆ ಎಮಗೆ ಎಮ್ಮ ಅರಮನೆಯ ನಾರಿಯರೆ ಸಾಕು. ನಮ್ಮ ಅರಸುತನವೆ ನಮಗೆ ಇಂದ್ರ ಪದವಿ ಎನ್ನುವ ಉತ್ತರನ ಚಿತ್ರ ನೋಡಯ್ಯ ಎಂದು ಅದ್ರಾಮ ನಗುವಾಗ ಬಾಯೊಳಗಿದ್ದ ಇಡ್ಲಿ ಸೆರೆಸಿಕ್ಕಿ ಕೆಮ್ಮತೊಡಗಿದ.

ಇಂಥಾ ಒಳ್ಳೆ ಮಲ್ಲಿಗೆ ಇಡ್ಲಿಯನ್ನು ಹೊಟ್ಟೆಗೆ ಇಳಿಸಯ್ಯಾ ಎಂದರೆ ನೀನು ನೇರ ಶ್ವಾಸಕೋಶಕ್ಕೆ ಅದನ್ನು ತುರುಕುತ್ತಾ ಇದ್ದೀಯಲ್ಲ ಅದ್ರಾಮ ಸಾಹುಕಾರ್ರೆ ಎಂದ ಪೊಮ್ಮ ಅವನಿಗೆ ಕುಡಿಯಲು ನೀರುಕೊಟ್ಟ.

ಕಣ್ಣಲ್ಲಿ ಬಂದ ನೀರನ್ನು ಕರ್ಚೀಫಿನಲ್ಲಿ ಉಜ್ಜುತ್ತಾ ಅದ್ರಾಮ, ಮತ್ತೆ ನಗೆ ಬಾರದೆ ಉಂಟಾ. ಈ ಸಂದರ್ಭವನ್ನು ದೇರಾಜೆಯವರು ಹೇಗೆ ರಸವತ್ತಾಗಿ ಸೃಷ್ಟಿಸುತ್ತಿದ್ದರು. ಅಲ್ಲಿನ ಸಂದರ್ಭವೇ ಹಾಸ್ಯವನ್ನು ಉಕ್ಕಿಸುತ್ತಿತ್ತು ನೋಡು ಎಂದ. ಅಲ್ಲಿ ಉತ್ತರನನ್ನು ನೋಡುವರಿಗೆ ಭಯ ಇಲ್ಲ, ಓದುಗರಾದ ನಮಗೆ ಅಲ್ಲಿ ಅರ್ಜುನ ಇದ್ದಾನೆ ಅಂತ ಗೊತ್ತು. ಆದರೆ ಬೆದರಿರುವ ಉತ್ತರನಿಗೆ ಗೊತ್ತಿಲ್ಲವಲ್ಲ. ಬೃಹನ್ನಳೆಯ ರೂಪದ ಅರ್ಜುನ ಕೈಗಳ ಬಳೆಯನ್ನು ನೆಗ್ಗಿ ಒತ್ತಿ ಅಂದರೆ ಮುಂಗೈವರೆಗೆ ನೂಕಿ ಮುರಿದಾಗ ಕೌರವ ಬಲದ ಗಂಟಲ ಬಳೆ ಮುರಿಯಿತು ಅಂತ ಕುಮಾರವ್ಯಾಸ ಹೇಳಿದ ಮೇಲೆ ಉತ್ತರನ ಧೈರ್ಯವೇ ಬೇರೆ ನೋಡು. ಅಷ್ಟಕ್ಕೂ ಅವ ಮಹಾಭಾರತ ಯುದ್ಧದಲ್ಲಿ ಹೋರಾಡಿ ಮಡಿದ ಕಿರೀಟಪತಿ ಅಲ್ವೇ ಎಂದ ಅದ್ರಾಮ. ಅರ್ಜುನ ಉತ್ತರನಿಗೆ ತನ್ನನ್ನು ಪರಿಚಯ ಮಾಡಿಕೊಡುತ್ತಾ ಅವನ ಸ್ವಂತ ವಿಶ್ವಾಸವನ್ನೂ ವ್ಯಕ್ತಿತ್ವವನ್ನು ಗಳಿಸಿಕೊಳ್ಳುತ್ತಾನೆ ಅಲ್ವಾ ಅಂದ.

ಇಲ್ಲಿ ಯುದ್ಧ ಮಾಡದೆ ರಥದಿಂದ ಇಳಿಯುವ ಉತ್ತರ ಮುಂದೆ ಮಹಾಭಾರತ ಯುದ್ಧದಲ್ಲಿ ಕಾಳಗಕ್ಕೆ ಹೊರಡದೆ ರಥದಿಂದ ಇಳಿಯುವ ಅರ್ಜುನ. ಎರಡೂ ಕಡೆ ಯುದ್ಧ ಬಿಟ್ಟು ಹೊರಡುವುದಕ್ಕೆ ಕಾರಣಗಳು ಬೇರೆ. ಆದರೆ ಯುದ್ಧಕ್ಕೆ ಅವರನ್ನು ರಥ ಹತ್ತಿಸುವವರು

ಸಾರಥಿಗಳೆ. ಇಲ್ಲಿ ಉತ್ತರನ ಸಾರಥಿ ಅರ್ಜುನ. ಅಲ್ಲಿ ಪಾರ್ಥ ಸಾರಥಿ ಕೃಷ್ಣ. ರೀತಿ ಒಂದೇ ಸಂದರ್ಭ ಕಾರಣಗಳು ಬೇರೆ. ಅದೆಂತದ್ದೋ ಒಮ್ಮೆ ಪುರಾಣ ಪಾತ್ರಗಳ ಬಗ್ಗೆ ಕೀರ್ತಿನಾಥ ಕುರ್ತಕೋಟಿ ಹೇಳಿದ್ದರು. ಈಗ ನೆನಪಿಲ್ಲ ಅಷ್ಟೆ ಎಂದ ಅಪ್ಪಣ್ಣ.

ಮೊಬೈಲು ಬಂದ ಮೇಲೆ ನಿನಗೆ ನಿನ್ನ ಮನೆ ಫೋನು ನಂಬರು ಕೂಡಾ ನೆನಪಿಲ್ಲ. ಇನ್ನು ಕುರ್ತಕೋಟಿ ಹೇಗೆ ನೆನಪಿರುತ್ತಾರೆ ಎಂದು ಕಾಲೆಳೆದ ಪೊಮ್ಮ.

ಅದೇ ಕಣೋ ಮಿಥ್‌ಗಳ ಬಗ್ಗೆ ಮಾತನಾಡುತ್ತಾ ಕುರ್ತಕೋಟಿ ಸೆಂಟ್ರಲ್ ಕಾಲೇಜು ಸೆಮಿನಾರ್‌ನಲ್ಲಿ ಪುರಾಣ – ಮಹಾಕಾವ್ಯಗಳ ಪಾತ್ರ ರಚನೆಯ ವೈಶಿಷ್ಟ್ಯ ವಿವರಿಸಿದ್ದು ಮಾರಾಯ. ಪೌರಾಣಿಕ ವ್ಯಕ್ತಿಗಳಿಗೆ ದೇಹ, ಮನಸ್ಸು, ಬುದ್ಧಿ, ಸಂಕಲ್ಪ ಶಕ್ತಿ, ಬಲ, ಧೈರ್ಯ, ಸಾಹಸಗಳೆಲ್ಲ ಇರುತ್ತವೆ. ಆದರೆ ಅವೆಲ್ಲಾ ಸೇರಿ ಒಂದು ವ್ಯಕ್ತಿತ್ವವಾಗಿ ಇರುವುದಿಲ್ಲ. ಅವುಗಳ ಅಂತರಂಗ ಸ್ವಗತ ಕಾಣುವುದಿಲ್ಲ. ವಿವರಣೆಯಲ್ಲಿ ಸಿಕ್ಕಿದಷ್ಟು ಇರುತ್ತವೆ. ಆಧುನಿಕ ಸಾಹಿತ್ಯದಲ್ಲಿ ನಾವು ಕ್ಯಾರೆಕ್ಟರ್ಸ್ ಎನ್ನುವ ಪಾತ್ರ ಕಲ್ಪನೆಗಳಿಗೂ ಪೌರಾಣಿಕ ಪಾತ್ರ ಕಲ್ಪನೆಗಳಿಗೂ ಇರುವ ವ್ಯತ್ಯಾಸಗಳನ್ನು ಅವರು ವಿವರಿಸುತ್ತಿದ್ದುದಲ್ವಾ? ಎಂದ ಅದ್ರಾಮ. ಹೌದೌದು ಈಗ ನೆನಪಾಯಿತು. ಅದೇ ಯೂನಿವರ್ಸಿಟಿ ಸೆಮಿನಾರ್ ಎಂದು ಕಾಣುತ್ತದೆ ಎಂದ ಅಪ್ಪಣ್ಣ.

ಅಷ್ಟರಲ್ಲಿ ಬಂದ ಕಾಫಿಯನ್ನು ಮೆಲ್ಲಗೆ ಗುಟುಕರಿಸುತ್ತಾ ಅದ್ರಾಮ, ಯುದ್ಧದ ಗಂಭೀರ ಸನ್ನಿವೇಶ ಹೀಗೆ ಹಾಸ್ಯಕ್ಕೆ ಇಳಿಯುವುದು ಒಂದು ಚೋದ್ಯವೇ ಸರಿ ಎಂದ.

ಮಹಾಭಾರತ ವ್ಯಾಸರಿಗೆ ಇತಿಹಾಸ ನೋಡು. ಅದರಿಂದಾಗಿ ಮಹರ್ಷಿಗಳು ಇರುವುದಕ್ಕೆ ಹತ್ತಿರವಾಗಿ ಹೇಳಬೇಕಾಯಿತೋ ಏನೋ? ಆದರೆ ಕುಮಾರವ್ಯಾಸ ಅದನ್ನು ಕಾವ್ಯ ಮಾಡಿದ್ದರಿಂದ ಕವಿಗೆ ಸ್ವಾತಂತ್ರ್ಯ ಹೆಚ್ಚು ಎಂದ ಅಪ್ಪಣ್ಣ.

ಆ ಕಾವ್ಯವನ್ನು ಯಕ್ಷಗಾನ ಮಾಡುವಾಗ ನಮ್ಮ ಅರ್ಥಧಾರಿಗಳಿಗೆ ಸ್ವಾತಂತ್ರ್ಯ ಇನ್ನೂ ಹೆಚ್ಚು. ಆದ್ದರಿಂದಲೇ ನೋಡು ಕುಮಾರ ವ್ಯಾಸನ ಉತ್ತರ 'ಮೇಳದ ಗಣಿಕೆಯರ ಮಧ್ಯದಲಿ ಮೆರೆದು' ಕಾಣುತ್ತಾನೆ. ಅದೇ ಉತ್ತರನನ್ನು ಬಡಗಿ ಮಾಡಿದ ಗಟ್ಟಿ ಪೀಠದ ಮೇಲೆ ಕುಳ್ಳಿರಿಸುವ ಸ್ವಾತಂತ್ರ್ಯ ದೇರಾಜೆಯವರಿಗೆ ಯಕ್ಷಗಾನದಲ್ಲಿ ಸಿಗುತ್ತದೆ ನೋಡು. ಅದಕ್ಕೆ ಯಕ್ಷಗಾನ ನಿನ್ನ ಕಾವ್ಯಕ್ಕಿಂತಲೂ ದೊಡ್ಡದು ಎಂದು ಅಪ್ಪಣ್ಣನನ್ನು ತಿವಿದ ಅದ್ರಾಮ.

ಬಿಸಿ ಕಾಫಿ ಕುಡಿದಾಯಿತು. ಮಲ್ಲಿಗೆ ಇಡ್ಲಿಯೂ ಮುಗಿದಾಯಿತು. ಇನ್ನೂ ಮೆಲ್ಲಗೆ ನಾವು ಹೋಟೆಲಿನ ನಮ್ಮ ಭದ್ರ ಪೀಠಗಳಿಂದ ಎದ್ದು ಮಂತ್ರಿ ಮಾಲ್‌ನ ಮೆಟ್ರೋ ಸ್ಟೇಷನ್ ವರೆಗೆ ನಡೆಯೋಣವೇ ಸಾರಥಿಗಳೆ ಎಂದು ಅದ್ರಾಮನನ್ನು ಛೇಡಿಸಿದ ಪೊಮ್ಮ. ನನ್ನ ಹೆಂಡತಿಗೆ ಈ ಹೋಟೆಲ್‌ನಲ್ಲಿ ಮಾಡುವ ಬಾಳೆಹಣ್ಣಿನ ಬನ್ಸ್ ತುಂಬಾ ಇಷ್ಟ. ಎರಡೆರಡು ಬನ್ಸ್ ಸಿಗುವ ಒಂದೊಂದು ಪ್ಲೇಟುಗಳ ಮೂರು ಪಾರ್ಸೆಲ್‌ಗಳನ್ನು ಕಟ್ಟಿಸಿಕೊಂಡು ಮನೆಗಳಿಗೆ ಬಿಜಂಯಗೈಯುವಂತಹವರು ಆಗೋಣ ಮಹಾರಥಿಕ ವೀರಾಗ್ರಣಿಗಳೇ ಎಂದು ರಾಗದಲ್ಲಿ ಹೇಳಿ ಅದ್ರಾಮ ಎದ್ದುನಿಂತ.

❋

# ಚಂಚಲ್ ಭಾಯಿ ಸಾಹೇಬರು ಮತ್ತು ಕಚಡಾ ಸಾಗಾಣಿಕೆ

**- ನಂದಿನಿ ಕಾಪಡಿ**

**ಮುಂ**ಬೈ ಮಹಾನಗರದಲ್ಲಿ ಹನ್ನೊಂದು ವರ್ಷಗಳು ದೊಡ್ಡ ದೊಡ್ಡ ಸರ್ಕಾರೀ ಮನೆಗಳಲ್ಲಿ ವಾಸ ಮಾಡಿ ನಿವೃತ್ತಿಯ ನಂತರ ಎರಡು ವರ್ಷಗಳು ಬಾಡಿಗೆ ಮನೆಯಲ್ಲಿ ವಾಸ ಮಾಡುವ ಯೋಗ ನಮ್ಮದಾಯಿತು. ನಮಗೆ ಮನೆ ಕೊಡಿಸಿದ ಬ್ರೋಕರ್ ಉತ್ತರ ಪ್ರದೇಶದ ಆಝಮ್ ಘಡ್ ಊರಿನಿಂದ ಬಂದಿದ್ದ ಸಂತೋಷ್ ಸಿಂಗ್. ಆರು ಅಡಿ ನಾಲ್ಕು ಇಂಚಿನ ಎತ್ತರ. ಆ ಗಾತ್ರಕ್ಕೆ ಸರಿಯಾದ ತೂಕ. ನನ್ನ ಮುಖ ನೋಡಿ ಒಂದೇ ಕ್ಷಣದಲ್ಲಿ ನನ್ನ ಬಯೋ ಡೇಟಾ ಗೊತ್ತು ಮಾಡಿಕೊಂಡು 2 BHK ಫ್ಲಾಟ್, ಆಗ ತಾನೇ ಹೊಸದಾಗಿ ಕಟ್ಟಿದ್ದ ''ಮಂದಾರ್'' ಬಿಲ್ಡಿಂಗ್‌ನಲ್ಲಿ 18ನೇ ಅಂತಸ್ತಿನಲ್ಲಿ ಗೊತ್ತು ಮಾಡಿಕೊಟ್ಟ. ಬಾಡಿಗೆ ನನ್ನ ಪೆನ್ಷನ್ ಅರ್ಧದಷ್ಟು. ಖಡಾ ಖಂಡಿತವಾಗಿ ಮಾತನಾಡಿ 3 ಲಕ್ಷ ಅಡ್ವಾನ್ಸ್ ಮತ್ತು 11 ಬಾಡಿಗೆ ಚೆಕ್ಕುಗಳನ್ನು ಸ್ವೀಕರಿಸಿ ''ನಾಡಿದ್ದು ರಿಜಿಸ್ಟ್ರೇಷನ್'' ಎಂದ. ಮನೆಯ ಒಡತಿ ಆ ಬಿಲ್ಡಿಂಗ್ ಕಟ್ಟಿದ ಪ್ರಖ್ಯಾತ ಕಂಟ್ರಾಕ್ಟರ್ ಬಿಟ್ಟು ಠಾಕೂರರ ''ಎರಡನೆಯ ಪತ್ನಿ''. ಮನೆ ಸಿಕ್ಕಿದರೆ ಸಾಕು, ಮಾಲೀಕರ ಚರಿತ್ರೆ ನಮಗೆ ಯಾಕೆ ಎಂದು ಯಜಮಾನರ ವಾಣಿ ಕೇಳಿ ಸರಿ ಎನ್ನುತ್ತಾ ನಾನು ಒಪ್ಪಿಕೊಂಡೆ.

ನಮ್ಮ ಫ್ಲಾಟ್‌ನ ಪಕ್ಕದಲ್ಲಿದ್ದ ಫ್ಲಾಟ್‌ಗೆ ಶ್ರೀ ಚಂಚಲ್ ಖನ್ನಾ ಮತ್ತು ಕುಟುಂಬದವರು ಅದೇ ದಿನ ಬಾಡಿಗೆಯ ರಿಜಿಸ್ಟ್ರೇಷನ್ ಮಾಡಿಕೊಂಡರು. ನಮ್ಮ ಫ್ಲ್ಯಾಟಿನ ಓನರ್ ಮತ್ತು ಅವರ ಫ್ಲ್ಯಾಟಿನ ಓನರ್ ಒಬ್ಬರೇ. ನಮ್ಮ ತರಹವೇ ಅವರು ದೇಶ ಸುತ್ತಿ ಕೆಲಸ ಮಾಡಿ ಬಂದಿದ್ದವರು. ಅವರ ಮನೆಯವರ ಸ್ನೇಹಪರ ನಡತೆ ನಮಗೂ ಒಪ್ಪಿ ಬಲು ಬೇಗನೆ ನಾವು ಸ್ನೇಹಿತರಾದೆವು.

ಸ್ವಲ್ಪ ಕಾಲ ಕಳೆಯಿತು. ಬಿಲ್ಡಿಂಗ್ ಹೊಸದ್ದಾಗಿ ಕಟ್ಟಿದ್ದರಿಂದ ಎಲ್ಲವೂ ಹೊಸದು. ನಮ್ಮ ಫ್ಲೋರಿನಲ್ಲಿ 6 ಫ್ಲ್ಯಾಟುಗಳು. ಎರಡು ಫ್ಲ್ಯಾಟ್ ಇನ್ನೂ ಖಾಲಿಯಾಗಿದ್ದವು. ಮುಂಬೈ ಮುನಿಸಿಪಲ್ ಕಾರ್ಪೊರೇಷನ್ ಪ್ರತಿ ಮನೆಯಲ್ಲಿ ಉತ್ಪಾದನೆಯಾಗುವ ತ್ಯಾಜ್ಯ ಯಾವ ರೀತಿ ಹೊರಗೆ ಇಡಬೇಕು ಎಂದು ನಿಯಮವೇನೊ ಮಾಡಿದ್ದರು. ಆದರೆ ಯಾರೂ ಆ ನಿಯಮಗಳನ್ನು ಸರಿಯಾಗಿ ಪಾಲನೆ ಮಾಡುತ್ತಿರಲಿಲ್ಲ.

''ಸೂಖಾ ಕಚಡಾ ಗೀಲಾ ಕಚಡಾ'' ಎಂದು ನಾವುಗಳು ತ್ಯಾಜ್ಯವನ್ನು ಬೇರೆ ಬೇರೆ ರೀತಿಯಲ್ಲಿ ಪರಿಷ್ಕರಿಸಿ ಕೊಡುತ್ತಿದ್ದೆವು. ಕಚಡಾವಾಲಾ ಎಂದರೆ ನಮ್ಮ ಫ್ಲ್ಯಾಟಿನಿಂದ ಎರಡೂ ಬಿನ್ನುಗಳನ್ನು ತೆಗೆದುಕೊಂಡು ಹೋಗುವ ಹುಡುಗ ಸರಿಯಾಗಿ ಬೆಳಿಗ್ಗೆ ಒಂಭತ್ತು ಗಂಟೆಗೆ ಬರುತ್ತಿದ್ದ, ನಮ್ಮ ಮನೆಯ ಕೆಲಸದವಳು ಬೆಳಿಗ್ಗೆ ಏಳು ಗಂಟೆಗೇ ಬರುತ್ತಿದ್ದರಿಂದ ನಮ್ಮ ಬಿನ್ನುಗಳು ಎಂಟು ಗಂಟೆಗೇ ಹೊರಗಡೆ ಇಡಲ್ಪಡುತ್ತಿದ್ದವು. ಆದರೆ ಭಾಯಿ ಸಾಹೇಬರ

ಮನೆಯ ಕೆಲಸದವಳು ಬೆಳಿಗ್ಗೆ ಒಂಭತ್ತೂವರೆಗೆ ಬರುತ್ತಿದ್ದರಿಂದ ಕಚಡಾವಾಲಾ ಬಂದಾಗ ಅವನಿಗೆ ಬಿನ್ನುಗಳು ಸಿಗುತ್ತಿರಲಿಲ್ಲ. ಇದು ಹಿನ್ನೆಲೆ.

ನಮ್ಮ ಭಾಭಿಜೀ ಕೋಮಲ್ ಅವರು ಪ್ರತಿದಿನ ಕಚಡಾವಾಲಾನ ಜತೆ ವಾದ ವಿವಾದ ಪ್ರಾರಂಭಿಸಿದರು. ಇವರ ಮನೆ ಬಿನ್ನುಗಳು ಹತ್ತು ಗಂಟೆಯ ತನಕ ಹೊರಗಿಡುವುದಿಲ್ಲ, ಕೆಲಸದವಳು ಬೇಗ ಬರುವುದಿಲ್ಲ ಮತ್ತು ಬಿನ್ನುಗಳನ್ನು ಯಾರೂ ತೆಗೆದುಕೊಂಡು ಹೋಗುವುದಿಲ್ಲ, ಇವರ ಮನೆ ಕೆಲಸದವಳು ಎರಡೂ ಬಿನ್ನುಗಳನ್ನು ತೆಗೆದುಕೊಂಡು ಕೆಳಗಿರುವ ಕಚಡಾ ಬಿನ್ನಿಗೆ ಹಾಕಿ ಬರಬೇಕು. ಕೆಲಸದವರಿಗಾಗಿಯೇ ಇದ್ದ ಲಿಫ್ಟ್ ಬೇಗನೆ ಸಿಗುವುದಿಲ್ಲ, ಹೀಗಾಗಿ ಕೆಲಸದವಳಿಗೆ ಅರ್ಧ ಗಂಟೆ ಹೋಗುವುದು ತಡವಾಗುತ್ತದೆ. ದಿನ ಬೆಳಗಾದರೆ ಇದೇ ಕಥೆ.

ಚಂಚಲ್ ಭಾಯಿ ಸಾಹೇಬರು ಪ್ರತಿದಿನ ಈ ನಾಟಕ ನೋಡುತ್ತಿದ್ದರು. ಒಂದು ದಿನ ಕಚಡಾ ವಾಲಾನ ಜೊತೆ ವಾದ ಪ್ರಾರಂಭಿಸಿದರು. ಅವನ ಪ್ರಕಾರ ಇದು 22 ಅಂತಸ್ಥಿನ ಬಿಲ್ಡಿಂಗು. ಮೇಲಿನಿಂದ ಪ್ರಾರಂಭಿಸಿ ಕೆಳಗಿನವರೆಗೆ ಬರಲು ಸಾಕಷ್ಟು ಗಂಟೆಗಳ ಕಾಲ ಬೇಕು. ಮಧ್ಯಾಹ್ನ ಒಂದು ಗಂಟೆಗೆ ಸರಿಯಾಗಿ ಮುನಿಸಿಪಾಲಿಟಿ ಗಾರ್ಬೇಜ್ ಟ್ರಕ್ ಬರುತ್ತದೆ. ಅಷ್ಟರೊಳಗೆ ಬಿಲ್ಡಿಂಗಿನ ನಾಲ್ಕೂ ವಿಂಗ್‌ಗಳ ಕಚಡಾ ಶೇಖರಿಸಿ ಬಿಲ್ಡಿಂಗಿನ ದೊಡ್ಡ ಬಿನ್ನುಗಳಲ್ಲಿ ಸೇರಿಸಿ ಬಿನ್ನುಗಳನ್ನು ಗೇಟಿನ ಹೊರಗೆ ಇಡಬೇಕು. ಭಾಯಿ ಸಾಹೇಬರಿಗೆ ತೃಪ್ತಿಯಾಗಲಿಲ್ಲ ಅವನ ವಾದ. ನಾನು ನೋಡುತ್ತೇನೆ ಹೋಗು ಎಂದರು. ಅವನು ಒಂದು ರೀತಿಯಲ್ಲಿ ಭಾಯಿ ಸಾಹೇಬರ ಕಡೆ ನೋಡುತ್ತಾ ''ನೀವೇನು ನೋಡುತ್ತೀರಿ ನಮ್ಮನ್ನು?'' ಎನ್ನುತ್ತಾ ಹೊರಟುಹೋದ. ಮುಂಬೈನಲ್ಲಿ ''ನಾನು ನೋಡುತ್ತೀನಿ, ನೋಡಿ ಬಿಡುತ್ತೀನಿ, ನೋಡುತ್ತಾ ಇರು'' ಈ ರೀತಿ ವಾಕ್ಯಗಳೆಂದರೆ ಜಗಳಕ್ಕೆ ಕರೆದ ವಾಕ್ಯಗಳಂತೆ! ನಮ್ಮ ಭಾಯಿ ಸಾಹೇಬರು ಒಳಗೆ ಹೋದರು.

ಮಾರನೇ ದಿನ ಮಧ್ಯಾಹ್ನ ಭಾಭೀಜಿ ನಮ್ಮ ಮನೆಗೆ ಬಂದರು. ತಮ್ಮ ಸಮಸ್ಯೆ ಹೇಳಿಕೊಂಡರು. ನಾನು ಅವರಿಗೆ ಹೇಳಿದ್ದು ಇಷ್ಟು, ಸೂಖ ಕಚಡಾ ಎಂದರೆ ಪೇಪರ್, ಪ್ಲಾಸ್ಟಿಕ್, ಗ್ಲಾಸ್ ಮುಂತಾದುವುದರ ಬಿನ್ನನ್ನು ರಾತ್ರಿಯೇ ಹೊರಗಿಡುವುದು. ಹಸೀ ಕಚಡಾ ಬಿನ್ನು ದಿನಪೂರ್ತಿ ಮನೆಯೊಳಗೇ ಕಿಚನ್ ಬಾಲ್ಕನಿಯಲ್ಲಿಟ್ಟು ಅದನ್ನು ಬೆಳಿಗ್ಗೆ ಒಂಭತ್ತರೊಳಗೆ ಹೊರಗಿಡುವುದು. ಭಾಭೀಜಿ ಸ್ವಲ್ಪ ಖಾರವಾಗಿಯೇ ''ದಿನ ಪೂರ್ತಿ ಹಸೀ ಕಚಡಾ ಒಳಗಿಟ್ಟುಕೊಳ್ಳುವುದು ಹೇಗೆ? ನಾವೇನೂ ಬಾಡಿಗೆ ಕೊಡುವುದಿಲ್ಲವೇ. ನಮ್ಮ ಮಾಲೀಕರು ಮೇಂಟೆನೆನ್ಸ್ ಚಾರ್ಜ್ ಕೊಡುವುದಿಲ್ಲವೇ? ಒಬ್ಬ ಕಚಡಾ ವಾಲಾನ ಗರ್ವಕ್ಕೆ ಇಷ್ಟೊಂದು ಮಹತ್ವ ಕೊಡುವುದೇ'' ಎಂದು ಹೇಳುತ್ತಾ ಹೊರಟು ಹೋದರು. ನಾನು ಪೆಚ್ಚಾದೆ. ಅಲ್ಲೇ ಕೂತು ತಮ್ಮ ಕೆಲಸ ಮಾಡಿಕೊಳ್ಳುತ್ತಿದ್ದ ಯಜಮಾನರು ನನ್ನ ಕಡೆ ದುರು ದುರು ನೋಡುತ್ತಾ ''ಮೈಂಡ್ ಯುವರ್ ಬಿಸಿನೆಸ್'' ಎಂಬ ಮಾತು ಕೇಳಿಲ್ಲವೇ ಎಂದು ಬಾಣ ಬಿಟ್ಟರು. ನಾನೂ ಸುಮ್ಮನಾಗಲಿಲ್ಲ, ನಮ್ಮಿಬ್ಬರ ನಡುವೆ ಕಲಹ ಶುರುವಾಯಿತು. ಸಂಜೆಯ ತನಕ ಪರಿಸ್ಥಿತಿ ಕೋಪ ತಾಪದಲ್ಲೇ ಕಳೆಯಿತು.

ಎರಡು ದಿನಗಳ ನಂತರ ಭಾಭೀಜಿ ಮನೆಯ ಕೆಲಸದವಳು ತಾನು ಕಚಡಾ ಡಬ್ಬ ಕೆಳಗೆ ತೆಗೆದುಕೊಂಡು ಹೋಗುವುದಕ್ಕಾಗಿ ತಿಂಗಳಿಗೆ 500 ರೂಪಾಯಿ ತನ್ನ ಸಂಬಳದಲ್ಲಿ ಹೆಚ್ಚಿಸಬೇಕು. ಇಲ್ಲವಾದರೆ ಕೆಲಸ ಬಿಡುತ್ತೀನಿ ಎಂದು ಹೆದರಿಸಿದಳು. ಭಾಭೀಜಿ ಸುಮ್ಮನೆ ಬಿಡುವರೇ? ಪಾಟಿ ಸವಾಲು ಹಾಕಿದರು. ನಿನಗೆ ಪ್ರತಿದಿನ ತಿಂಡಿ ಊಟ ಕೊಡುವುದಿಲ್ಲವೇ? ಈಗಾಗಲೇ 3 ಪಂಜಾಬಿ ಡ್ರೆಸ್ಸುಗ್ಗಳನ್ನು ಕೊಟ್ಟಿಲ್ಲವೇ? ಹಳೆಯ ಸೂಟ್‌ಕೇಸನ್ನು ನೀನು ಕೇಳದೆಯೇ ಕೊಡಲಿಲ್ಲವೇ ಇತ್ಯಾದಿ ಇತ್ಯಾದಿ. ಮುಂಬೈನ ಕೆಲಸದವರು ಅಷ್ಟಕ್ಕೆಲ್ಲಾ ಹೆದರುವವರಲ್ಲ. ''ನೀವು ಬಿಸಾಡುವುದನ್ನು ನನಗೆ ಕೊಟ್ಟಿರಿ. ಅದೇನು ಮಹಾ? ನಿಮ್ಮ ಮನೆಯ ಕೆಲಸ ಜಾಸ್ತಿ. ನೋಡದೆಯೇ 2 ಸಾವಿರ ಹೇಳಿದ್ದೆ. 500 ಜಾಸ್ತಿ ಕೊಡಿ, ಇಲ್ಲಾ ನಾಳೆಯಿಂದ ಕೆಲಸಕ್ಕೆ ಬರುವುದಿಲ್ಲ'' ಎಂತೆಲ್ಲಾ ಜೋರಾಗಿಯೇ ಹೇಳಿದಳು. ''ಸರಿ ಕಚಡಾ ತೆಗೆಯುವುದು ಬೇಡ, ನಾವೇ ಏನಾದರೂ ವ್ಯವಸ್ಥೆ ಮಾಡಿಕೊಳ್ಳುತ್ತೇವೆ'' ಎಂದರು ಭಾಭೀಜಿ.

ಕೋಮಲವಾಗಿ ಕಾಣುತ್ತಿದ್ದ ಕೋಮಲ್ ಭಾಭೀಜಿ ಅಂದು ಮಧ್ಯಾಹ್ನ ನಮ್ಮ ಮನೆಗೆ ಬಂದು ''ನಿಮ್ಮ ಕೆಲಸದವಳನ್ನು ನಮ್ಮ ಮನೆ ಕೆಲಸ ಮಾಡಲು ಒಪ್ಪಿಸಿ'' ಎಂದರು. ಆದರೆ ನಮ್ಮ ಬಾಯಿ ಒಪ್ಪಲಿಲ್ಲ. ತೊಂದರೆ ಎಂದರೆ ಭಾಭೀಜಿ ಮನೆಯವರು ಮತ್ಸ್ಯ ಹಾಗೂ ಮಾಂಸಾಹಾರಿಗಳು. ಹೀಗಾಗಿ ಅವರ ಮನೆಯಲ್ಲಿ ಒಂದು ಪೂರ್ತಿ ದಿನ ಕಚಡಾ ವಾಸನೆ ಬರುತ್ತಿತ್ತು. ಇವರ ಕಿರಿಕಿರಿಯಿಂದ ಒಣ ಕಚಡಾ ಡಬ್ಬವನ್ನೂ ಈಗ ಹುಡುಗ ತೆಗೆದುಕೊಂಡು ಹೋಗುವುದನ್ನು ನಿಲ್ಲಿಸಿದ.

ಒಂದು ದಿನ ಭಾಯಿ ಸಾಹೇಬರು ಮೇಲುಸಿರು ಬಿಡುತ್ತಾ ಬೆವರೊರೆಸಿಕೊಳ್ಳುತ್ತಾ ಕೈನಲ್ಲಿ ಸ್ಟಾಪ್ ವಾಚ್ ಹಿಡಿದುಕೊಂಡು ಬಂದರು. ನನ್ನನ್ನು ನೋಡಿ ''ನಿಜವಾಗಿಯೂ ಒಂದು ಫ್ಲೋರಿನಿಂದ ಇನ್ನೊಂದು ಫ್ಲೋರಿನವರೆಗೆ ಕಚಡಾ ಶೇಖರಿಸಲು ಎಷ್ಟು ಸಮಯ ಬೇಕಾಗುತ್ತದೆ ಎಂದು ಅಭ್ಯಸಿಸುತ್ತಿದ್ದೇನೆ. ನಾನೂ ಕೂಡ ಟೈಮ್ ಅಂಡ್ ಮೋಷನ್ ಸ್ಟಡಿ ಮಾಡಿದ್ದೇನೆ. ಆ ಹುಡುಗ ನಮ್ಮ ಮನೆಗೆ ಹತ್ತು ಗಂಟೆಗೆ ಬಂದರೂ ಮಧ್ಯಾಹ್ನ ಒಂದು ಗಂಟೆಯ ಒಳಗೆ ಕೆಲಸ ಮುಗಿಸಬಹುದು. ಇದೆಲ್ಲ ನಾಟಕ'' ಎನ್ನುತ್ತಾ ಒಳಗೆ ಹೋದರು. ಬಿಲ್ಡಿಂಗಿನ ಮೇಂಟನೆನ್ಸ್ ಡಿಪಾರ್ಟ್ಮೆಂಟ್‌ನ ವ್ಯವಸ್ಥಾಪಕ ಶ್ರೀ ರಾಂಜಿ ಹತ್ತಿರ ಪ್ರತಿ ದಿನ ಭಾಯಿ ಸಾಹೇಬರು ಚರ್ಚಿಸುವರು. ಆದರೆ ಪ್ರಯೋಜನವೇನು ಆಗಲಿಲ್ಲ.

ಭಾಯಿ ಸಾಹೇಬರು ಬಿಲ್ಡಿಂಗ್‌ನ ಪಕ್ಕದಲ್ಲಿದ್ದ ಅಂಗಡಿಯ ಹುಡುಗನಿಗೆ ಪುಸಲಾಯಿಸಿ ತಿಂಗಳಿಗೆ ನೂರು ರೂಪಾಯಿನಂತೆ ಕಚಡಾ ಕೆಳಗೆ ತೆಗೆದುಕೊಂಡು ಹೋಗಲು ಒಪ್ಪಿಸಿದರು. ಆಗಷ್ಟೇ ನೇಪಾಳಿನಿಂದ ಬಂದಿದ್ದ ಹುಡುಗ ನೂರು ರೂಪಾಯಿಗೆ ಒಪ್ಪಿಕೊಂಡ. ಆದರೆ ಬಿಲ್ಡಿಂಗಿನ ಸ್ವಚ್ಛತಾ ಕರ್ಮಚಾರಿ ಸಂಘ ಆ ಹುಡುಗನಿಗೆ ಹೆದರಿಸಿ ಬೆದರಿಸಿ ವಾಪಸ್ಸು ಕಳಿಸಿದರು. ಇದೊಂದು ದೊಡ್ಡ ಸಮಸ್ಯೆಯಾಯಿತು. ಭಾಭೀಜಿ ಕಿಲಾಡಿ ಯತ್ನ ಮಾಡಿ ನಮ್ಮ ಮನೆಗೆ ಬಂದು ''ರಾತ್ರಿಯೇ ನಮ್ಮ ಮನೆಯ ಹಸೀ ಮತ್ತು ಒಣ ತ್ಯಾಜ್ಯವನ್ನು ನಿಮ್ಮ ಮನೆಗೆ ತರುತ್ತೇನೆ. ನಿಮ್ಮ ಮನೆ ಬಿನ್ನುಗಳಲ್ಲಿ ಅವನ್ನು ಹಾಕಿ ಕೊಡಿ'' ಎಂದು ಪುಸಲಾಯಿಸಿದರು. ಗತ್ಯಂತರವಿಲ್ಲದೆ ಒಪ್ಪಿಕೊಂಡೆ. ನಮ್ಮ ಬಿನ್ನುಗಳು ಇವರ ತ್ಯಾಜ್ಯದ ಭಾರ ತಡೆಯಲಾರದೆ ಬಿರುಕು ಬಿಟ್ಟವು. ಯಜಮಾನರು ಮತ್ತು ಅತ್ತೆಯವರೂ ನನ್ನ ಕಡೆ ಕೆಂಗಣ್ಣಿನಿಂದ

ನೋಡಿದರು. ನಮ್ಮ ಸ್ವಚ್ಛತಾ ಕರ್ಮಚಾರಿ ಹುಡುಗ ಅತಿ ಜಾಣ. ಮಾರನೇ ದಿನ ಕಾಲಿಂಗ್ ಬೆಲ್ ಹೊಡೆದು ''ಆಂಟಿಜೀ, ಈ ನಿಮ್ಮ ವ್ಯವಹಾರ ಸರಿಯಿಲ್ಲ. ಪಕ್ಕದ ಮನೆ ಕಸವನ್ನು ನಿಮ್ಮ ಬಿನ್ನಿನಲ್ಲಿ ಹಾಕಬೇಡಿ. ನಾನು ತೆಗೆಯುವುದಿಲ್ಲ'' ಎಂದ. ನಮ್ಮ ಅತ್ತೆ ''ಕಸ ದರಿದ್ರ, ಪಕ್ಕದ ಮನೆಯ ದರಿದ್ರವನ್ನು ನೀನು ಯಾಕೆ ನಮ್ಮ ಮನೆಯ ಬಿನ್ನಿಗೆ ಹಾಕುತ್ತೀಯಾ? ಥೂ.... ಥೂ.... ಬಿಡಿತು ಬಿಡಿತು ಅನ್ನು. ನಾಳೆಯೇ ಹೊಸ ಬಿನ್ನು ತೆಗೆದುಕೊಂಡು ಬಾ'' ಅಂದರು. ಭಾಭೀಜಿ ಹತ್ತಿರ ಮಾತನಾಡುತ್ತೇನೆ ಎಂದುಕೊಂಡೆ. ಭಾಭೀಜಿ ಮುಖ ಸಪ್ಪೆ ಮಾಡಿಕೊಂಡು ''ನಮ್ಮ ಉತ್ತರ ಭಾರತ ಮೇಲು. ನಿಮ್ಮ ಮುಂಬೈ ಕೆಟ್ಟ ಊರು'' ಎಂದು ಬೈದರು. ಸರಿ ಅದನ್ನೂ ಕೇಳಿದ್ದಾಯಿತು.

ನನಗೋ ಇಂಟರ್ನೆಟ್‌ನ ಹುಚ್ಚು. ಮನೆಯಲ್ಲಿ ತಯಾರಾಗುವ ತ್ಯಾಜ್ಯವನ್ನು ಯಾವ ರೀತಿ ಮನೆಯಲ್ಲಿಯೇ ಪರಿಷ್ಕರಿಸಬಹುದು ಎಂಬ ವಿಷಯ ಗೂಗಲ್ ಗುರುವಿಗೆ ಕೇಳಿದೆ. ತುಂಬಾ ಸುಲಭ. ಹಸೀ ತ್ಯಾಜ್ಯವನ್ನು ಮಿಕ್ಸರ್‌ನಲ್ಲಿ ಹಾಕಿ ಅದನ್ನು ನೀರಿನೊಂದಿಗೆ ರುಬ್ಬಿ ನಂತರ ಆ ಮಿಶ್ರಣವನ್ನು ಮನೆಯ ಕುಂಡದೊಳಗೆ ಹಾಕಿಬಿಟ್ಟರೆ ಗಿಡಗಳು ಚೆನ್ನಾಗಿ ಬೆಳೆಯುತ್ತವೆ. ಹೂವುಗಳು ಬಣ್ಣ ಬಣ್ಣವಾಗಿ ಬಿಡುತ್ತವೆ ಎಂದು ಗುರುಗಳು ತಿಳಿಸಿದರು. ನಾನು ಯುರೇಕಾ ಎನ್ನುತ್ತಾ ಕೋಮಲ್ ಭಾಭೀಜಿಗೆ ತಕ್ಷಣವೇ ಸಲಹೆ ಕೊಟ್ಟೆ. ಭಾಭೀಜಿ ಒಂದು ತರಹ ನನ್ನ ಕಡೆ ನೋಡಿ ''ನೀವು ತಮಾಷೆ ಮಾಡುತ್ತಿಲ್ಲ ತಾನೇ? ನಾವು ಮಾಂಸಾಹಾರಿಗಳು. ಪ್ರಾಣಿಗಳ ಎಲುಬುಗಳು ಪುಡಿಯಾಗಬೇಕಾದರೆ ಮನೆಯ ಮಿಕ್ಸರ್ ಒಂದೇ ಕ್ಷಣದಲ್ಲಿ ಕೆಟ್ಟು ಹೋಗುತ್ತದೆ. ಪಾಪ ನಿಮ್ಮ ಕಂಪ್ಯೂಟರಿಗೆ ವ್ಯವಹಾರ ಜ್ಞಾನವಿಲ್ಲಾ ಎಂದು ಕಾಣಿಸುತ್ತದೆ'' ಎಂದು ಬಿಟ್ಟರು. ನನ್ನ ಕಣ್ಣಿನಲ್ಲೂ ನೀರು ಬಂದು ''ಸಾರೀ ಭಾಭೀಜಿ'' ಎನ್ನುತ್ತಾ ಮನೆಗೆ ಬಂದೆ. ಪಕ್ಕದ ಫ್ಲಾಟಿನಲ್ಲಿ ನಡೆದ ಘಟನೆ ಎರಡೂ ಬಾಗಿಲುಗಳು ತೆರೆದದ್ದರಿಂದ ನಮ್ಮ ಯಜಮಾನರಿಗೆ ಕೇಳಿಸಿ ನನ್ನನ್ನು ಚೆನ್ನಾಗಿಯೇ ತರಾಟೆ ತೆಗೆದುಕೊಂಡರು. ''ಸತ್ಯವಂತರಿಗೆ ಇದು ಕಾಲವಲ್ಲ'' ಎಂಬ ಪುರಂದರ ದಾಸರ ಪದ ನೆನಪು ಮಾಡಿಕೊಂಡು ಮೂರು ದಿನ ಮೌನ ವ್ರತ ಮಾಡಿದೆ.

ಬ್ರೋಕರ್ ಸಂತೋಷ್ ಸಿಂಗ್ ಮತ್ತು ಶ್ರೀರಾಂಜಿ ಇಬ್ಬರನ್ನೂ ನೋಡಿ ನನ್ನ ಕಷ್ಟ ಹೇಳಿಕೊಂಡೆ. ತೀರಾ ಪಕ್ಕ ಪಕ್ಕ ಫ್ಲ್ಯಾಟುಗಳಲ್ಲಿ ಏನೆಲ್ಲಾ ತೊಂದರೆ ದಯವಿಟ್ಟು ನೀವೇ ಬಂದು ನೋಡಿ. ಏನಾದರೂ ಪರಿಹಾರ ಹುಡುಕಿ ಎಂದೆ. ಸಂತೋಷ್ ಹೇಳಿದ ''ಮ್ಯಾಡಂಜೀ ನೀವು ತುಂಬಾ ಮೆತ್ತಗಿನವರು. ಸುಮ್ಮನೆ ಚಿಂತೆ ಮಾಡಬೇಡಿ ನಾನು ಅವರಿಗೆ ಹೇಳುತ್ತೇನೆ'' ಎನ್ನುತ್ತಾ ಮೇಲೆ ಬಂದ. ಶ್ರೀರಾಂಜಿ ಕೂಡ ಬಂದರು. ಭಾಭೀಜಿ ಹತ್ತಿರ ''ಬೆಹೆನ್‌ಜೀ ಇದು ಮುಂಬೈ, ಇಲ್ಲಿ ಸಮಯ ದುಡ್ಡಿಗಿಂತ ಹೆಚ್ಚು. ನಮ್ಮ ಸ್ವಚ್ಛತಾ ಕರ್ಮಚಾರಿಗಳು ನಾಲ್ಕು ಬಿಲ್ಡಿಂಗಿನ ಕೆಲಸ ಮಾಡುತ್ತಾರೆ. ನಿಮ್ಮ ಸಮಯಕ್ಕೆ ಬರಲು ಅವರಿಗೆ ಸಾಧ್ಯವಿಲ್ಲ. ನಿಮ್ಮ ಕೆಲಸದವಳು ಯಾವಾಗ ಬಂದರೇನು ನೀವೇ ಕಚಡಾ ಡಬ್ಬಗಳನ್ನು ಹೊರಗಿಡಿ. ನಮ್ಮ ಮನೆಯ ಕೆಲಸ ನಾವೇ ಮಾಡುವುದು ತಪ್ಪೇನಿಲ್ಲ ಎಂದು ಹೇಳಿದರು. ಒಳಗಿನಿಂದ ಬಂದ ಚಂಚಲ್ ಭಾಯಿ ಸಾಹೇಬರು ದೊಡ್ಡ ಜಗಳ ಮಾಡಿಬಿಟ್ಟರು. ''ಯಾವ ರೀತಿ ಕೆಲಸ ಮಾಡಬೇಕು ಎಂದು ಹೇಳಲು ನೀವು ಯಾರು? ಈಗಲೇ ಕ್ಷಮಾಪಣೆ ಕೇಳಿಕೊಳ್ಳದಿದ್ದರೆ ನಾನು ಮಾಲೀಕರಿಗೆ ಫೋನ್ ಮಾಡುತ್ತೇನೆ ಎಂದರು. ಆರ್ಘುಮ್ ಗಡದ ಸಂತೋಷ್ ಸಿಂಘಿಗೆ ಪಿತ್ತ ನೆತ್ತಿಗೇರಿತು.

''ಸಾಬ್ಜಿ! ಯಾರಿಗೆ ಹೆದರಿಸುತ್ತೀರಿ? ನಿಮ್ಮ ಪರಿಮಿತಿಯಲ್ಲಿ ಮಾತನಾಡಿ. ನೀವು ಬಾಡಿಗೆದಾರರು. ದೊಡ್ಡ ಜಂಭ ತೋರಿಸಬೇಡಿ'' ಎನ್ನುತ್ತಾ ಹೊರಟುಬಿಟ್ಟ, ಶ್ರೀರಾಂಜಿ ನಮ್ಮ ಮನೆಯೊಳಗೆ ಬಂದು ಮರಾಠಿ ಭಾಷೆಯಲ್ಲಿ ''ಮೇಡಂ ನೀವು ಮುಂಬೈನಲ್ಲಿ ಹಲವು ವರ್ಷಗಳು ವಾಸಮಾಡಿದ್ದೀರಿ. ನಿಮ್ಮಿಂದ ನಮಗೆ ಏನೂ ತಗಾದೆಯಿಲ್ಲ ಎಂದು ಉಬ್ಬಿಸಿದ. ಚಹಾ ಕುಡಿದು ಹೋಗು ಎಂದು ಹೇಳಿ ಹಸಿಶುಂಠಿ ತುರಿದು ಹಾಕಿ ಫುಲ್ ಕ್ರೀಮ್ ಹಾಲು ಹಾಕಿದ ಚಹಾ ಕೊಟ್ಟೆ. ಅತ್ತೆಯವರು ಮನೆಯಲ್ಲಿ ಮಾಡಿದ್ದ ಬೇಸನ್ ಲಾಡು ತಂದರು. ಶ್ರೀರಾಂಜಿ ನಮ್ಮ ಮನೆಯಿಂದ ಹೊರಗೆ ಹೋಗುವಾಗ, ಭಾಭೀಜಿ ಹೊರ ಬಂದರು. ಒಂದು ತರಹಾ ಸಂಶಯ ದೃಷ್ಟಿಯಿಂದ ನನ್ನತ್ತ ನೋಡಿದರು!

ಈಗ ಭಾಯಿ ಸಾಹೇಬರು ಹೊಸ ಮಾದರಿ ಅಳವಡಿಸಿಕೊಂಡರು. ರಾತ್ರಿ ಹನ್ನೊಂದು ಗಂಟೆಯ ನಂತರ ತಮ್ಮ ಮನೆಯ ತ್ಯಾಜ್ಯವನ್ನು ಕರೀ ಪ್ಲಾಸ್ಟಿಕ್ ಬ್ಯಾಗಿನಲ್ಲಿ ಸುತ್ತಿ ಬಿಲ್ಡಿಂಗಿನ ಹೊರಗೆ ಹೋಗಿ ಅಲ್ಲಿ ಬೇರೆ ಬೇರೆ ಅಂಗಡಿಗಳು ಹೊರಗಿಟ್ಟಿರುವ ತ್ಯಾಜ್ಯದ ಪಕ್ಕ ಬ್ಯಾಗುಗಳನ್ನು ಇಟ್ಟು ಬರುತ್ತಿದ್ದರು. ಸ್ವಲ್ಪ ದಿನ ಎಲ್ಲವೂ ಸರಿಯಾಗಿತ್ತು.

ಆದರೆ ಒಂದು ರಾತ್ರಿ ಇವರು ಕಸದ ಬ್ಯಾಗುಗಳನ್ನು ಇಡುವಾಗಲೇ ಅಲ್ಲಿಗೆ ಬಂದ ಬೀಟ್ ಪೋಲಿಸ್ ವ್ಯಾನ್ ಒಳಗಿನಿಂದ ನಮ್ಮ ಪೇದೆ ಪಾಂಡು ವ್ಯಾನ್ ನಿಲ್ಲಿಸಿ ಹೊರಗೆ ಬಂದು ಭಾಯಿ ಸಾಹೇಬರ ವಿಚಾರಣೆ ನಡೆಸೇಬಿಟ್ಟ. ಕಚಡಾ ಬ್ಯಾಗುಗಳನ್ನು ತೆಗೆಸಿ ಒಳಗೆ ನೋಡಿದ. ಆದರೆ ಅವನಿಗೆ ಸಮಾಧಾನವಾದಂತೆ ತೋರಲಿಲ್ಲ. ''ಠಾಣೆಗೆ ನಡೆಯಿರಿ'' ಎಂದು ಅಪ್ಪಣೆ ಕೊಡಿಸಿದ. ಭಾಯಿ ಸಾಹೇಬರು ಮೊಬೈಲ್ ಫೋನಿನಲ್ಲಿ ನಮ್ಮ ಪತಿದೇವರಿಗೆ ಫೋನಾಯಿಸಿ ''ಬೇಗನೆ ಕೆಳಗೆ ಬನ್ನಿ'' ಎಂದರು. ಏನೋ ಅಪಘಾತವಾಗಿರಬೇಕು ಎಂದುಕೊಂಡು ಪತಿದೇವರು ಬೇಗ ಬೇಗನೆ ಪರ್ಸ್ ಹಿಡಿದು ಕೆಳಗೆ ಹೋದರು. ಪಾಂಡು ಹವಾಲ್ದಾರನಿಗೆ ಮರಾಠಿ ಭಾಷೆಯಲ್ಲಿ ಸಮಜಾಯಿಸಿ ಹೇಳಿ ಭಾಯಿ ಸಾಹೇಬರ ಪೇಚು ಪ್ರಸಂಗ ವಿವರಿಸಿದರು. ಪಾಂಡು ನಗುತ್ತಾ ಭಾಯಿ ಸಾಹೇಬರಿಗೆ ಮನೆಗೆ ಹೋಗಲು ಹೇಳಿದ.

ಪಾಪ ನಮ್ಮ ಭಾಭೀಜಿ ದಿಕ್ಕು ತೋರದೇ ಕೆಲಸದವಳಿಗೆ 500 ರೂಪಾಯಿ ಹೆಚ್ಚು ಕೊಡಲು ಒಪ್ಪಿಕೊಂಡರು. ಅವಳು ಬಾರದ ದಿನ ನಮ್ಮ ಮನೆಯ ಕೆಲಸದವಳಿಗೆ ಚಹಾ ತಿಂಡಿ ಕೊಟ್ಟು ತಮ್ಮ ಕಸದ ಡಬ್ಬ ತೆಗೆದುಕೊಂಡು ಹೋಗಲು ಪುಸಲಾಯಿಸುವರು. ದೊಡ್ಡ ಸಮೋಸಾ ಕಚೋರಿ ತಿನ್ನುತ್ತಾ ನಮ್ಮ ಭಾಯಿ ತೆಪ್ಪಗೆ ಕಸ ತೆಗೆದುಕೊಂಡು ಹೋಗುವಳು.

ನಮ್ಮ ಭಾಯಿ ಸಾಹೇಬರು ಪ್ರತಿದಿನ ''ಶ್ರೀ ಸ್ವೀಟ್ಸ್ ಅಂಡ್ ಫರಸಾನ್ ಮಾರ್ಟ''ನಿಂದ ಬಿಸಿ ಬಿಸಿ ಸಮೋಸಾ ಮತ್ತು ಕಚೋರಿ ತರುತ್ತಿದ್ದರು. ಜೊತೆಗೆ ಒಂದೊಂದು ದಿನ ಜಿಲೇಬಿ ಮತ್ತು ರಬಡಿ ಕೂಡ ತರುವರು. ಪ್ರತಿ ಸಂಜೆ ಚಹಾ ಜೊತೆ ಈ ತಿಂಡಿಗಳು ಬೇಕೇ ಬೇಕು. ಒಂದು ಸಂಜೆ ಭಾಭೀಜಿ ''ಮನೆಗೆ ಯಾರೋ ಬರುವರು. ಜಾಸ್ತಿ ತಿಂಡಿ ತನ್ನಿ'' ಎಂದು ಹೇಳಿದರು. ಭಾಯಿ ಸಾಹೇಬರು ಅಂಗಡಿಗೆ ಹೋಗಿ ಅಲ್ಲೇ ಇದ್ದ ಕುರ್ಚಿಯ ಮೇಲೆ ಕುಳಿತು ತಿಂಡಿ ಬರುವುದನ್ನು ಕಾಯುತ್ತಿದ್ದರು. ಗಲ್ಲಾ ಮೇಲೆ ಕುಳಿತ ಮಹಾಶಯರು ಇವರ ಹತ್ತಿರ ಮಾತು ಪ್ರಾರಂಭಿಸಿದರು. ಭಾಯಿ ಸಾಹೇಬರು ತಮ್ಮ ಕಚಡಾ ಪ್ರಸಂಗ ಹೇಳಿಕೊಂಡರು. ಮಹಾಶಯರು ತಮ್ಮ ಬಿನುಗಳನ್ನು ತೋರಿಸಿ ''ಇಲ್ಲಿಗೆ ಮುನಿಸಿಪಾಲಿಟಿಯ ಗಾರ್ಬೇಜ್

ಟ್ರಕ್ ಎರಡು ಬಾರಿ ಬರುತ್ತದೆ'' ಎಂದರು. ಅವರ ತಮ್ಮ ಈ ಮೊಹಲ್ಲಾದ ನಗರ ಸೇವಕ ಯಾ ಕಾರ್ಪೊರೇಟರ್ ಎಂದೂ ಹೇಳಿದರು. ''ಅವರ ಹೆಸರು?'' ಎಂದು ಪ್ರಶ್ನಿಸಿದಾಗ ''ಸುರೇಂದ್ರ ಠಾಕೂರ್'' ಎಂದು ಹೇಳಿದರು. ಭಾಯಿ ಸಾಹೇಬರ ಚುರುಕು ಬುದ್ಧಿ ಓಡಿತು. ''ಸ್ವಾಮಿ ತಮ್ಮ ಸಹಾಯ ಬೇಕು ಕೇಳಲೇ'' ಎಂದರಂತೆ.

ಠಾಕೂರರು ಗಲ್ಲಾದಿಂದ ಕೆಳಗಿಳಿದು ''ಹೇಳಿ ಸ್ವಾಮಿ'' ಎಂದರಂತೆ. ಭಾಯಿ ಸಾಹೇಬರು ತಮ್ಮ ಮನೆಯ ತ್ಯಾಜ್ಯದ ಸುದ್ದಿ ಬಣ್ಣಬಣ್ಣವಾಗಿ ಬಣ್ಣಿಸಿ ''ಇಂಥ ಅತಿರೇಕ ನೋಡಿಲ್ಲ, ಒಂದು ಹಸಿ ತ್ಯಾಜ್ಯದ ಬಿನ್ನಿಗಾಗಿ ನಂಗೆ ಎಷ್ಟು ಕಷ್ಟ, ಎಷ್ಟು ಅಪಮಾನ'' ಎಂದು ಹೇಳಿ ''ತಮ್ಮ ಸಹೋದರನಿಗೆ ಹೇಳಿ ಏನಾದರು ಸಹಾಯ ಮಾಡಿ'' ಎಂದು ಕೇಳಿಕೊಂಡರಂತೆ. ತಾವೇ ಕಾರ್ಪೊರೇಟರ್ ಸಹೋದರನ ಭೇಟಿ ಮಾಡಲೇ ಎಂದರಂತೆ.

ಠಾಕೂರರ ಮನ ಕರಗಿತು. ಪ್ರತಿ ದಿನ ಬಿಡದಂತೆ ತಮ್ಮ ಅಂಗಡಿಯಿಂದ ಕಚೋರಿ, ಸಮೋಸಾ ತೆಗೆದುಕೊಂಡು ಹೋಗುವ ಗಿರಾಕಿಯನ್ನು ಹೇಗೆ ಬಿಡುವುದು? ಅಷ್ಟೇ ಅಲ್ಲ, ಇನ್ನೊಂದು ಗುಟ್ಟು ಮಾತು. ಠಾಕೂರರ ತಂಗಿ ನಮ್ಮ ಬಿಲ್ಡರ್ ಬಿಟ್ಟು ಠಾಕೂರರ ಅಧಿಕೃತ ಪತ್ನಿಯಂತೆ. ಮತ್ತು ನಮ್ಮ ಬಿಲ್ಡಿಂಗ್ ಮಂದಾರ್ ಮತ್ತು ಬಿಟ್ಟು ಠಾಕೂರ್ ಕಟ್ಟಿರುವ ಎಲ್ಲ ಬಿಲ್ಡಿಂಗುಗಳ ಮೇಂಟನೆನ್ಸ್ ಕಾಂಟ್ರಾಕ್ಟ್ ಠಾಕೂರರ ತಮ್ಮ ಸುರೇಂದ್ರ ಠಾಕೂರ್‌ನ ಕಂಪನಿ ಹತ್ತಿರ ಇರುವುದರಿಂದ ತ್ಯಾಜ್ಯ ಸಾಗಾಣಿಕೆ ಬಗ್ಗೆ ಏನೂ ಸಮಸ್ಯೆಯೇ ಬರುವುದಿಲ್ಲವಂತೆ. ಹೀಗೆ ಹೇಳಿ ಠಾಕೂರರು ನಮ್ಮ ಚಂಚಲ್ ಭಾಯಿ ಸಾಹೇಬರ ಕೈ ಹಿಡಿದು ''ನಿಮ್ಮ ಫ್ಲಾಟಿನ ನಂಬರ್ ಬರೆದಿಟ್ಟು ಹೋಗಿ'' ಎಂದರಂತೆ. ಅಷ್ಟೇ ಅಲ್ಲ ಇನ್ನೊಂದು ಆರು ಸಮೋಸ ಮತ್ತು ಅರ್ಧ ಕಿಲೋ ಜಿಲೇಬಿ ಕಟ್ಟಿಸಿ ''ಭಾಭೀಜಿ ಅವರಿಗೆ ಕೊಡಿ'' ಎಂದರಂತೆ.

ಭಾಯಿ ಸಾಹೇಬರು ನಗುತ್ತಾ ಎದ್ದು ಠಾಕೂರರ ಕೈ ಕುಲಕಿ ''ಮಾಲಿಕ್ ನಮ್ಮ ಕಚಡಾ ಸಮಸ್ಯೆ ಬಗೆಹರಿಸಿ'' ಎಂದು ವಿನಂತಿಸಿಕೊಂಡರು. ಠಾಕೂರರು ಆಶ್ವಾಸನೆ ಕೊಟ್ಟ ಮೇಲೆ ಸೀದಾ ಮನೆಗೆ ಬಂದು, ತಿಂಡಿ ಪ್ಯಾಕೆಟ್ಟಿನಿಂದ ನಮಗೂ 2-3 ಸಮೋಸಾ ಕೊಟ್ಟರು. ಮಾರನೆಯ ಬೆಳಿಗ್ಗೆ ಆಶ್ಚರ್ಯ. ಸಂತೋಷ್ ಸಿಂಗ್ ಬೆಳಿಗ್ಗೆಯೇ ಇವರ ಮನೆಗೆ ಬಂದು ''ಇನ್ನು ಮೇಲಿನಿಂದ ಪ್ರತಿ ಫ್ಲೋರಿನ ಮೆಟ್ಟಲ ಹತ್ತಿರ ದೊಡ್ಡ ಬಿನ್ನುಗಳು ಇಡಲ್ಪಡುತ್ತವೆ. ನಿಮ್ಮ ಕಚಡಾ ಬ್ಯಾಗುಗಳನ್ನು ಅದರಲ್ಲಿ ಹಾಕಿಬಿಡಿ'' ಎಂದು ಹೇಳಿ ಹೋದ. ಭಾಭೀಜಿಯವರ ಕಾಲು ಮುಟ್ಟಿ ''ನಾನು ನಿಮ್ಮ ಬಾಲಕ. ತಪ್ಪೇನಾದರೂ ಆಗಿದ್ದಲ್ಲಿ ಕ್ಷಮಿಸಿ. ಏನಾದರೂ ಸೇವೆ ಬೇಕಿದ್ದರೆ ನಿಸ್ಸಂಕೋಚವಾಗಿ ಕೇಳಿ'' ಎಂದ. ಶ್ರೀರಾಂಜಿ ಕೂಡಾ ಬಂದು ದೇಶಾವರಿ ನಗೆ ನಕ್ಕು ಹೋದರು.

ಕಚಡಾ ಬಿನ್ನು ತೆಗೆಯುವ ಹುಡುಗ ಭಾಭೀಜಿಯ ಕಾಲು ಮುಟ್ಟಿ ನಮಸ್ಕರಿಸಿ ''ನನ್ನ ಕೆಲಸ ಈಗ ನಿಮ್ಮ ಕೈಯಲ್ಲಿದೆ ನನ್ನನ್ನು ಕಾಪಾಡಿ'' ಎಂದು ಕಣ್ಣೀರಿಡುತ್ತಾ ಕೇಳಿಕೊಂಡ.

ಅಂದೇ ಮಧ್ಯಾಹ್ನ ನಮ್ಮ ಬಿಲ್ಡಿಂಗಿನ ಪ್ರತಿ ಫ್ಲೋರಿನಲ್ಲೂ ದೊಡ್ಡ ಬಿನ್ನುಗಳು ಬಂದವು. ಒಂದು ಹಸಿ ತ್ಯಾಜ್ಯಕ್ಕೆ ಎರಡನೆಯದು ಒಣ ತ್ಯಾಜ್ಯಕ್ಕೆ. ಯಾವಾಗ ಬೇಕಾದರೂ ನಾವುಗಳೇ ಅವುಗಳಲ್ಲಿ ನಮ್ಮ ಬಿನ್ನುಗಳನ್ನು ಖಾಲಿ ಮಾಡಬಹುದಾಗಿತ್ತು.

ನಾನು ಭಾರತ ದೇಶದ ಲೇಖಾ ಪರೀಕ್ಷಾ ಸೇವೆಯಿಂದ ನಿವೃತ್ತಿ ಹೊಂದಿದ್ದೆ. ಯಾಕೋ ತುಕ್ಕು ಹಿಡಿದಿದ್ದ ಮೆದುಳು ಚುರುಕಾಯಿತು. 22 ಫ್ಲೋರುಗಳಲ್ಲಿ 2 ಬಿನ್ನುಗಳಂತೆ 44 ಬಿನ್ನುಗಳು. 3000 ರೂಪಾಯಿಗಳಿಗೆ ಒಂದರಂತೆ ರೂ.1,32,000 ಒಂದು ವಿಂಗಿಗೆ. ನಾಲ್ಕೂ ವಿಂಗುಗಳಿಂದ ರೂ. 5,28,000. ಅದೂ ಒಂದೇ ಸಲ ಮಾಡುವ ಖರ್ಚು. ಕಚಡ ಕರ್ಮಚಾರಿ ಈಗ ಒಂದೇ ಸಲ ಒಂದೇ ಕಡೆಯಿಂದ ಬಿನ್ನುಗಳನ್ನು ತೆಗೆಯಬೇಕಾದರಿಂದ ಕಚಡಾ ಕರ್ಮಚಾರಿ ಸಂಘದ ಕಂಟ್ರಾಕ್ಟಿನಿಂದ ಶೇಕಡಾ 20 ರಷ್ಟು ಮೊತ್ತ ಕಡಿಮೆ ಮಾಡಿ ಬಿಡಬಹುದು. ಹೀಗೆ ಪ್ರತಿ ಬಿಲ್ಡಿಂಗಿಗೆ ಮಾಡಿದಲ್ಲಿ ವರ್ಷಕ್ಕೆ ಲಕ್ಷಾನುಗಟ್ಟಲೆ ಖರ್ಚು ಕಡಿಮೆ. ಖರ್ಚು ಕಡಿಮೆ ಆದರೆ ಮೇಂಟನೆನ್ಸ್ ಕಂಟ್ರಾಕ್ಟಿನಲ್ಲಿ ಏನೂ ಕಡಿತವಿಲ್ಲ. ಅಂದ ಮೇಲೆ ಲಾಭ ತಾನೇ? ಚಂಚಲ್ ಭಾಯಿ ಸಾಹೇಬರ ಸಮಸ್ಯೆ ಈ ರೀತಿ ನಮ್ಮ ಠಾಕೂರರಿಗೆ ಸಹಾಯವಾಗಿಬಿಟ್ಟಿತು. ಈಗ ಬಿಲ್ಡಿಂಗಿನಲ್ಲಿ ಚಂಚಲ್ ಭಾಯಿ ಸಾಹೇಬರು ಮತ್ತು ಭಾಭೀಜಿಗೆ ತುಂಬಾ ಗೌರವ. ಸೆಕ್ಯೂರಿಟಿ ಗಾರ್ಡ್‌ನಿಂದ, ಮಾಲಿ, ಲಿಫ್ಟ್‌ಮ್ಯಾನ್ ಎಲ್ಲರೂ ಸಲಾಮು ಹೊಡೆಯುವವರೇ! ಇಂಟರ್ನೆಟ್ ಜ್ಞಾನಕ್ಕಿಂತ ವ್ಯವಹಾರ ಜ್ಞಾನ ದೊಡ್ಡದು ಎಂಬ ಪಾಠವನ್ನು ನಾನೂ ಕಲಿತೆ.

## ತಪ್ಪು ಯಾರದೋ ಶಿಕ್ಷೆ ಯಾರಿಗೋ

ಚಿಂತನಪಲ್ಲಿ ರಾಮಚಂದ್ರರಾಯರು ನಮ್ಮ ನಾಡಿನ ಹೆಸರಾಂತ ಗಾಯಕರು. ಅವರ ಕಛೇರಿಯಲ್ಲಿ ಅಯ್ಯಾಮಣಿ ಮೃದಂಗ ಕಲಾವಿದರು. ಒಂದು ದಿನ ಆಕಾಶವಾಣಿಯಲ್ಲಿ ಅವರಿಬ್ಬರೂ ಕೂತಿದ್ದಾಗ ಹೀಗೊಂದು ಮಾತು ಹರಿಯಿತು. ಅಯ್ಯಾಮಣಿಯವರು "ರಾಮಚಂದ್ರಾ ನೀನು ಏಕೆ ಕಡಿಮೆ ಸಂಭಾವನೆಗೆ ಕಾರ್ಯಕ್ರಮ ಒಪ್ಪಿಕೊಂಡು ಪಕ್ಕ ವಾದ್ಯ ಕಲಾವಿದರಿಗೆಲ್ಲಾ ಕಡಿಮೆ ಹಣ ಕೊಡ್ತೀಯಾ" ಅಂತ ಕೇಳಿದರು. ಅದಕ್ಕೆ ರಾಮಚಂದ್ರರಾಯರು "ನನ್ನ ಸಂಸಾರ ತಾಪತ್ರಯ ನಿನಗೆ ಗೊತ್ತಲ್ಲ. ಮನೆ ತುಂಬಾ ಮಕ್ಕಳು" ಅಂದರು. ಅದಕ್ಕೆ ಅಯ್ಯಾಮಣಿ "ನಿನ್ನನ್ನು ಬೀದಿ ಲೈಟ್ ಕಂಬಕ್ಕೆ ಕಟ್ಟಿ ಹೊಡಯಬೇಕು" ಅಂದರು. ರಾಮಚಂದ್ರರಾಯರು "ಯಾಕೆ ನಾನು ಈಗೇನು ತಪ್ಪು ಮಾಡಿದೆ" ಅಂತ ಕೇಳಿದರು. ಅದಕ್ಕೆ ಅಯ್ಯಾಮಣಿ " ತಪ್ಪು ಮಾಡಿದ್ದು ಈಗಲ್ಲ, ಸಂಸಾರವನ್ನು ಇಷ್ಟೊಂದು ದೊಡ್ಡದು ಮಾಡಿಕೋ ಅಂತ ಯಾರು ನಿನಗೆ ಹೇಳಿದ್ದು. ನೀನು ಮಾಡಿದ ತಪ್ಪಿಗೆ ನಮಗೆಲ್ಲಾ ಯಾಕೆ ಶಿಕ್ಷೆ ಕೊಡ್ತೀಯಾ" ಅಂದಾಗ ಸುತ್ತ ಮುತ್ತಲು ಇವರಿಬ್ಬರ ಸಂಭಾಷಣೆ ಕೇಳುತ್ತಿದ್ದವರು ನಗುತ್ತಾ ಹೋದರು.

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ನಿರ್ಮಲ ಸೀತಾರಾಮನ್ ಅವರನ್ನು ಡಿಫೆನ್ಸ್ ಮಿನಿಸ್ಟ್ರೀ ಎಂದು ಕರೆಯಬಹುದೆ?
- ನಮ್ಮ ರೈತ ಏನನ್ನು ಬೇಕಾದರೂ ಬೆಳೆಯಬಲ್ಲ, ನೀರೊಂದನ್ನು ಬಿಟ್ಟು.
- ಇಡೀ ಭಾರತ ಎರಡು ಭಾಷೆಯಲ್ಲಿ ಮಾತನಾಡುತ್ತದೆ - ಒಂದು ರಾಮಾಯಣ, ಇನ್ನೊಂದು ಮಹಾಭಾರತ.
- ಸೌಟಿಗೇನು ಗೊತ್ತು ಪಾಯಸದ ರುಚಿ.
- ಮಳೆ ಎನ್ನುವುದು ಭೂಮಿಯ ಮೇಲೆ ಅವತರಿಸುವ ಆಕಾಶ.
- ವಾಟ್ ಈಸ್ ಟಾಟ್ ಈಸ್ ನಾಟ್ ಈಕ್ವಿವಲೆಂಟ್ ಟು ವಾಟ್ ಈಸ್ ಲರ್ನ್ಡ್.
- ಬನ್ನಿ ಭೇಟಿ ಮಾಡಿ, ಬಹುದಿನಗಳಿಂದ ನೀವು ಭೇಟಿ ಮಾಡಿಲ್ಲದ ವ್ಯಕ್ತಿಯನ್ನು - ಅದು ನೀವೇ!
- ಶಿಕ್ಷಣ ಎಂದರೆ ನಮ್ಮ ಅಜ್ಞಾನವನ್ನು ನಾವೇ ನಿಧಾನವಾಗಿ ಕಂಡುಕೊಳ್ಳುವುದು.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ದತ್ತು ಪಡೆದ ಮಗು ಬೆಳೆಯುವುದು ತಾಯಿಯ ಹೃದಯದಲ್ಲಿ, ಹೊಟ್ಟೆಯಲ್ಲಲ್ಲ.
- ಇಟ್ ಈಸ್ ನಾಟ್ ದಿ ಮೌಂಟನ್ಸ್ ದಟ್ ವಿ ಕಾಂಕರ್ ಬಟ್ ಅವರ್ ಸೆಲ್ವ್ಸ್.
- ದ್ವೇಷ ಸಕಾರಣವಾಗಿರಬೇಕು.
- ಸಣ್ಣ ಸಣ್ಣ ವಿಷಯಗಳಿಗೆ ಜಗಳವಾಡುವುದು ಒಳ್ಳೆಯದು. ಆಗ ದೊಡ್ಡ ವಿಷಯಗಳಿಲ್ಲ ಎಂದರ್ಥ.
- ಲೆಟ್ ಮೈ ವರ್ಡ್ಸ್ ಬಿ ಲೈಕ್ ವೆಜಿಟಬಲ್ಸ್ - ಟೆಂಡರ್ ಅಂಡ್ ಸ್ವೀಟ್. ಬಿಕಾಸ್ ಟುಮಾರೊ ಐ ಮೆ ಹ್ಯಾವ್ ಟು ಈಟ್ ದೆಮ್.
- ಆರೋಗ್ಯದ ಬಗ್ಗೆ ಸದಾ ಚಿಂತೆ ಮಾಡುತ್ತಿರುವುದು ಆರೋಗ್ಯಕರ ಲಕ್ಷಣವಲ್ಲ.
- ದೇವರ ಅನುಗ್ರಹದಿಂದಾಗಿ ನಾನು ದೇವರಲ್ಲಿ ನಂಬಿಕೆ ಇಟ್ಟಿಲ್ಲ.
- ಮನುಷ್ಯರನ್ನು ಚಿಕ್ಕ ಚಿಕ್ಕ ವ್ಯಕ್ತಿಗಳನ್ನಾಗಿ ನೋಡುವಷ್ಟು ಎತ್ತರವಾಗಿ ಬೆಳೆಯಬಾರದು.

❋

# ಬ್ರಾಡ್ಮನ್ರ ಟೋಪಿ

**- ಪಾಲಹಳ್ಳಿ ವಿಶ್ವನಾಥ್**

**ಕಿ**ರಣಕುಮಾರ ಎಲ್ಲರೂ ಅಸೂಯೆ ಪಡುವಂತಹ ಯುವಕ. ನೋಡಲು ಸುಂದರಾಂಗ, ಶ್ರೀಮಂತ ಮನೆತನದವ, ಓದಿನಲ್ಲಿ ಮುಂದಿದ್ದು ದೊಡ್ಡ ಕಂಪನಿಯಲ್ಲಿ ಕೆಲಸವೂ ಇದ್ದಿತು. ಇನ್ನೇನು ಬೇಕು ಎನ್ನುವಷ್ಟರಲ್ಲಿಯೇ ಸುಭಾಷಿಣಿಯಂತಹ ಯುವತಿಯ ಸ್ನೇಹವನ್ನೂ ಗಳಿಸಿದ್ದ. ಆಕೆಯೂ ಸುಂದರಿ, ಪತ್ರಕರ್ತೆ. ಅದಲ್ಲದೆ ಅವರಿಬ್ಬರೂ ಕೆಲವೇ ತಿಂಗಳುಗಳಲ್ಲಿ ಮದುವೆಯಾಗುವುದಿದ್ದರು. ಇದೆಲ್ಲಕ್ಕಿಂತ ಹೆಚ್ಚೆಂದರೆ ನಮ್ಮ ಕಿರಣಕುಮಾರ ಬಹಳ ಒಳ್ಳೆಯ ಹುಡುಗ. ಯಾವಾಗಲೂ ನಗು ಮುಖದ ಈ ಯುವಕನಿಗೆ ನೂರಾರು ಗೆಳೆಯರು.

**ಆ ಟೋಪಿ ತಲೆಯ ಮೇಲಿದ್ದರೆ ಸಿಕ್ಸರ್ ಫೋರ್‌ಗಳ ಸುರಿಮಳೆ!**

ಆದರೆ ಒಂದು ವಿಷಯದಲ್ಲಿ ಮಾತ್ರ ವಿಧಿ ಅವನಿಗೆ ಕೈಕೊಟ್ಟಿತ್ತು. ಅದು ಅವನ ಕ್ರಿಕೆಟ್ ಆಟ! ಅವನ ಬ್ಯಾಟಿಂಗ್, ಪಾಪ ಕಳಪೆ ಎಂದರೂ ಅದು ಹೆಚ್ಚೇ. ಅವನಿಗೂ ಕ್ರಿಕೆಟ್ ಎಂದರೆ ಮೊದಲಿನಿಂದಲೂ ಹುಚ್ಚು. ಅವನ ತಂದೆಯೂ ಕ್ರಿಕೆಟ್ ಪ್ರೇಮಿ. ಕಿರಣ ಶಾಲೆಯಲ್ಲಿದ್ದಾಗಲೇ ಅವನಿಗೆ ಒಂದು ಕ್ರಿಕೆಟ್ ಸೆಟ್ ತೆಗೆದುಕೊಟ್ಟಿದ್ದರು. ರಸ್ತೆಯವರೆಲ್ಲಾ ಸೇರಿ ಕ್ರಿಕೆಟ್ ಆಡುತ್ತಿದ್ದರು. ಕಿರಣನ ಹತ್ತಿರ ಕ್ರಿಕೆಟ್ ಬ್ಯಾಟ್ ಇತ್ಯಾದಿ ಇದ್ದಿದ್ದರಿಂದ ಅವನನ್ನು ಆಟಕ್ಕೆ ಸೇರಿಸಿಕೊಳ್ಳುತ್ತಿದ್ದರು. ಸ್ವಲ್ಪ ಬೋಲ್ ಮಾಡುವುದನ್ನೂ ಕಲಿತ. ಆದರೆ ಬ್ಯಾಟಿಂಗ್ ಸೊನ್ನೆ! ಬೆಳೆದು ಕಾಲೇಜಿಗೆ ಹೋದರೂ ಏನೂ ಬದಲಾಗಲಿಲ್ಲ. ಅವನ ಬೋಲಿಂಗ್ ಪರ್ವಾಗಿಲ್ಲ ಎನಿಸಿಕೊಂಡಿತ್ತು. ಅಂತೂ ಕಾಲೇಜಿನ ತಂಡಕ್ಕೆ ಆಡುತ್ತಿದ್ದ. ಈಗ ಬಸವನಗುಡಿ ತಂಡಕ್ಕೆ ಸೇರಿದ್ದ. ಶನಿವಾರ, ಭಾನುವಾರ ನೆಟ್ ಪ್ರಾಕ್ಟೀಸ್ ಇಲ್ಲ ಮ್ಯಾಚುಗಳು. ಆದರೆ ಬ್ಯಾಟಿಂಗ್? ಅವನು ಎಡಕ್ಕೆ ಹೊಡೆಯಲು ಪ್ರಯತ್ನಿಸಿದರೆ ಬಲಕ್ಕೆ ಹೋಗುತ್ತಿತ್ತು. ಮುಂದೆ ಹೊಡೆಯಲು ಹೋದರೆ ಹಿಂದೆ ಹೋಗುತ್ತಿತ್ತು. ಹೀಗೆ ಚೆಂಡು ಅವನು ಹೇಳಿದ ಕಡೆ ಹೋಗದೆ ಬೇರೆಯ ದಿಕ್ಕನ್ನೇ ಅನುಸರಿಸುತ್ತಿತ್ತು. ತನ್ನ ಬ್ಯಾಟಿಂಗ್ ಸುಧಾರಿಸಿಕೊಳ್ಳಲು ಕಿರಣಕುಮಾರ ಅನೇಕ ಕ್ರಿಕೆಟ್ ಪುಸ್ತಕಗಳನ್ನು ಓದುತ್ತಿದ್ದ. ಇದರಿಂದಾಗಿ ಕ್ರಿಕೆಟ್ ಬಗ್ಗೆ ಅವನಷ್ಟು ಯಾರಿಗೂ ತಿಳಿದಿರಲಿಲ್ಲ. ಸುಭಾಷಿಣಿಗೆ ಇದು ಮುಖ್ಯ ಎನಿಸಲಿಲ್ಲ. ನಿನಗೆ ಎಲ್ಲವೂ ಇದೆ, ಬ್ಯಾಟಿಂಗ್ ಬಗ್ಗೆ ಏಕೆ ಅಷ್ಟು ತಲೆಕೆಡಿಸ್ಕೊಂಡಿದ್ದೀಯ ಎನ್ನುವಳು. 'ಜೀವನದಲ್ಲಿ ಸಕಲಕಲಾವಲ್ಲಭನಾಗಬೇಕಿಲ್ಲ' ಎಂದು ರೇಗಿಸುವಳು.

ಒಂದು ದಿನ ಕಿರಣಕುಮಾರ ರಸೆಲ್ ಮಾರ್ಕೆಟ್ಟಿಗೆ ಹೋದ. ಅಲ್ಲಿ 'ತಾರಾಪೂರ್ ಮತ್ತು ಮಕ್ಕಳು' ಅಂಗಡಿ ಹಿಂದಿನ ಕಾಲದಿಂದಲೂ ಮೈಸೂರು ಪ್ರಾಂತ್ಯದ ಆಟಗಾರರಿಗೆಲ್ಲಾ ಬ್ಯಾಟು, ಬಾಲು, ವಿಕೆಟ್, ಕ್ಯಾಪು ಇತ್ಯಾದಿ ಕ್ರಿಕೆಟ್ ಸಾಮಗ್ರಿಗಳನ್ನು ಒದಗಿಸುತ್ತಿತ್ತು. ಶ್ರೀ ತಾರಾಪೂರರು ಒಂದು ಕಾಲದಲ್ಲಿ ರಣಜಿ ಟ್ರೋಫಿಯಲ್ಲಿ ಆಡಿದ್ದರು ಕೂಡ. ಅಂಗಡಿಯ ವೃದ್ಧ ಮಾಲೀಕರು ಅವನನ್ನು ಸ್ವಾಗತಿಸಿದರು. ಕಿರಣಕುಮಾರ ಬ್ಯಾಟುಗಳನ್ನು ನೋಡಲು ಶುರುಮಾಡಿದ.

ಹಾಗೆಯೇ ಅಲ್ಲಿ ಇಲ್ಲಿ ಕಣ್ಣಾಡಿಸುತ್ತಿದ್ದರು. ಗೋಡೆಯ ಮೇಲೆ ಒಂದು ಕ್ರಿಕೆಟ್ ಟೋಪಿ - ಕ್ಯಾಪ್ ಕಾಣಿಸಿತು. ಹಸಿರು ಬಣ್ಣ ವಿದ್ದಿತು. ಏನೋ ವಿಶೇಷವಿದ್ದಿರಬೇಕು ಅಂದುಕೊಂಡ. ಮಾಲೀಕರನ್ನು ಅದರ ಬಗ್ಗೆ ಕೇಳಿದ. ಆಗ ಅವರು, ಇದು ಬಹಳ ಸ್ಪೆಷಲ್ ಕ್ಯಾಪ್. ಬ್ರಾಡ್ಮನ್ ಒಂದು ಸತಿ ಬೆಂಗಳೂರಿಗೆ ಬಂದಿದ್ದರು. ಆಗ ಇಲ್ಲಿಗೆ ಬಂದಿದ್ದರು. ಭಾರತದ ಮರ ವಿಶೇಷ ಎಂದು 3-4 ಬ್ಯಾಟುಗಳನ್ನೂ ಖರೀದಿ ಮಾಡಿದರು. ಆದರೆ ಹೋಗುವಾಗ ಅವರ ಟೋಪಿಯನ್ನು ಮರೆತುಹೋದರು. ನಾವು ಅವರಿಗೆ ಕೇಬಲ್ ಕಳಿಸಿದಾಗ ಅವರು, ಅದು ಅದೃಷ್ಟದ ಟೋಪಿ, ಇಂಗ್ಲೆಂಡಿನಲ್ಲಿ ಸೆಂಚುರಿಗಳನ್ನು ಬಾರಿಸಿದಾಗ ನಾನು ಅದನ್ನೇ ಹಾಕಿಕೊಂಡಿದ್ದೆ ಎಂದರು. ಕಳಿಸಿಕೊಡೋಣವೇ ಎಂದು ಕೇಳಿದಾಗ ಬೇಡ, ನಿಮ್ಮ ಅಂಗಡಿಯಲ್ಲೇ ಇಟ್ಟುಕೊಳ್ಳಿ ಎಂದರು. ಅದನ್ನು ಮುಟ್ಟಬಹುದೇ ಎಂದು ಕಿರಣಕುಮಾರ್ ಕೇಳಿದಾಗ ಮಾಲೀಕರು ಅದನ್ನು ತೆಗೆದು ಅವನಿಗೆ ಕೊಟ್ಟರು. ಆ ಟೋಪಿಯನ್ನು ಸವರುತ್ತಾ ಅವನು ಮನಸ್ಸಿನಲ್ಲಿ 'ದಿ ಗ್ರೇಟ್ ಬ್ರ್ಯಾಡ್ಮನ್' ಎಂದುಕೊಂಡ. ಆ ಟೋಪಿ ಕಿರಣಕುಮಾರನನ್ನು ಬಹಳ ಆಕರ್ಷಿಸಿತು. 'ಇದರ ಬೆಲೆ ಎಷ್ಟು?' ಎಂದು ಕೇಳಿದಾಗ ಮಾಲೀಕರಿಗೆ ಸ್ವಲ್ಪ ಮುಜುಗರವಾಯಿತು. ''ಅಲ್ಲರೀ, ಕೋಹಿನೂರಿಗೆ ಬೆಲೆ ಕಟ್ಟಲು ಆಗುತ್ತದೆಯೇ? ಅದಲ್ಲದೆ ಇದು ಮಾರಲು ಇಟ್ಟಿಲ್ಲ ಇದು ನಮ್ಮ ಅಂಗಡಿಗೆ ಶ್ರೀರಕ್ಷೆಯ ತರಹ'' ಎಂದರು. ಎಷ್ಟಾದರೂ ಪರವಾಗಿಲ್ಲ, ಹೇಳಿ ಎಂದ. ಕೃಷ್ಣ ಕುಮಾರ ಮಾಲೀಕರಿಗೆ ಕೋಪ ಬಂದಿತು. ಆಗಲೇ ಹೇಳಲಿಲ್ಲವೆ? ಎಂದರು. ಕಿರಣ್ ಮನೆಗೆ ಹೋದರೂ ಆ ಟೋಪಿಯನ್ನು ಮರೆಯಲಿಲ್ಲ. ಮುಂದಿನ ದಿನವೂ ಆ ಅಂಗಡಿಗೆ ಹೋಗಿ ಆ ಟೋಪಿಯ ದರ್ಶನ ಮಾಡುತ್ತಾ ನಿಂತಿದ್ದನ್ನು ನೋಡಿದ ಆ ಅಂಗಡಿಯ ಮ್ಯಾನೇಜರ್ ''ನಿಮಗೆ ಈ ಟೋಪಿ ಅಷ್ಟು ಇಷ್ಟವೆ?'' ಎಂದಾಗ ಕಿರಣಕುಮಾರ ಹೌದು ಎಂದ. ಎಷ್ಟು ಕೊಡುತ್ತೀರ? ಎಂದ ಮ್ಯಾನೇಜರನು.

''ಮಾಲೀಕರಿಗೆ ಏನು ಹೇಳುತ್ತೀರ'' ಎಂದು ಕಿರಣ ಕೇಳಿದ. ಆಗ ಮ್ಯಾನೇಜರ್ ಈ ತರಹ ಟೋಪಿಗಳು ಬಹಳ ಇವೆ. ನಿಮಗೆ ಇದನ್ನು ಕೊಟ್ಟು ಬೇರೆಯದನ್ನು ಅಲ್ಲಿ ಇಟ್ಟರೆ ಅವರಿಗೆ ಏನೂ ಗೊತ್ತಾಗುವುದಿಲ್ಲ ಹೇಗೂ ಅವರಿಗೆ ಕಣ್ಣು ಮಂದವಾಗ್ತಾ ಇದೆ.

ಕಿರಣಕುಮಾರ್ ಟೋಪಿಯನ್ನು ತಂದಾಗ ಅವನ ತಂದೆಗೂ ಸಂತೋಷವಾಯಿತು. ಬ್ರಾಡ್ಮನ್ ಟೋಪಿ ಎಂದು ಅವರು ಕಣ್ಣಿಗೆ ಒತ್ತಿಕೊಂಡು, ಮನೆಯಲ್ಲಿ ಪೂಜೆಯ ಕೋಣೆಯಲ್ಲಿ ಇರಲಿ ಎಂದರು. ಕಿರಣ ಇಲ್ಲ ನಾನು ಇದನ್ನು ಹಾಕಿಕೊಂಡು ನಾಳೆ ಆಡಬೇಕು ಎಂದ. ರಾತ್ರಿ ಆ ಟೋಪಿಯನ್ನೇ ಹಾಕಿಕೊಂಡು ಮಲಗಿದ ಕೂಡ. ಬೆಳಿಗ್ಗೆ ಬೇಗನೇ ಎದ್ದು ಕ್ರಿಕೆಟ್ ಮೈದಾನಕ್ಕೆ ಹೋದ. ಶನಿವಾರವಲ್ಲವೆ, ಎಮ್.ಎನ್. ಪಾಚು ಟೂರ್ನಮೆಂಟ್ ನಡೆಯುತ್ತಿತ್ತು. ಬೆಂಗಳೂರಿನ ವಿವಿಧ ಬಡಾವಣೆಗಳ ಮಧ್ಯೆಯ ಪಂದ್ಯಗಳು ಆಗಲೇ ಕಿರಣಕುಮಾರನ ಬಸವನಗುಡಿ ಟೀಮ್ ಸೆಮಿಫೈನಲ್ ತಲುಪಿದ್ದರು. ಅಂದಿನ ಪಂದ್ಯ ಮಲ್ಲೇಶ್ವರದವರ ವಿರುದ್ಧ. ಅವರು ಮೊದಲು ಆಡಿ 150 ರನ್ ಹೊಡೆದು ಔಟಾಗಿದ್ದರು. ಅದಕ್ಕೆ ಉತ್ತರವಾಗಿ ಬಸವನಗುಡಿಯವರು ಎಂಟು ವಿಕೆಟ್‌ಗಳಿಗೆ 100 ರನ್ ಗಳಿಸಿದರು. ಇನ್ನು 50 ರನ್ ಹೊಡೆಯಬೇಕು. ಆದರೆ ಉಳಿದಿದ್ದವರೆಲ್ಲಾ ಚಿಲ್ಲರೆ ಬ್ಯಾಟ್‌ಗಳು. ಕಿರಣಕುಮಾರ 10ನೆಯವನಾಗಿ ಹೋದ. ಅವನ ತಲೆಯಮೇಲೆ ಬ್ರಾಡ್‌ಮನರ ಟೋಪಿ ಭದ್ರವಾಗಿ ಕುಳಿತಿತ್ತು. ಯಾರೋ ಹೊಸ ಕ್ಯಾಪ್ ಎಂದು ಕೂಗಿದರು. ಎಲ್ಲೋ ಒಂದೆರಡು

ರನ್ ಹೊಡೆದು ವಾಪಸ್ಸು ಬರುತ್ತಾನೆ ಎಂದು ಕೊಂಡರು. ಆದರೆ ಮೊದಲನೆಯ ಚೆಂಡನ್ನೆ ಬೌಂಡರಿಗೆ ಕಳಿಸಿದ ಕಿರಣಕುಮಾರ. ಅಡ್ಡೇಟಿನಮೇಲೆ ಗುಡ್ಡೇಟು ಎಂದ ಒಬ್ಬ, ಮುಂದಿನ ಬಾಲೂ ನಾಲ್ಕು, ಅದೂ ಒಳ್ಳೆಯ ಕವರ್ ಡ್ರೈವ್! ತಂಡದವರು ಚಪ್ಪಾಳೆ ಹೊಡೆಯುತ್ತಾ, ಏನಪ್ಪ ಈವತ್ತು ಇವನದ್ದು ಎಂದು ಮಾತನಾಡಿಕೊಳ್ಳುತ್ತಿದ್ದರು. ಮುಂದಿನ ಚೆಂಡನ್ನು ಹಿಂದೆ ಹೋಗಿ ಮುಟ್ಟಿ ಅಲ್ಲೇ ಇಳಿಬಿಟ್ಟ, ನೋಡ್ರೊ! ಎಷ್ಟು ಒಳ್ಳೆ ಡಿಫೆನ್ಸ್ ಎಂದ ಇನ್ನೊಬ್ಬ, ಮುಂದಿನ ಚೆಂಡು ಬೋಲರಿನ ತಲೆಯ ಮೇಲೆ ಸಿಕ್ಸರ್‌ಗೆ ಹೋಯಿತು. ''ಏನ್ರೋ ಇದು ಕಿರಣ್ ಈ ತರಹ ಆಡ್ತಾ ಇದಾನೆ, ಮತ್ತೆ ಸ್ವೀಪ್! ನಾಲ್ಕು ರನ್. ಕಿರಣ್ ಪ್ರತಿ ಚೆಂಡು ಆಡುವಾಗಲೂ ತನ್ನ ತಲೆಯ ಮೇಲೆ ಕೈ ಹಾಯಿಸಿ ಟೋಪಿಯನ್ನು ಮುಟ್ಟಿಕೊಳ್ಳುತ್ತಿದ್ದ. ಕಿರಣ್ ಕಿರಣ್ ಎಂದು ಬಸವನಗುಡಿಯ ಅಭಿಮಾನಿಗಳು ಕೂಗಲು ಶುರುಮಾಡಿದರು. ಒಂದು ಸಿಕ್ಸರಿನ ಜೊತೆ ಕಿರಣ್ 30 ಎಸೆತಗಳಲ್ಲಿ 50 ರನ್ ತಲುಪಿದ್ದ. ಅವನ ತಂಡವೂ ಗೆದ್ದಿತು. ಎಲ್ಲರೂ ಕಿರಣನನ್ನು ಎತ್ತಿ ಓಡಾಡಿಸಿದರು. ಮನೆಗೆ ಹೋಗುತ್ತಾ ಕಿರಣ ಇದೆಲ್ಲ ಹೇಗಾಯಿತೋ ಎಂದುಕೊಂಡ. ತಲೆಯ ಮೇಲಿನ ಟೋಪಿಯ ಮಹತ್ವವೋ ಏನೋ ಎಂದುಕೊಂಡ. ಏನೇ ಆಗಲಿ ಖುಷಿಯಾಗಿ ತನ್ನ ಬೆನ್ನನ್ನೂ ತಟ್ಟಿಕೊಂಡ. ಮನೆಗೆ ಹೋದಾಗ ತಂದೆ ಕೇಳಿದಾಗ, ನಾನು ಬಸವನಗುಡಿಯನ್ನು ಗೆಲ್ಲಿಸಿದೆ ಎಂದು ತನ್ನ ಪ್ರತಾಪವನ್ನು ಕೊಚ್ಚಿಕೊಂಡ.

ಮುಂದಿನ ಪಂದ್ಯ ರಾಜಾಜಿನಗರದ ವಿರುದ್ಧ. ಈ ಬಾರಿ ಕಿರಣಕುಮಾರನನ್ನು ಆಡಲು ಸ್ವಲ್ಪ ಮೊದಲೇ ಕಳಿಸಿಕೊಟ್ಟರು. ಐದು ವಿಕೆಟ್‌ಗಳು ಬಿದ್ದಾಗ ಆಡಲು ಹೋದ. ಕಿರಣ್ ಈ ಬಾರಿಯೂ 50ಕ್ಕೂ ಹೆಚ್ಚು ರನ್ ಹೊಡೆದು ತನ್ನ ತಂಡವನ್ನು ಗೆಲ್ಲಿಸಿದ. ಹೀಗೇ ಇನ್ನೆರಡು ಪಂದ್ಯಗಳನ್ನು ಗೆದ್ದ ನಂತರ ಕಿರಣಕುಮಾರನೇ ಓಪನರ್ ಅಂದರೆ ಮೊದಲನೆಯ ಆಟಗಾರನಾದ. ಬಸವನಗುಡಿಯೇನೋ ಪ್ರತಿಯೊಂದು ಪಂದ್ಯವನ್ನೂ ಗೆಲ್ಲುತ್ತಿತ್ತು. ಪತ್ರಿಕೆಗಳಲ್ಲೆಲ್ಲಾ ಕಿರಣಕುಮಾರನದ್ದೇ ಸುದ್ದಿ. ಈ ಬಾರಿ ರಣಜಿ ಟ್ರೋಫಿಗೆ ಆಯ್ಕೆ ಆಗಬಹುದು ಎಂದು ಗಾಳಿಸುದ್ದಿ ಇದ್ದಿತು.

ಇದೆಲ್ಲ ಆಗುತ್ತಿದ್ದಾಗ ಕಿರಣಕುಮಾರ ಹಿಂದಿನ ತರಹ ಉಳಿಯಲಿಲ್ಲ. ಅವನ ಕ್ರಿಕೆಟ್ ಪ್ರತಿಭೆ ನಿಧಾನವಾಗಿ ಅವನ ತಲೆಗೆ ಹೋಗುತ್ತಿತ್ತು. ನಾನು ಬಹಳ ಒಳ್ಳೆ ಆಟಗಾರ ಎನ್ನುವುದು ಅವನ ಮನಸ್ಸಿಗೆ ಬಂದು ಬಿಟ್ಟಿತ್ತು. ತಾನಿಲ್ಲದೆ ತನ್ನ ತಂಡ ಸೋಲುತ್ತದೆ ಎಂದು ಪತ್ರಿಕೆಗಳಲ್ಲಿ ಹೇಳಲಾರಂಭಿಸಿದ ತನ್ನ ಜೊತೆಯವರೆನ್ನೆಲ್ಲಾ ಮೂದಲಿಸಲು ಶುರುಮಾಡಿದ. ಯಾರಾದರೂ ಸಲ್ಪ ಚೆನ್ನಾಗಿ ಆಡುತ್ತಿದ್ದರೆ ಅವನನ್ನು ಬೇಕೆಂತಲೇ ರನ್ ಔಟ್ ಮಾಡಿಸುತ್ತಿದ್ದ. ಬಸವನಗುಡಿ ವಿರುದ್ಧ ಆಡುತ್ತಿದ್ದ ತಂಡಗಳಿಗೂ ಅವನ ನಡತೆ ಇಷ್ಟ ಬರಲಿಲ್ಲ. ಕೆಲವು ದೇಶಗಳ ಆಟಗಾರರು ತರಹ ಎದುರಾಳಿಗಳನ್ನು ಕೀಟಲೆ ಮಾತುಗಳಿಂದ ತೊಂದರೆ ಕೊಡುತ್ತಿದ್ದ. ಕಿರಣಕುಮಾರನ ರನ್‌ಗಳು ಹೆಚ್ಚಾಗುತ್ತ ಅವನ ಸ್ನೇಹಿತರ ಸಂಖ್ಯೆಯೂ ಕಡಿಮೆಯಾಗತೊಡಗಿತು. ಮೊದಲು ಹತ್ತಿರವಿದ್ದವರೆಲ್ಲ ಈಗ ಅವನನ್ನು ಕಂಡರೆ ದೂರ ಹೋಗುತ್ತಿದ್ದರು. ಮನೆಯಲ್ಲಿ ಆಫೀಸಿನಲ್ಲಿ ಎಲ್ಲ ಕಡೆಯೂ ಕಿರಣಕುಮಾರನ ಕೆಟ್ಟ ಮಾತುಗಳು ಮತ್ತು ವರ್ತನೆ ಜನರನ್ನು ಘಾಸಿಗೊಳಿಸುತ್ತಿತ್ತು.

ಇವೆಲ್ಲಾ ನಡೆಯುತ್ತಿದ್ದಾಗ ಸುಭಾಷಿಣಿ ದೂರದ ಡೆಲ್ಲಿಯಲ್ಲಿದ್ದಳು. ಆಗಾಗ್ಗೆ ಫೋನ್ ಮಾಡುತ್ತಿದ್ದಳು. ಅವಳಿಗೆ ಕಿರಣ್ ಬದಲಾಗಿರುವಂತೆ ಅನ್ನಿಸಿತು. ಅದಲ್ಲದೆ ಕೆಲವು ಸ್ನೇಹಿತರೂ ಅವನ ದುರ್ವರ್ತನೆಯ ಬಗ್ಗೆ ಫೋನ್ ಮಾಡಿದ್ದರು. ಅಂತು ಊರಿಗೆ ಬಂದ ನಂತರ ಕಿರಣಕುಮಾರನನ್ನು ಮಾತನಾಡಿಸಲು ಹೋದಳು. ಕಿರಣ್ ಮುಖ ಕೊಟ್ಟೇ ಮಾತಾಡಲಿಲ್ಲ, ಈಗ ಮದುವೆ ಬೇಡ ಎಂದು ಮಾತ್ರ ಹೇಳಿದ ಹಾಗೂ ಒಂದು ದಿನ ಪಾರ್ಕಿನಲ್ಲಿ ಕುಳಿತಿದ್ದಾಗ ಅವನ ಕಣ್ಣಿನಲ್ಲಿ ನೀರಿತ್ತು. ''ನೋಡು ಸುಭಾಷಿಣಿ ಮೊದಲು ಎಲ್ಲರೂ ನನ್ನನ್ನು ಮಾತಾಡಿಸುತ್ತಿದ್ದರು. ಈಗ ಯಾರೂ ನನ್ನ ಹತ್ತಿರ ಬರೋದಿಲ್ಲ. ಹಿಂದೆಯೂ ಏನೇನೋ ಮಾತಾಡ್ಕೋತಾರಂತೆ'' ಎಂದ. ಅದಕ್ಕೆ ಅವಳು ''ಕಿರಣ್ ಅವರಲ್ಲ ಕಾರಣ ನೀನು ಬದಲಾಯಿಸಿಬಿಟ್ಟಿದ್ದೀಯ. ಏನೋ ಬಹಳ ದೊಡ್ಡ ಆಟಗಾರನ ತರಹಾ ಆಡ್ತೀಯಂತೆ. ಎಲ್ಲರನ್ನು ಬೈಯ್ತಿಯಂತೆ'' ಎಂದಳು. ಹೌದು ಆಟಾನೇ ಬರೋಲ್ಲ ಬಂದು ಸುಮ್ಮನೆ ತೊಂದರೆ ಕೊಡ್ತಾರೆ ಅಂದ. ನೀನೇ ಜ್ಞಾಪಿಸಿಕೋ ನೀನು ಹೇಗಿದ್ದೆ ಅಂತ ಎಂದಳು. ಆದರೆ ಹಳೇ ಕಥೆ. ಈಗ ನೋಡು ನನ್ನನ್ನು ರಣಜಿ ತಂಡಕ್ಕೆ ಸೇರಿಸಿಕೋಳ್ಳೋ ಮಾತು ಇದೆಯಂತೆ. ರಣಜಿ ನಾದರೂ ಆಡು ಮಂಜಿನಾದರು ಆಡು! ನೀನು ಹೀಗೇ ಇದ್ದರೆ ನನಗೂ ನೀನು ಬೇಡ ಎಂದಳು. ಸುಭಾಷಿಣಿ ಸರಿ ಎಲ್ಲಾದರೂ ಹಾಳಾಗಿ ಹೋಗು ಎಂದು ಕಿರಣ್ ಕೋಪ ಮಾಡಿಕೊಂಡು ಹೋರಟುಹೋದ.

ಆದರೆ ತನ್ನ ವರ್ತನೆ ಅವನಿಗೇ ಬೇಜಾರಾಯಿತು. ಮತ್ತೆ ಅವಳ ಮನೆಗೆ ಹೋದ. ಅವಳು ಇದೆಲ್ಲ ಹೇಗೆ ಆಯ್ತು ಎಂದು ಕೇಳಿದಳು. ಸರಿಯಾಗಿ ಗೊತ್ತಿಲ್ಲ ಈ ಟೋಪಿ ತಂದ ಮೇಲೆ ಇದೆಲ್ಲ ನಡೆದಿದೆ ಎಂದು ಎಲ್ಲವನ್ನೂ ತಿಳಿಸಿದ. ಸುಭಾಷಿಣಿಗೆ ಕೋಪ ಬಂದಿತು. ಪಾಪ ಆ ಅಂಗಡಿ ಮಾಲೀಕರಿಗೆ ಮೋಸ ಮಾಡಿ ತಂದಿದ್ದೀಯ ಅಂದಳು. ಅವರ ಮ್ಯಾನೇಜರ್ ಕೊಟ್ಟ ಎಂದ ಕಿರಣ. ''ಅವನು ಕೊಟ್ಟ ನೀನು ತೊಗೊಂಡೆ'' ಎಂದು ಸುಭಾಷಿಣಿ ರೇಗಿದಳು. ಬಾ ವಾಪಸ್ಸು ಕೊಟ್ಟು ಬರೋಣ ಎಂದಳು. ನನಗೆ ಆ ಟೋಪಿ ಇಲ್ಲದಿದ್ದರೆ ಆಡೋಕೆ ಆಗೋಲ್ಲ ಎಂದ. ಇಲ್ಲ ಬಾ ಎಂದು ತಾರಾಪೂರ್ ಮತ್ತು ಮಕ್ಕಳು ಅಂಗಡಿಗೆ ಬಲವಂತವಾಗಿ ಕರೆದುಕೊಂಡು ಹೋದಳು. ಅಂಗಡಿಯಲ್ಲಿ ವೃದ್ಧ ಮಾಲೀಕರೇ ಇದ್ದರು. ಅವರ ಹತ್ತಿರ ಹೋಗಿ ಇಬ್ಬರೂ ನಡೆದಿದ್ದನ್ನು ಹೇಳಿದರು. ಮಾಲೀಕರಿಗೆ ಮ್ಯಾನೇಜರ್ ಮೇಲೆ ಕೋಪ ಬಂದಿತು. ''ಏನೋ ಟೋಪಿ ಸರಿಯಿಲ್ಲವಲ್ಲಾ ಅಂದುಕೋತಿದ್ದೆ ಅವನು ಬರಲಿ ಮಾಡ್ತೀನಿ. ಸದ್ಯ ನೀವು ವಾಪಸ್ಸು ಮಾಡಿದರಲ್ಲ ಧನ್ಯವಾದಗಳು'' ಎಂದು ಸಂತೋಷಪಟ್ಟು ದುಡ್ಡು ವಾಪಸ್ಸು ಮಾಡಿ ಅವನಿಗೆ ಒಂದು ಬೇರೆ ಕ್ಯಾಪ್ ಕೊಟ್ಟರು.

ಮತ್ತೆ ಶನಿವಾರ ಬಂದಿತು. ಈಗ ಗರುಡಾಚಾರ್ ಟ್ರೋಫಿ ಪಂದ್ಯಗಳು ಶುರುವಾದವು. ಮೊದಲನೆಯ ಪಂದ್ಯ ಬಸವನಗುಡಿ ಮತ್ತು ಜಯನಗರದ ಮಧ್ಯೆ. ಕಿರಣಕುಮಾರ ಮೊದಲನೆಯ ಆಟಗಾರ. ಹೊಸ ಟೋಪಿ ಧರಿಸಿದ ಕಿರಣ ಬ್ಯಾಟು ಮಾಡಲು ಶುರುಮಾಡಿದ. ಬೋಲರ್ ಖ್ಯಾತ ರಣಜಿ ಆಟಗಾರ ಸುಂದರಮ್ ಹಿಂದಿನ ತಿಂಗಳು ಇವನ ಚೆಂಡಗಳನ್ನು ಬೌಂಡರಿಗೆ ಕಳಿಸಿದ್ದ. ಕಿರಣ್ ಈಗ ಮೊದಲನೆಯ ಚೆಂಡಿನಲ್ಲೇ ಬೋಲ್ಡ್ ಆಗಿ ಔಟಾದ! ಮುಂದಿನ ಪಂದ್ಯದಲ್ಲೂ ಕಿರಣಕುಮಾರ ಸೊನ್ನೆ! ಅವನ ತಂಡದವರು ನೀನು

ಶುರುವಿನಲ್ಲಿ ಬೇಡ 4 ವಿಕೆಟ್‌ಗಳು ಬಿದ್ದ ನಂತರ ಬಾ ಎಂದು ಅವನನ್ನು ಕೆಳಗೆ ಇಳಿಸಿದರು. ಅಲ್ಲೂ ಕಿರಣಕುಮಾರ ಸೊನ್ನೆ ಹೊಡೆಯುವುದನ್ನು ನಿಲ್ಲಿಸಲಿಲ್ಲ. ''ಏನಾಯಿತೋ ನಿನಗೆ ಕಿರಣ'' ಎಂದು ಎಲ್ಲರೂ ಕೇಳುವವರೇ! ಹೀಗೆಯೇ ಕಿರಣಕುಮಾರನ ಬ್ಯಾಟಿಂಗ್ ಸರದಿ ಕೆಳಕ್ಕೆ ಹೋಯಿತು. ಕಡೆಗೆ ಎರಡು ತಿಂಗಳ ಹಿಂದೆ ಇದ್ದಂತಹ ಜಾಗಕ್ಕೆ ಕಿರಣ್ ಮತ್ತೆ ವಾಪಸ್ಸು ಬಂದ. ಅವನ ನಿರಾಶೆಯನ್ನು ನೋಡಿ ಸುಭಾಷಿಣಿ ಕಿರಣಾ ಎಲ್ಲಾರೂ ಕಿರೀಟ ಹಾಕಿಕೊಂಡಿರೋಕೆ ಆಗೋಲ್ಲ ಅಲ್ವಾ ಎಂದು ಬುದ್ಧಿ ಹೇಳಿದಳು.

ಕಿರಣ ಮತ್ತೆ ಗೆಲುವಾದ. ಎಲ್ಲರೂ ಹಿಂದಿನಂತೆ ಅವನ ಭುಜದ ಮೇಲೆ ಕೈ ಹಾಕಿಕೊಂಡು ಮಾತಾಡುವವರೇ, ಗೇಲಿ ಮಾಡುವವರೇ! ಹಿಂದಿನಂತೆಯೇ ಸುಭಾಷಿಣಿ ಅವನ ಆಟವನ್ನು ನೋಡಲು ಬಂದು ಅವನನ್ನು ಕೀಟಲೆ ಮಾಡುತ್ತಿದಳು. ಬ್ಯಾಟ್ ಮಾಡಲು ಹೊರಟಾಗ ''ಬೇಗ ವಾಸಸ್ಸು ಬಂದು ಬಿಡು ನಿನಗೆ ಕಾಯ್ತಾ ಇರ್ತೀನಿ'' ಎನ್ನುವಳು. ಅವನೂ ನಗುತ್ತ ಹೋಗಿ ಮೈದಾನದಲ್ಲಿ ಒಂದೆರಡು ಕ್ಷಣವಿದ್ದು ಬ್ಯಾಟು ಬೀಸಿ ವಾಪಸ್ಸು ಬರುವನು. ಅವರಿಬ್ಬರ ಮದುವೆಯೂ ನಡೆಯಲಿತ್ತು. ಆಹ್ವಾನ ಪತ್ರಿಕೆಯನ್ನು ತಾರಾಪೂರ್ ಮತ್ತು ಮಕ್ಕಳು ಅಂಗಡಿಗೆ ಹೋಗಿ ಕೊಟ್ಟು ಮರೀದೆ ಬನ್ನಿ ಸಾರ್ ಎಂದು ವೃದ್ಧ ಮಾಲೀಕರಿಗೆ ಹೇಳಿದರು. ಹೊರಡುವ ಮುಂಚೆ ಕಿರಣ್ ಪಕ್ಕದ ಗೋಡೆಯತ್ತ ನೋಡಿದ ಬ್ರಾಡ್‌ಮನರ ಟೋಪಿ ಅಲ್ಲಿ ರಾರಾಜಿಸುತ್ತಿತ್ತು.

*(ಗಾಲ್ಫಾ ಸ್ಟೋರೀಸ್ – ಮ್ಯಾಜಿಕ್ ಪ್ಲಸ್ ಫೋರ್ಸ್)*

---

## ದೀಪಾವಳಿ

ದೀಪಾವಳಿಯಲ್ಲಿ ಪಟಾಕಿ ಹೊಡೆದರೆ
ಶಬ್ದ ಮಾಲಿನ್ಯ ಉಂಟಾಗುತ್ತೆ
ಸುರುಸುರುಬತ್ತಿ, ಮತಾಪು ಹಚ್ಚಿದರೆ
ವಾಯು ಮಾಲಿನ್ಯ ಉಂಟಾಗುತ್ತೆ
ಅಳಿಯನನ್ನ ಕರೆಯದೇ ಹೋದರೆ
ಸಾಕಷ್ಟು ಹಣ ಉಳಿತಾಯವಾಗುತ್ತೆ

# ಕಾಕಾಯಣ...

**- ಆರತಿ ಘಟಿಕಾರ್**

**(ಕೃಪೆ : ಅವಧಿ)**

**ಬಾ**ಲ್ಯದಲ್ಲಿ ನಾವೆಲ್ಲಾ ಅಮ್ಮನಿಂದಲೋ - ಇಲ್ಲ ಅಜ್ಜಿ ಹೇಳುತ್ತಿದ್ದ ಪಂಚತಂತ್ರ, ಜಾನಪದ ನೀತಿಕಥೆಗಳನ್ನು ಕೇಳುತ್ತಲೇ ಬೆಳೆದವರು. ಅದರಲ್ಲಿ ಬರುವ ಪ್ರಾಣಿ, ಪಕ್ಷಿ, ಮರ-ಗಿಡಗಳೆಲ್ಲಾ ಮಾತನಾಡುತ್ತಾ ತಮ್ಮ ಸಹಜ ವರ್ತನೆಯಿಂದಲೇ ಸುಂದರ ಸಂದೇಶಗಳ ಕಟ್ಟಿಕೊಡುತ್ತಾ, ಎಳೆ ಮನಸ್ಸುಗಳಿಗೆ ಕಲ್ಪನೆಯ ರೆಕ್ಕೆ-ಪುಕ್ಕ ಮೂಡಿ ಕುತೂಹಲದ ಬೆರಗು ಮೂಡಿಸುತ್ತಿದ್ದ ಕಾಲಘಟ್ಟವದು! ಈಗ ಸಾಮಾನ್ಯವಾಗಿ ಕಾರ್ಟೂನ್ ನೋಡುತ್ತಲೊ, ಇಲ್ಲಾ ಮೊಬೈಲ್ನಲ್ಲಿ ಆಟವಾಡಿಕೊಂಡೋ ಬಾಲ್ಯವನ್ನು ಕಳೆಯುತ್ತಿರುವ ಮಕ್ಕಳಿಗೆ ದೃಶ್ಯಗಳ ವೈಭವವೇ ಮರೆತು ಕಲ್ಪನೆಗಳ ರಂಗು ಕ್ರಮೇಣ ಮರೆಯಾಗುತ್ತಿದೆ.

ನಾನು ಸಣ್ಣವಳಿದ್ದಾಗ ಕೇಳಿದ ಕಾಗಕ್ಕ-ಗುಬ್ಬಕ್ಕನ ಕಥೆಯಲ್ಲಿ ಜೋರು ಮಳೆಗೆ ಗೂಡು ಮುರಿದು ತನಗೆ ಆಶ್ರಯ ಕೊಟ್ಟ ಗುಬ್ಬಕ್ಕ ಹಾಗೂ ಅದರ ಪುಟ್ಟ ಮರಿಗಳ ಮೇಲೆ ದುರ್ಬುದ್ಧಿಯನ್ನು ಪ್ರದರ್ಶಿಸಿ ಖಳನಾಯಕಿ ಯಾಗಿ ಮೆರೆದ ಕಾಗಕ್ಕ ಆಗ ನನಗೆ ಅತ್ಯಂತ ಕೆಟ್ಟ ಪಕ್ಷಿ ಎಂಬಂತೆ ತೋರಿದ್ದು ಸುಳ್ಳಲ್ಲ!



ಆದರೆ ಮುಂದೆ ಕೋಗಿಲೆಯ ಮೊಟ್ಟೆಗಳನ್ನು ಕಾಗೆ ತನ್ನವೆ ಎಂದು ಪ್ರೀತಿಯಿಂದ ಸಾಕಿ ಮೋಸ ಹೋಗುವ ಕಥೆ ಕೇಳಿದಾಗ ಪಾಪದ ಕಾಗೆ ಎಂದು ಅದರ ಮೇಲೆ ಕರುಣಾರಸ ಹರಿದು ಕಟ್ಟೆಯೊಡೆದಿತ್ತು.

ತನ್ನ ಮರಿಗಳನ್ನು ಸಾಕಿ ಸಲಹುವ ತಾಯಿ ಕರ್ತವ್ಯವನ್ನೂ ಕಾಗಕ್ಕನಿಗೆ ಹೊರಗುತ್ತಿಗೆ (ಸಾಫ್ಟ್‌ವೇರ್ ಕಂಪನಿಗಳಂತೆ ಔಟ್ ಸೋರ್ಸಿಂಗ್!) ನೀಡಿ ಸಂಗೀತ ಕಛೇರಿಯಲ್ಲಿ ಮುಳುಗುವ ಸೋಮಾರಿ ಕೋಗಿಲೆ ಮಾತ್ರ ತನ್ನ ಗಾನ ಸಿರಿಗೆ ಅನಾದಿ ಕಾಲದಿಂದಲೂ ಕವಿಗಳ ಕೃತಿಗಳಲ್ಲಿ ಗೌರವದಿಂದ ಮೆರೆಯುವ ಪಕ್ಷಿಯಾಗಿಬಿಟ್ಟಿದೆ!

ನವಿಲು ಕುಣಿಯೋದು ನೋಡಿ ಕೆಂಭೂತ ಕುಣೀತು ಎಂದು ಕೆಂಭೂತಕ್ಕೆ ಟಾಂಗ್ ಕೊಡುತ್ತಾ, ಕೋಗಿಲೆ ಹಾಡಿತು ಅಂತ ಕಾಗೆ ಹಾಡಬಲ್ಲದೆ? ಎಂದೆಲ್ಲ ಪ್ರಾಣಿಗಳ ರೂಪ, ನಡತೆಗಳನ್ನು ಹೋಲಿಕೆ ಮಾಡಿ ಮೂದಲಿಸಿದರೆ ಮನುಷ್ಯರ ಗುಣ-ಸ್ವಭಾವಗಳ ಅತಿರೇಕೆಗಳಿಗೂ ಪ್ರಾಣಿಗಳ ವರ್ತನೆಗಳಿಗೆ ತಾಳೆ ಹಾಕಿ ನೋಡುವ ಬುದ್ಧಿ ನಮಗೆಲ್ಲಾ ಕರಗತವಾಗಿದೆ.

ಜಿಪುಣಾಗ್ರೇಸರನ್ನು ಕಾಗೆಗೆ ಹೋಲಿಸಿದಾಗ ಇದಕ್ಕಿಂತ ಹೆಚ್ಚಿನ ವಿರೋಧಾಭಾಸ ಇರಲಾರದು ಅನಿಸುತ್ತದೆ. ಕಾರಣ ಕಾಗೆ ಬಹಳ ಉದಾರಿ, ಸಂಘಜೀವಿ! ಒಂದಿಷ್ಟು ಆಹಾರ ಪದಾರ್ಥಗಳ ಚೂರು ಕಂಡರೂ ಸಾಕು ತನ್ನೆಲ್ಲಾ ಬಂಧು-ಬಳಗದವರನ್ನು ಕೂಗಿ ಕರೆದು

ಹಂಚಿ ತಿನ್ನುವ ಸ್ವಭಾವ ಅದಕ್ಕೆ. ಮನುಷ್ಯ ಹಂಚಿ ತಿನ್ನುವುದು ಹಾಗಿರಲಿ, ಇತರರನ್ನೂ ಕಬಳಿಸಿ ತಿನ್ನುವ ಮಟ್ಟಕ್ಕಿರುತ್ತಾನೆ. ಪಾಪ! ಕಾಕರಾಯನನ್ನು ಹೀಗೆಲ್ಲ ಆಡಿಕೊಂಡಾಗ ಅದಕ್ಕೂ ಮಾತು ಬರುವಂತಿದ್ದರೆ ಹಾಗೆಂದವರ ತಲೆಯನ್ನು ಕುಕ್ಕಿ ಆ್ಯಂಗ್ರಿ ಬರ್ಡಿನಂತೆ ಸೇಡು ತೀರಿಸಿಕೊಳ್ಳದೆ ಬಿಡುತ್ತಿರಲಿಲ್ಲ.

ಮಾನವ ಸಹಜ (ಅವ) ಗುಣಗಳಲ್ಲಿ ಬೆಳ್ಳಗಿನ ಬಣ್ಣವನ್ನೇ ಇಷ್ಟಪಡುತ್ತಾ ಕಡುಕಪ್ಪಗಿನ ಕಾಗೆಯನ್ನು ಕಂಡು ಅಸಹ್ಯ ಪಡುವವರೇ ಹೆಚ್ಚು! ಆದರೆ ಮಿರಿ ಮಿರಿ ಮಿಂಚುವ ಕಪ್ಪನೆಯ ಕೇಶ, ತಿಳಿಯಾದ ಮೈ ಬಣ್ಣಕ್ಕೆ ಮಣೆ ಹಾಕುತ್ತಾ, ನಮ್ಮಲ್ಲೇ ವರ್ಣಬೇಧ ನೀತಿಯನ್ನು ಅನುಸರಿಸುವುದನ್ನು ಮಾತ್ರ ನಾವು ಬಿಡುವುದಿಲ್ಲ! ಆದರೆ ಪಕ್ಷಿಗಳಲ್ಲೇ ಅತ್ಯಂತ ವಿಕಸನಗೊಂಡ ಮೆದುಳು ಹೊಂದಿದ ಕಾಕರಾಯ ಈ ಸೋಪಾನ ಕಥೆಯಲ್ಲಿ ನೀರಿನ ಹೂಜಿಗೆ ಕಲ್ಲು ಹಾಕುತ್ತ ನೀರನ್ನು ಮೇಲೆ ಬರಿಸಿ ತನ್ನ ಬಾಯಾರಿಕೆ ತಣಿಸಿಕೊಂಡು ಬುದ್ಧಿವಂತಿಕೆಯನ್ನು ಪ್ರದರ್ಶಿಸಿದರೆ, ಈಗಿನ ಮಾಡ್ರನ್ ಕಾಗೆಗಳು ತಮ್ಮ ಕೊಕ್ಕಿನಲ್ಲಿ ಸ್ಟೈಲಾಗಿ ಸ್ಟ್ರಾ ಹಿಡಿದೇ ನೀರು ಹೀರಿಬಿಡುತ್ತವೇನೋ!

ಏನೇ ಅನ್ನಿ ಬುದ್ಧಿವಂತಿಕೆ, ಉದಾರತನ, ಅಂತಃಕರಣಗಳ ಗುಣ ಹೊಂದಿದ ಪಕ್ಷಿಯಾದರೂ ಅಪಶಕುನದ ಹಕ್ಕಿ ಎನ್ನುವ ಹಣೆಪಟ್ಟಿ ಹೊತ್ತುಕೊಂಡು ಕಾಗೆ ಶೋಷಣೆಗೆ ಒಳಗಾಗುತ್ತಲೇ ಬಂದಿದೆ!

ತಮ್ಮ ಬಾಲ್ಯಸಂಗಾತಿ ಗುಬ್ಬಿಗಳ ಜೊತೆ ಹೋಲಿಸಿ ನೋಡಿದಾಗ ಕಾಗೆ ನಿಜಕ್ಕೂ ಗಟ್ಟಿಗಿತ್ತಿ ಅನ್ನಲಡ್ಡಿಯಿಲ್ಲ. ವಾಯುಮಾಲಿನ್ಯ ಹೆಚ್ಚಾಗುತ್ತಿರುವ ನಗರ ಪ್ರದೇಶಗಳಲ್ಲಿ ಗುಬ್ಬಿಗಳ ಸಂಖ್ಯೆ ದಿನೇ ದಿನೇ ಇಳಿಮುಖವಾಗಿ ಅವುಗಳಿಗೂ ಮನುಷ್ಯರಂತೆ ಅಸ್ತಮಾ ಸಮಸ್ಯೆ ಕಾಡಿ, ಫಲಾಯನವಾದಿಗಳಾಗುತ್ತಿದ್ದರೆ – ಕಾಗೆ ಸಂತತಿ ಮಾತ್ರ ಊರು ಎಷ್ಟೇ ಗಬ್ಬೆದ್ದುಹೋದರೂ ಅಂಜದೆ, ಅಳುಕದೆ ತಾನು ಹುಟ್ಟಿ ಬೆಳೆದ ಊರಿನಲ್ಲೇ ಸಿಕ್ಕಿದ್ದೆಲ್ಲಿ ಅನ್ನುತ್ತಾ ಹಾರಾಡಿಕೊಂಡು (ಲೋಡ್‌ಶೆಡ್ಡಿಂಗ್ ವೇಳೆಗನುಸಾರವಾಗಿ) ವಿದ್ಯುತ್ ಕಂಬದ ಮೇಲೆ ಆಟವಾಡುತ್ತಾ ತನ್ನ ತಾಯಿನಾಡಿನ ಋಣ ತೀರಿಸುತ್ತಲೇ ಇವೆ!

---

**ಅಂದು**

ನಾನು ಬಡವ ನೀನು ಬಡವಿ

ಒಲವೇ ನಮ್ಮ ಬದುಕು – ಬೇಂದ್ರೆ

**ಇಂದು**

ನಾನು ಟೆಕಿ, ನೀನು ಟೆಕಿ

Ola ನಮ್ಮ ಬದುಕು – ಅನಾಮಿಕ

ಇನ್ನು ಶ್ರಾದ್ಧ, ಪಕ್ಷಗಳ ಸಮಯದಲ್ಲಿ ಕಾರ್ಯವಾಸಿ ಕಾಗೆ ಕಾಲು ಎಂದು ಮನುಷ್ಯರು ತಮ್ಮನ್ನು ನಿಕೃಷ್ಟವಾಗಿ ಕಾಣುವ ಇಬ್ಬಗೆ ನೀತಿಗೆ ಸೇಡು ತೀರಿಸಿಕೊಳ್ಳಲು ಎಂಬಂತೆ ಎಷ್ಟೋ ಬಾರಿ ಪಿಂಡವನ್ನು ಕಂಡರೂ ತಿನ್ನಲು ಬಿಂಕ ತೋರಿ, ಸತಾಯಿಸುತ್ತಾ ಕೆಲವೊಮ್ಮೆ ನಾವೇ ಕಾಗೆ ಭಾಷಿಗರಾಗಿ ಕಾಕ ಅಷ್ಟೋತ್ತರ (!?) ಹೇಳಿಕೊಳ್ಳುತ್ತಾ ಅವನ್ನು ಕೂಗಿ ಕರೆವ ಸ್ಥಿತಿಗೆ ನಮ್ಮನ್ನು ಇಳಿಸಿಬಿಡುತ್ತವೆ!

ಇತ್ತೀಚಿಗೆ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳ ಕಾರಿನ ಮೇಲೊಂದು ಕಾಗೆ ಕೂತು ಭಾರಿ ಸುದ್ದಿ ಮಾಡಿ ಸೆಲೆಬ್ರೆಟಿಯಾಗಿ ಸುದ್ದಿವಾಹಿನಿಗಳ ಟಿಆರ್‌ಪಿ ಹೆಚ್ಚಿಸಿ ಬಿಟ್ಟಿದ್ದು ನಿಮಗೆಲ್ಲ ನೆನಪಿರಬಹುದು! ಮುಖ್ಯಮಂತ್ರಿಗಳ ಹೈಫೈ ಕಾರಿನಲ್ಲಿ (ತನ್ನ ಹಿಂದಿನ ಜನ್ಮದಲ್ಲಿ ಮಂತ್ರಿಯಾದ ನೆನಪೇನಾದರೂ ಹಠಾತ್ತಾಗಿ ಮರುಕಳಿಸಿ) ಒಂದು ರೈಡ್ ಹೋಗುವ ಆಸೆಯಾಯಿತೇನೋ ಅದಕ್ಕೆ ಎನ್ನುವ ಅನುಮಾನ ನನಗೆ!

ಏನೇ ಅನ್ನಿ ಇತರ ಪಕ್ಷಿಗಳಿಗಿಂತ ಕಾಗೆಗಳಿಗೆ ಅಪಾರವಾದ ನೆನಪಿನ ಶಕ್ತಿ ಇದ್ದು ತಮಗೆ ತೊಂದರೆ ಕೊಟ್ಟವರ ಮುಖವನ್ನು ಸರಿಯಾಗಿ ನೆನಪಿಟ್ಟುಕೊಂಡು ತಾನು ಸೇಡು ತೀರಿಸಿಕೊಳ್ಳುವುದಷ್ಟೇ ಅಲ್ಲದೆ ತನ್ನ ಮುಂದಿನ ತಲೆಮಾರಿಗೆಲ್ಲಾ ತಿಳಿಸಿಬಿಡುವುದಂತೆ! ಹಿಂದೆ ನಮ್ಮ ನಮ್ಮ ಮನೆಯಲ್ಲಿ ಈ ಕಾಗೆಗಳು ಸೃಷ್ಟಿಸಿದ ಅವಾಂತರದ ಪ್ರಸಂಗವೊಂದನ್ನು ಇಲ್ಲಿ ಬಿಚ್ಚಿಡಲೇಬೇಕು.

ಅಂದು ನಮ್ಮ ಮನೆಯಲ್ಲಿ ನನ್ನ ಮಗನ ಹುಟ್ಟುಹಬ್ಬದ ಪಾರ್ಟಿ. ಮನೆ ತುಂಬೆಲ್ಲಾ ತಮ್ಮ ಮಕ್ಕಳೊಂದಿಗೆ ನೆಂಟರಿಷ್ಟರ ಬಳಗ ಸೇರಿತ್ತು. ಅಂತೂ ಅತಿಥಿಗಳ ಹರಟೆ-ನಗು, ತಿಂಡಿ-ತೀರ್ಥ ಎಲ್ಲ ಮುಗಿದು ಒಬ್ಬೊಬ್ಬರಾಗಿ ವಿದಾಯ ಕೋರುತ್ತಾ ಹೊರ ನಡೆದರೆ ಆಶ್ಚರ್ಯವೆಂಬಂತೆ ಮನೆಯ ಮುಂದೆ ದೊಡ್ಡ ಕಾಕ ಸಭೆಯೊಂದು ನೆರೆದು ಜೋರು ಗದ್ದಲವೆಬ್ಬಿಸಿಬಿಟ್ಟಿತ್ತು!

ವಿಷಯ ಇಷ್ಟೇ! ಇನ್ನು ಸರಿಯಾಗಿ ಹಾರಲು ಬಾರದ ಪುಟ್ಟ ಕಾಗೆ ಮರಿ ನಮ್ಮ ಗೇಟಿನ ಹತ್ತಿರ ಬಿದ್ದು ಹಾರಲು ಪ್ರಯತ್ನಿಸುತ್ತಿತ್ತು. ಪಾಪ! ತಾಯಿ ಕಾಗೆ ತನ್ನ ಬಂಧು-ಬಳಗವನ್ನೆಲ್ಲ ಸೇರಿಸಿಕೊಂಡು ಅದಕ್ಕೆ ಬಾಡಿಗಾರ್ಡಿನಂತೆ ಗೇಟಿನ ಮೇಲೆಯೇ ಕಾವಲು ಕಾಯುತ್ತಾ ಮನುಷ್ಯರಿಂದ ತನ್ನ ಪುಟ್ಟ ಮರಿಗೆ ಅಪಾಯವಾಗದಂತೆ ಆತಂಕದ ಸಭೆ ನಡೆಸಿತ್ತು!

ಇನ್ನು ಅಲ್ಲಿ ಸೇರಿದ್ದ ರೌಡಿ ಕಾಗೆಗಳು ಗೇಟು ತೆರೆದು ಯಾರೆ ಹೊರ ಹೋಗಲು ಪ್ರಯತ್ನಿಸಿದರೂ ಆ್ಯಂಗ್ರಿಬರ್ಡ್ಗಳಂತೆ ಕುಕ್ಕಲು ಬರುತ್ತಿದ್ದವು!

ಇದೇ ಫಜೀತಿಯಲ್ಲಿ ಕೆಲ ತುಂಟ ಮಕ್ಕಳು ಕಾಂಪೌಂಡ್ ಹಾರಿ ತಮ್ಮ ಮಂಗಬುದ್ಧಿಯನ್ನು ಪ್ರದರ್ಶಿಸಿ ಕಾಗೆಯನ್ನು ಯಾಮಾರಿಸಿ ಕೇಕೆ ಹಾಕಿದರೆ, ನಾವು ದಂಪತಿಗಳು ನಮ್ಮ ಕೆಲಸದಾಕೆ ಕೊಟ್ಟ ಸೂಪರ್ ಸುಪ್ರೀಂ ಐಡಿಯಾದಂತೆ ಕಾಕ ಧಾಳಿಯಿಂದ ಬಚಾವ್ ಆಗಲು ಛತ್ರಿ ಆಸರೆಯಲ್ಲಿ ಒಬ್ಬೊಬ್ಬರನ್ನೇ ಗೇಟು ದಾಟಿಸಿ ನವೀನ ರೀತಿಯ ಅತಿಥಿ ಸತ್ಕಾರವನ್ನು ಮೆರೆದೆವು!

ಇನ್ನು ನನ್ನ ಕೆಲವು ಗೆಳತಿಯರು ಹೆಲ್ಮೆಟ್ ಧಾರಿಗಳಾಗಿ ತಮ್ಮ ತಲೆಯನ್ನು ರಕ್ಷಿಸಿಕೊಳ್ಳುತ್ತಾ ತಮ್ಮ ಚಾಣಾಕ್ಷತನವನ್ನು ತೋರಿದರು!

ಇದೇ ಗದ್ದಲದಲ್ಲಿ ಜೋಪಾನವಾಗಿ ಪುಟ್ಟ ಮಕ್ಕಳನ್ನು ಹಿತ್ತಲ ಗೋಡೆಯಿಂದ ದಾಟಿಸುತ್ತಿದ್ದ ಯಜಮಾನರಿಗೆ ಕಾಗೆ ಬಳಗದ ಸದಸ್ಯವೊಂದು ರಭಸದಿ ಹಾರಿಬಂದು ತಲೆಗೆ ಕುಕ್ಕಿ ಏಕಾಏಕಿ ಧಾಳಿ ನಡೆಸಿತ್ತು! ಈ ಕಾಕರಾಯ ನಮ್ಮ ಮನೆ ಮುಂದಿದ್ದ ಚಿಕ್ಕ ಮರವನ್ನು ಪಾರ್ಕಿಂಗ್ ಸಲುವಾಗಿ ಕಡಿಸಿದ್ದರೆ ಸೇಡು ತೀರಿಸಿಕೊಂಡಿತೆ ಎಂದು ನಮಗೆ ಶಂಕೆ ಕಾಡಿತು!

ಗಲಭೆ, ಮುಷ್ಕರಗಳ ಸಮಯದಲ್ಲಿ ಗಲಭೆಕೋರರು ತಮ್ಮ ವೈರಿಗಳ ಮೇಲೆ ವೈಯಕ್ತಿಕ ಸೇಡನ್ನೂ ತೀರಿಸಿಕೊಂಡಂತೆ ಆ ಕಾಗೆ ನಮ್ಮ ಯಜಮಾನರ ಮುಖವನ್ನು ನಾ ನಿನ್ನ ಮರೆಯಲಾರೆ ಎಂಬಂತೆ ತನ್ನ ಸಿಟ್ಟನ್ನು ಪ್ರದರ್ಶಿಸಿತು!

ಅಂತೂ ಹೊರಗೆ ನೆರೆದಿದ್ದ ಕಾಕ ಬಳಗದಿಂದ ಆಪರೇಷನ್ ಕಾಗೆಮರಿ ರಕ್ಷಣೆ, ಸುಖಾಂತ್ಯದಲ್ಲಿ ಕೊನೆಗೊಂಡು ನಾವು ಸಮಾಧಾನದ ಉಸಿರುಬಿಟ್ಟೆವು. ಅಂದಿನಿಂದ ನಮ್ಮವರು ಕಾಗೆಗಳನ್ನು ನೋಡಿದಾಗಲ್ಲೆಲ್ಲಾ ಮಾರು ದೂರ ಓಡುವಂತೆ ಮಾಡಿದ ಆ ಕಾಗೆ ಪ್ರಕರಣ ಇಂದಿಗೂ ನಗು ತರಿಸುತ್ತದೆ!

ಒಟ್ಟಿನಲ್ಲಿ ಈ ಕಾಗೆ ಪುರಾಣವನ್ನು ಓದಿದವರಿಗೆ ಯಾವ ಕಾಗೆಯಿಂದಲೂ ಕುಕ್ಕಿಸಿಕೊಳ್ಳುವ ಪರಿಸ್ಥಿತಿ ಬಾರದು ಎಂದು ನಾವು ಕಾಗೆ ಹಾರಿಸದೆ ಕಾಗೆಯಾಣೆಗೂ ಪ್ರಮಾಣ ಮಾಡುತ್ತೇನೆ!

---

## ಪ್ರೀತಿ ಯಾವಾಗ

ಹುಡುಗ ಹೇಳುತ್ತಾನೆ
ನಿನ್ನೇ ಪ್ರೀತಿಸುತ್ತೀನಿ
ಹುಡುಗಿ ಹೇಳುತ್ತಾಳೆ
ನಾನೂ ನಿನ್ನೇ ಪ್ರೀತಿಸುತ್ತೇನೆ
ಹೀಗಾಗಿ
ಎಲ್ಲ ಪ್ರೇಮಿಗಳೂ ನಿನ್ನೆ ಪ್ರೀತಿಸುವ ಪ್ರೇಮಿಗಳು
ಇಂದು ಪ್ರೀತಿಸುವ ಪ್ರೇಮಿಗಳು
ಎಲ್ಲಿಯೂ ಇಲ್ಲ

# ಪಂಚ್ ಪದ್ಯಗಳು

**- ಎಚ್. ಡುಂಡಿರಾಜ್**

*-1-*

ಮಣ್ಣಿನ ಮಗ
ಅನ್ನಲು ಈಗ
ಎಲ್ಲರಿಗೂ ತವಕ
ನಿಜವಾಗಿಯೂ
ಆ ಬಿರುದಿಗೆ ಯೋಗ್ಯ
ಗೌರೀಸುತ ಬೆನಕ!

*-2-*

ಸರ್ಪ ಸುತ್ತು
ನಿಮಗೆ ಗೊತ್ತು
ಸಹಿಸಲಾಗದ ಬೇನೆ
ಸರ್ಪ ಸುತ್ತಿದ್ದರೂ
ನಸುನಗುತ್ತಿರುವ
ಗಣಪನಿಗೆ ವಂದನೆ

*-3-*

ಗಣೇಶೋತ್ಸವಕ್ಕೆ
ಬರ್ತಾಳಂತೆ
ಹಿಂದಿ ತಾರೆ ಕರೀನಾ
ಬ್ರಹ್ಮಚಾರಿಯ ಮುಂದೆ
ಸೆಕ್ಸಿ ತಾರೆ
ಡ್ಯಾನ್ಸ್ ಮಾಡೋದು
ಸರೀನಾ?

*-4-*

ಕರೀನಾಳ ನೃತ್ಯ ನೋಡಿ
ಕರಿವದನನ ಉದ್ಗಾರ
ಕರೀನಾ ಕಪೂರ
ಆಹಾ ಎಷ್ಟು ಸಪೂರ!

*-5-*

ಪೂಜೆ ಪುರಸ್ಕಾರ
ಷೋಡಶೋಪಚಾರ
ಹೆಚ್ಚೆಂದರೆ
ಒಂದು ವಾರ
ಆಮೇಲೆ ಕೆರೆಗೆ ಹಾರ!

# ಬಾಯಿಗೆ ಬಾರದ ತುತ್ತು

**- ಅನಿತಾ ನರೇಶ್ ಮಂಚಿ**

**ಬೆ**ಳಗಿನ ಜಾವದಲ್ಲಿ ಮನೆಯಿಂದ ಹೊರ ಹೋಗುವ ಪ್ರವಾಸ ಕಾರ್ಯಕ್ರಮಗಳು ಏರ್ಪಟ್ಟರೆ ಹೊಟೇಲಿನಲ್ಲಿಯೇ ತಿಂಡಿ ತಿನ್ನಬೇಕು ಎನ್ನುವುದು ಅಲಿಖಿತ ನಿಯಮ. ಮನೆಯಲ್ಲಿ ತಿಂಡಿ ತಯಾರಿ ಕಷ್ಟ ಎಂದಲ್ಲ, ಮಾಡಿದ ನಂತರ ಅದನ್ನು ಶುಚಿಗೊಳಿಸಿ ಹೊರಡಲು ಒಂದಷ್ಟು ವೇಳೆ ಬೇಕು, ಬೇಗನೆ ಹೊರಡುವಾಗ ತಿಂಡಿ ಸೇರುವುದಿಲ್ಲ ಎಂಬೆಲ್ಲಾ ಕಾರಣಗಳು ಕೊಡಲ್ಪಡುವುದರಿಂದಾಗಿ ಖಾಲಿ ಚಹಾ, ಕಾಫಿ ಎಂಬ ದ್ರವ ಪದಾರ್ಥಗಳ ತಯಾರಿಯ ನಂತರ ಅಡುಗೆ ಕೋಣೆ ವಿಶ್ರಾಂತಿಯಲ್ಲಿರುತ್ತಿತ್ತು. ನಾನು ಹೊರಡುವ ಗಡಿಬಿಡಿಯಲ್ಲಿರುತ್ತಿದ್ದೆ.

**ಅಷ್ಟೆಲ್ಲ ಹೊಟೇಲ್‌ಗಳು ಕಣ್ಣಿಗೆ ಬಿದ್ದರೂ ತಿಂಡಿ ಮಾತ್ರ ಸಿಗಲೇ ಇಲ್ಲ**

ಮೊನ್ನೆಯೂ ಆಗಿದ್ದು ಹೀಗೆಯೇ. ಬೆಳಗ್ಗಿನ ಏಳರ ಹೊತ್ತು ತಿಂಡಿ ಗಂಟಲಿಗಿಳಿಯದ ಹೊತ್ತೇನಲ್ಲವಾದರೂ 'ಖಾಲಿ ಚಹಾ ಮಾತ್ರ ಸಾಕು ತಿಂಡಿ ಹೊರಗೆ ಮಾಡೋಣ' ಎಂದು ಇವರು ಹೇಳುವ ಮೊದಲೇ ತಲೆ ಅಲುಗಿಸಿ ಒಪ್ಪಿಗೆ ಸೂಚಿಸಿ ಗಂಟು ಮೂಟೆ ಕಟ್ಟಿ ಹೊರಟಿದ್ದೆ. ಕಾರು ಹೊರಟು ಹತ್ತು ಕಿ.ಮೀ. ಮುಂದೆ ಬಂದಿರಬಹುದಷ್ಟೆ, ಹೈವೇಗೆ ನುಗ್ಗಲೆಂದು ಕಾರು ನಿಧಾನವಾಗಿತ್ತು. ಸಿಕ್ಕಿದ ಪುಟ್ಟ ಪೇಟೆಯ ಎರಡೂ ಕಡೆ ಕಣ್ಣು ಹಾಯಿಸತೊಡಗಿದೆ. ಅದು ನಮ್ಮೂರನ್ನು ರಾಷ್ಟ್ರೀಯ ಮಟ್ಟಕ್ಕೇರಿಸಿದ ಕೆ.ಟಿ. ಎಂಬ ಸ್ಪೆಷಲ್ ಚಹಾ ಇರುವ ಕಲ್ಲಡ್ಕ ಎಂಬ ಪುಟ್ಟ ಊರು. ಅರ್ಧ ಶಟರ್ ತೆರೆದ ಹೋಟೆಲಿನೊಳಗಿನ ಪರಿಮಳ ರಸ್ತೆಯನ್ನೆಲ್ಲಾ ಹರಡಿ ಕಾರಿನೊಳಗೆ ಕುಳಿತ ನನ್ನ ನಾಸಿಕವನ್ನು ಅರಳಿಸಿ ನಾನಿನ್ನೂ ತಿಂಡಿ ತಿಂದಿಲ್ಲ ಎಂಬುದನ್ನು ನೆನಪಿಸಿತು. ಇಷ್ಟು ಹತ್ತಿರದಲ್ಲೇ ತಿಂಡಿ ತಿನ್ನೋದಾದ್ರೆ ಮನೆಯಲ್ಲೇ ಆ ಕೆಲಸ ಮಾಡಬಹುದಿತ್ತಲ್ಲ ಎನ್ನುವ ಮುಖಭಾವ ಹೊತ್ತು ರಸ್ತೆಯೆಡೆಗೆ ಮುಖ ಹೊರಳಿಸಿದ್ದ ಇವರನ್ನು ನೋಡಿ ಸುಮ್ಮನೆ ಕುಳಿತೆ.

ಇನ್ನೊಂದು ಇಪ್ಪತ್ತು ಕಿ.ಮೀ. ಮುಂದೋಡಿದರೆ ಒಳ್ಳೆಯ ಹೋಟೆಲ್ಲುಗಳಿರುವ ಪೇಟೆಯೊಂದು ಸಿಗುತ್ತದೆ. ರಸ್ತೆಯುದ್ದಕ್ಕೂ ಹಲವು ಹೋಟೆಲ್ಲುಗಳು, ರುಚಿ ಶುಚಿಯ ತಿಂಡಿ ತಿನಿಸುಗಳು ಅಲ್ಲಿನ ಹೆಗ್ಗಳಿಕೆ. ಬೆಳಗ್ಗಿನ ಜಾವವಾದ ಕಾರಣ ವಾಹನ ಸಂಚಾರ ಕಡಿಮೆ ಬೇರೆ. ಅಲ್ಲಿಗೆ ಬೇಗನೇ ತಲುಪುತ್ತದೆ ಎಂದು ಹೊಟ್ಟೆಯ ಚಿಂತೆ ಮರೆತು ಕುಳಿತೆ.

ಯೋಚಿಸಿದಂತೆ ಬೇಗನೆ ತಲುಪಿದೆವು. ಅಲ್ಲಿ ನಮಗೆ ಜೊತೆಯಾಗಲು ಇನ್ನು ಎರಡು ಮನೆಯವರಿದ್ದರು. ಅವರ ವಾಹನಗಳಿನ್ನೂ ತಲುಪಿರಲಿಲ್ಲ. ರಸ್ತೆ ಬದಿಯಲ್ಲಿ ನಿಂತು ಅವರನ್ನು ಕಾಯುತ್ತಲೇ ಆ ಹೋಟೆಲ್ಲಿನಲ್ಲಿ ಜ್ಯೂಸ್ ಚೆನ್ನಾಗಿರ್ತದೆ, ಈ ಹೋಟೆಲ್ಲಿನಲ್ಲಿ ಇಡ್ಲಿ ಸಾಂಬಾರ್ ಬೆಸ್ಟ್, ಮತ್ತೊಂದರ ಮಸಾಲೆದೋಸೆಯಂತೂ ಸಂಜೆಯವರೆಗೆ ಕೈ ಪರಿಮಳ ಉಳಿಯುವಂತಿರುತ್ತದೆ, ಇನ್ನೊಂದು ಹೋಟೆಲ್ಲಂತೂ ನಮ್ಮ ಕರಾವಳಿಯ ಸೊಗಡಿನ ನೀರು ದೋಸೆ, ಅಕ್ಕಿ ಶ್ಯಾವಿಗೆ, ಪುಂಡಿ, ಅಪ್ಪಂ ಇಂತಹ ಸಾಂಪ್ರದಾಯಿಕ ತಿಂಡಿಗಳಿಗೆ ಹೆಸರುವಾಸಿ. ಹಾಗಾಗಿ ಯಾವ ಹೋಟೆಲ್ಲಿಗೆ ನುಗ್ಗಿದರೆ ಯಾವುದನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ

ದೀರ್ಘಾಲೋಚನೆಯಲ್ಲಿ ಮುಳುಗಿರುವಾಗಲೇ ಎರಡೂ ಬದಿಯಿಂದ ಕಾರುಗಳು ಬಂದು ನಿಂತವು. ಮಾತ್ರವಲ್ಲ, ಅದರಲ್ಲೊಂದು ಕಾರಿಗೆ ನಮ್ಮನ್ನು ತುರುಕಿಕೊಂಡು ನಮ್ಮ ಕಾರನ್ನು ಅಲ್ಲೇ ಬದಿಯಲ್ಲಿದ್ದ ಪರಿಚಿತರ ಅಂಗಳ ಹೊಗ್ಗಿಸಿದ್ದಾಯಿತು.

ಇಷ್ಟೆಲ್ಲಾ ಆಗುವಾಗ ಸ್ವಲ್ಪ ಸಮಯ ಆದ್ದರಿಂದ ಬೈಪಾಸ್ ಆಗಿ ಹೋಗುವ. ಪೇಟೆಯ ಒಳಗೆ ಹೋದ್ರೆ ಟ್ರಾಫಿಕ್ ಜ್ಯಾಮ್ ಆಗ್ತಾ ಇರುತ್ತದೆ. ಪೇಟೆ ಕಳೆದ ನಂತರ ಸಿಗುವ ಯಾವುದಾದರೂ ಹೋಟೆಲ್ಲಿನಲ್ಲಿ ತಿಂಡಿ ತಿನ್ನೋಣ ಎಂಬ ತೀರ್ಮಾನ ಆಯ್ತು. ನನ್ನ ಮನದ ಚಿತ್ರಫಲಕಗಳಲ್ಲಿ ಕಲರ್ ಕಲರ್ ಆಗಿ ಕುಣಿಯುತ್ತಿದ್ದ ಈ ಪೇಟೆಯಲ್ಲಿದ್ದ ಒಂದೊಂದೇ ಹೋಟೆಲ್ಲುಗಳು ಮಾಯವಾಗುತ್ತಾ ಹೆಸರು ತಿಳಿಯದ ಇನ್ಯಾವುದೋ ಹೋಟೆಲ್ಲಿನ ತಿಂಡಿಯ ಕನಸು ಕಾಣುತ್ತಾ ಕುಳಿತೆ.

ಪೇಟೆ ಮುಗಿದು ಮುಂದೆ ಸರಿದಂತೆಲ್ಲಾ ಎರಡು ಕಾರುಗಳಲ್ಲಿದ್ದ ನಮಗೆ ಒಬ್ಬರಿಗಾದ ಹೋಟೆಲ್ ಇನ್ನೊಬ್ಬರಿಂದ ಚೆನ್ನಾಗಿಲ್ಲ ಎಂಬ ಕಾರಣವೊಡ್ಡಿ ನಿರಾಕರಿಸುತ್ತಾ ಬಂದು ಹೋಟೆಲ್ಲುಗಳಿರುವ ಜಾಗವೆಲ್ಲಾ ಮುಗಿದು ಅಂಗಡಿಗಳಿಲ್ಲದ ಖಾಲಿ ರಸ್ತೆಗೆ ನುಗ್ಗಿದೆವು. ದಾರಿ ಬದಿಯ ಈಸ್ಟ್‌ಮನ್ ಕಲರಿನ ಹೋಟೆಲ್ಲುಗಳ ಕನಸುಗಳು ಕರಗಿದವು.

ಮನೆಯಲ್ಲಿದ್ದರೆ ಈಗ ಬಿಸಿ ಬಿಸಿ ದೋಸೆ ಚಟ್ನಿಯ ಸಮೇತ ಹೊಟ್ಟೆಗಿಳಿಸಿ ಈಗಾಗಲೇ ಒಂದು ಗಂಟೆ ಆಗಿರುತ್ತಿತ್ತು. ಉಳಿದವರೆಲ್ಲಾ ಅವರವರ ಮನೆಯಲ್ಲಿ ತಿಂಡಿ ತಿಂದು ಹೊರಟವರಾದ ಕಾರಣ ನನ್ನ ಹೊಟ್ಟೆಯ ಚುರುಗುಟ್ಟುವಿಕೆ ಅವರ ಮನಸ್ಸಿಗೆ ನಾಟುತ್ತಿರಲಿಲ್ಲ.

ನಮ್ಮ ಕಾರುಗಳು ಖಾಲಿ ರಸ್ತೆಯಲ್ಲಿ ಸಾಗುತ್ತಿದ್ದಂತೆ ರಸ್ತೆ ಬದಿಯ ಕಿ.ಮೀ. ಕಲ್ಲಿನಲ್ಲಿ ಹತ್ತಿರದ ಪೇಟೆಗೆ ಬರೀ ನಾಲ್ಕು ಕಿ.ಮೀ. ದೂರ ಎಂಬುದು ಕಂಡು ನನ್ನ ಹೋಟೆಲ್ಲಿನ ಚಿತ್ರಗಳು ಮತ್ತೆ ಕಲರಿಗೆ ತಿರುಗಿದವು. ಆಗಲೇ ಎದುರಿನ ಕಾರಿನವರಿಂದ ಫೋನ್ ಬಂತು. ಈ ಪೇಟೆಯ ಕೊನೆಯಲ್ಲಿ ಇರುವ ಹೋಟೆಲ್ ಈ ಊರಿಗೆ ಬೆಸ್ಟ್ ಹೋಟೆಲ್. ಅಲ್ಲಿಗೆ ಹೋಗುವ..

ಪುಣ್ಯ ಇಷ್ಟು ಕಾದದ್ದಕ್ಕೆ ಬೆಸ್ಟ್ ಹೋಟೆಲ್ಲಿನಲ್ಲೇ ತಿಂಡಿ ಸಿಗುವುದಾದರೆ ಬೇಡ ಅನ್ನೋರುಂಟೇ.. ಪೇಟೆಯ ಕೊನೆಗೆ ಬಂದು ನಮ್ಮೆರಡು ಕಾರುಗಳು ನಿಂತವು. ಸುತ್ತ ಎಲ್ಲಿ ಹುಡುಕಿದರೂ ಹೋಟೆಲ್ಲಿನ ಸುಳಿವಿಲ್ಲ. ಅಯ್ಯೋ.. ಕಳೆದ ಸಲ ನಾವು ಬಂದಾಗ ಇಲ್ಲೇ ತಿಂಡಿ ತಿಂದಿದ್ದೆವಲ್ಲಾ.. ಅಷ್ಟು ಬೇಗ ಎಲ್ಲಿ ಹೋಯಿತು ಹೋಟೆಲ್ ಎಂದು ಅವರು ಅಲವತ್ತುಕೊಳ್ಳುತ್ತಿದ್ದರು.

ನಾನು ಅಧಿಕ ಪ್ರಸಂಗದಿಂದ ಕಳೆದ ಸಲ ಎಂದರೆ ಯಾವಾಗ? ಎಂದೆ.

ಅಯ್ಯೋ ಮೊನ್ನೆ ಮೊನ್ನೆಯಷ್ಟೇ.. ಒಂದ್ಮೂರು ವರ್ಷ ಆಯ್ತೇನೋ ಎಂದರು.

ಮೂರು ವರ್ಷದಲ್ಲಿ ಊರಿಗೆ ಊರೇ ಮಾಯವಾಗುವ ಕಾಲ ಇದಾಗಿರುವಾಗ ಹೋಟೆಲ್ ಮಾಯವಾಗುವುದೇನು ವಿಶೇಷವೇ..!!

ಬಿಡಿ.. ಇನ್ನು ಹೇಗೂ ಹೈವೇ ಹೋಟೆಲ್ಲುಗಳು ಅಲ್ಲಲ್ಲಿ ಸಿಗುತ್ತವೆ. ಅದಕ್ಕೆ ನುಗ್ಗಿದರಾಯ್ತು ಎಂದು ಹೊರಟೆವು. ನನಗೋ ದೂರದಲ್ಲಿ ಕಂಡ ಕಟ್ಟಡಗಳೆಲ್ಲವೂ ಹೋಟೆಲ್ಲುಗಳೇ ಆಗಿರಬಾರದೇ ಎಂಬ ಆಸೆ. ಅದು ಹತ್ತಿರ ಹೋಗಿ ನೋಡುವಾಗ ಬ್ಯಾಂಕೋ, ಬಟ್ಟೆ ಅಂಗಡಿಯೋ ಆಗಿರುತ್ತಿತ್ತು.

ಮತ್ತೆ ಕಣ್ಣುಗಳು ಹೊಸ ಕಟ್ಟಡದ ಬೇಟೆಗೆ ತೊಡಗುತ್ತಿದ್ದವು.

ಅಂತೂ ಇಂತೂ ರಸ್ತೆ ಬದಿಯಲ್ಲಿ ನಮಗೆಲ್ಲರಿಗೂ ಒಪ್ಪುವಂತಹ ಹೋಟೆಲ್ಲೊಂದು ಕಾಣಸಿಕ್ಕಿತು.

ಕಾರಿನಿಂದ ಇಳಿದು, ಜೋಮುಗಟ್ಟಿದ ಕೈಕಾಲುಗಳನ್ನು ಸರಿಪಡಿಸಿಕೊಂಡು ಅತ್ತ ನುಗ್ಗಬೇಕು ಅನ್ನುವಾಗ ನಮ್ಮೆದುರಿನ ಕಾರಿನವರು ಮರಳಿ ಬಂದು ಹೋಗುವ ಎನ್ನುತ್ತಾ ಸನ್ನೆ ಮಾಡಿ ಕಾರೇರಿದರು.

ಇಲ್ಲೇನಾಯ್ತಪ್ಪಾ ಎಂದು ನೋಡಿದರೆ ಅದು ಮಾಂಸಾಹಾರಿ ಹೋಟೆಲ್..

ಇನ್ನೇನು ಒಂದೈವತ್ತು ಕಿ.ಮೀ. ದೂರದಲ್ಲಿ ಒಳ್ಳೇ ಹೋಟೆಲ್ಲುಗಳಿರುವ ಮತ್ತೊಂದು ಪೇಟೆ ಸಿಗುತ್ತಲ್ಲಾ.. ಕಾಫೀ ನಾಡಾದ ಅಲ್ಲೇ ಕಾಫಿ ಕುಡಿದರೆ ಗಮ್ಮತ್ತು ಎಂದು ಚಟಾಕಿ ಹಾರಿಸುತ್ತಾ ಕಾರು ಹೊರಟರೆ ನನ್ನ ಹೊಟ್ಟೆ ಗುರು ಗುಟ್ಟುತ್ತಾ ಎಲ್ಲರನ್ನೂ ಗುರಾಯಿಸುತ್ತಿತ್ತು.

ದಾರಿಯುದ್ದಕ್ಕೂ ಎಲ್ಲರೂ ಮಾತನಾಡುತ್ತಾ ಪ್ರಯಾಣದ ಗಮ್ಮತ್ತನ್ನು ಅನುಭವಿಸುವ ಮೂಡಲ್ಲಿದ್ದರೆ ನಾನು ಮೈಲುಕಲ್ಲುಗಳನ್ನು ಲೆಕ್ಕ ಹಾಕುತ್ತಾ ತಿಂಡಿಯ ತಟ್ಟೆಯೆದುರು ಯಾವಾಗ ಕುಳಿತೇನು ಎಂಬ ಪಾಡಿನಲ್ಲಿದ್ದೆ.

ಅಂತೂ ಇಂತೂ ಹೋಟೆಲ್ ಬಂತು.. ಒಂದು ಸಿಹಿಯಾದ ನಗು ನಗೇ ಈಗ.. ಎಂದು ಹನ್ನೆರಡು ಗಂಟೆ ಬಡಿಯುವಾಗ ಒಂದು ಹೋಟೆಲ್ಲಿನ ಬಾಗಿಲೆದುರು ಕಾರು ನಿಲ್ಲಿಸಿದರು.

ಇಳಿದು ಒಳ ನುಗ್ಗಿದರೆ 'ಊಟ ತಯಾರಿದೆ' ಬೋರ್ಡ್ ಬಿದ್ದಾಗಿತ್ತು. ಅಕ್ಕಪಕ್ಕದ ಟೇಬಲ್ಲಿನವರು ತಟ್ಟೆಯ ತುಂಬಾ ಕಪ್ಪುಗಳನ್ನಿಟ್ಟುಕೊಂಡು ನಡುವೆ ಇದ್ದ ಅನ್ನಕ್ಕೆ ಯಾವುದು ಸೂಟೇಬಲ್ ಅಂತ ನೋಡುತ್ತಿದ್ದರು. ನಾವು ಊಟದ ಹೊತ್ತಿಗೆ ಕಾರ್ಯಕ್ರಮದ ಮನೆಗೆ ತಲುಪುವವರಾದ ಕಾರಣ ತಿಂಡಿ ಏನಿದೆ ಎಂಬ ಪ್ರಶ್ನೆ ಇಟ್ಟೆವು. ಅವರು ಕೊಟ್ಟ ಮೆನು ಕಾರ್ಡಿನಲ್ಲಿ ಚಪ್ಪನ್ನೈವತ್ತಾರು ತಿಂಡಿಗಳ ಹೆಸರಿದ್ದುದು ಕಂಡು ಖುಷಿಯಾಗಿ ಇದು ಅದು ಎಂದು ಬೆರಳು ಮುಟ್ಟಿ ತೋರಿಸಿದಂತೆಲ್ಲಾ ನಮ್ಮೆದುರು ನಿಂತ ವೈಟರ್ 'ಅದು ಬೆಳಗ್ಗೆ ಮುಗಿದಿದೆ, ಇದು ಸಂಜೆಗೆ ಮಾತ್ರ ಮಾಡ್ತೀವಿ, ಇದು ರಾತ್ರಿಗೆ ಸ್ಪೆಷಲ್' ಅಂತ ನಾವು ಬೆರಳಿಟ್ಟ ಕಡೆಯೆಲ್ಲಾ ನಕಾರಾತ್ಮಕವಾಗಿ ತಲೆಯಾಡಿಸುತ್ತಾ ಹೋದ.

ಸರಿ ಕಣಪ್ಪಾ.. ಅಲ್ಲೇನುಂಟೋ ಅದೇ ತಿಂಡಿ ತಂದಿಡು ಇಲ್ಲಿ ಎಂದಾಗ ತಲೆಯಲುಗಿಸುತ್ತಾ ಹೋದವನು ಬೆಳಗ್ಗಿನ ಚಪ್ಪಟೆ ಪೂರಿಗೆ ಉಳಿದ ಇಡ್ಲಿಯ ಸಾಂಬಾರ್ ತುಂಬಿದ ಕಪ್ಪನ್ನು ತಂದಿಟ್ಟು ಹೋದ. ಹಸಿದ ಹೊಟ್ಟೆಗೆ ಅದುವೇ ಪಂಚಭಕ್ಷ್ಯ ಪರಮಾನ್ನದಂತೆ ಕಂಡಿತ್ತು. ಒಂದು ತುಂಡೂ ಬಿಡದಂತೆ ಖಾಲಿ ಮಾಡಿ ಐದಕ್ಷರದ ಎದುರಿಗೆ ಎರಡು ಸೊನ್ನೆಗಳಿರುವ ನೋಟನ್ನು ಕೊಟ್ಟು ತಲೆ ತಗ್ಗಿಸಿ ಹೊರ ಬಂದು ಕಾರೇರುವಾಗ ಮನಸ್ಸು ಹೋಟೆಲ್ಲುಗಳ ಚಿತ್ರಗಳನ್ನೆಲ್ಲಾ ದೂರ ಸರಿಸಿ ಹಸಿದ ಹೊಟ್ಟೆಗೆ ಆಹಾರ ಬಿದ್ದರಾಯ್ತು ಎಂಬ ವೇದಾಂತವನ್ನು ಪಠಿಸತೊಡಗಿತ್ತು.

# ಕುಟುಂಬದಲ್ಲಿ ಹಾಸ್ಯ

**- ಕೆ.ಬಿ. ಪ್ರಭುಪ್ರಸಾದ್**

ನನಗೆ ಕುಟುಂಬ ಎಂಬ ಮಾತೇ ನಗು ತರಿಸುತ್ತೆ. ಏಕೆಂದರೆ ಅನೇಕರು ಕುಟುಂಬ ಎಂದರೆ ಹೆಂಡತಿ ಎಂದೇ ಭಾವಿಸುತ್ತಾರೆ. ನಮ್ಮ ಕುಟುಂಬಕ್ಕೆ ಸೌಖ್ಯ ಇಲ್ಲ, ನಮ್ಮ ಫ್ಯಾಮಿಲೀನ ಊರಿಗೆ ಕಳಿಸಿದ್ದೇನೆ ಎಂದು ಹೇಳುವುದು ಸಾಮಾನ್ಯ. ಫ್ಯಾಮಿಲಿ ಎಂಬ ಇಂಗ್ಲಿಷ್ ಪದಕ್ಕೆ ಹೆಂಡತಿ ಎಂಬ ಅರ್ಥ ಇಲ್ಲ, ಬಹುಶಃ ಈ ಅರ್ಥ ಇಂಗ್ಲಿಷಿಗೆ ನಮ್ಮ ಕೊಡುಗೆ.

ಅದು ಹೇಗೆ ಯಾವಾಗ ಇಡೀ ಕುಟುಂಬದ ಸ್ಥಾನವನ್ನು ಹೆಂಡತಿ ಆಕ್ರಮಿಸಿದಳೋ ತಿಳಿಯದು. ಇಡೀ ಕುಟುಂಬದ ಜವಾಬ್ದಾರಿಯನ್ನೆಲ್ಲ ಆಕೆಯ ಮೇಲೆ ಹೊರಿಸಿ ಹಾಯಾಗಿರಬಹುದೆಂಬ ಗಂಡಸಿನ ಕುತಂತ್ರವೊ. ಇಲ್ಲಾ ಆಕೆ ಇಲ್ಲದಿದ್ದರೆ ಕುಟುಂಬದ ಅಸ್ತಿತ್ವವೇ ಇಲ್ಲ ಎಂಬ ಮನ್ನಣೆಯ ಭಾವವೊ. ಮನ್ನಣೆ ಇರಲಿ ಬಿಡಲಿ ಹೆಂಡತಿ ಬರದೆ ಕುಟುಂಬ, ಸಂಸಾರ, ಆಗುವುದೇ ಇಲ್ಲ ಎಂಬ ಮಾತಂತೂ ಸತ್ಯ. ಗೃಹಿಣಿ ಬರಬೇಕಾದರೆ ಮದುವೆ ಆಗಲೇಬೇಕು.

ಮದುವೆ ಎಂದರೆ ಮದುವೆ ಆಗದವರಿಗೆ ನಿಷ್ಕಾರಣವಾದ ಭಯ. ಆದವರಿಗೆ ಸಕಾರಣವಾದ ಭಯ. ಜಾಣರು ವಿವೇಕಿಗಳು ಎನಿಸಿಕೊಂಡ ಅನೇಕ ಮದುವೆಯಾದ ಹಿರಿಯರು, ಮದುವೆ ಎಂದರೆ Bachelor's Degree ಕಳೆದುಹೋಗುತ್ತೆ, ಮಾಸ್ಟರ್ಸ್ ಡಿಗ್ರಿ ಬರೋದಿಲ್ಲ ಎಂದು ಕಿರಿಯರನ್ನು ಕಾಲ ಕಾಲಕ್ಕೆ ಹೆದರಿಸುತ್ತ ಬಂದಿದ್ದಾರೆ. ಆದರೆ ಹಾಗೆಂದು ಮದುವೆಗಳು ಆಗುವುದೇನೂ ತಪ್ಪಿಲ್ಲ.

ಮದುವೆ ಸಂದರ್ಭ ಎಂದರೆ ಹಾಸ್ಯಕ್ಕೆ ಹಸೆಮಣೆ ಹಾಕಿದ ಹಾಗೆ. ಸಂಭ್ರಮ, ಸಡಗರ, ಓಡಾಟ, ಗದ್ದಲಗಳ ನಡುವೆ ಎಲ್ಲೆಲ್ಲೂ ನಗುವಿನ ಅಲೆಗಳು ಏಳುತ್ತಿರುತ್ತವೆ. ಏನೋ ಹಾಸ್ಯದ ಪ್ರಸಂಗ, ಏನೋ ಹಾಸ್ಯದ ಚಟಾಕಿ, ಮಾತಿನ ಚಾತುರ್ಯ ನಗುವಿನ ಚಿಲುಮೆಗಳನ್ನು ಉಕ್ಕಿಸುತ್ತಿರುತ್ತವೆ. ಹಳೆಯ ಸಂಪ್ರದಾಯದ ಮದುವೆಗಳಲ್ಲಂತೂ ನಾಗೋಲೆ ಹಾಸ್ಯದ ಗಂಗೋತ್ರಿ. ಜೊತೆಗೆ ಬೀಗರ ಪರಸ್ಪರ ಮೂದಲಿಕೆ, ಲೇವಡಿ ಹಾಡುಗಳು ಹಾಸ್ಯದ ಪಟಾಕಿಗಳನ್ನು ಹಚ್ಚುತ್ತವೆ.

ಶಂಕರನ ಮದುವೆಯಲ್ಲಿ ಅವನನ್ನೂ ಅವನ ಹೆಂಡತಿಯನ್ನೂ ಬಾಗಿಲ ಬಳಿ ತಡೆದ ಪ್ರಮದೆಯರ ಗುಂಪು ಹೆಂಡತಿಯ ಹೆಸರು ಹೇಳಿದರೇನೆ ದಾರಿ ಬಿಡೋದು ಎಂದು ಶಂಕರನನ್ನು ಪೀಡಿಸಿದರು. ಸಾವಿರ ಸಲ ಬೇಕಾದರೂ ಸಲೀಸಾಗಿ ಹೆಸರು ಹಿಡಿದೆ ಕೂಗುವಂತಹವನು ಶಂಕರ. ಅಷ್ಟು ಸುಲಭವಾಗಿ ಹೇಳಿಬಿಟ್ಟರೆ ಸಂದರ್ಭದ ಸ್ವಾರಸ್ಯವೇ ಕೆಡುತ್ತದೆ ಎಂದು ಅವನೂ ಕೊಂಚ ಹೊತ್ತು ನಾಚಿದಂತೆ ನಟಿಸಿ, ಅವರನ್ನು ಸತಾಯಿಸಿ ಕೊನೆಗೆ ಎಲ್ಲಿ ಮುತ್ತೇ ಸರಿದು ಹೋಗುತ್ತೊ ಎಂಬಂತೆ ಒಡಪು ಹೇಳಿ ಶ್ರೀರಾಮ ಬಂಟರ ರಾಣಿ ವಾನರೇಶ್ವರನ ಕಣ್ಮಣಿ ರುಮೆ ಎಂದು ಹೆಂಡತಿಯ ಕಡೆ ತುಂಟ ಕಟಾಕ್ಷವನ್ನು ಬೀರಿ ನಸುನಕ್ಕ. ಎಲ್ಲರೂ ಹೋ ಎಂದ ನಕ್ಕರು. ಇದೀಗ ಕೆಂಪಾದ ಮುಖದ ಗಿರಿಜೆಯ ಸರದಿ. ಗಂಡನ ಹೆಸರು ಹೇಳಬೇಕು. ಅವಳೇನು ಕಮ್ಮಿ! ತಾನು ಒಂದು ಒಡಪು ಹೇಳಿ 'ನನ್ನ ಜೀವದ ಜೀವ ರಾಜ

ಸುಗ್ರೀವ್' ಎಂದು ಬಿಟ್ಟಳು. ಸೇರಿಗೆ ಸವ್ವಾಸೇರು. ಸೂರು ಹಾರುವ ಹಾಗೆ ನಗೆ ಭೋರ್ಗರೆಯಿತು.

ಇದು ಬೇಕೆಂದೇ ಹಾಸ್ಯ ಮಾಡುವ ಮಾತಾಯಿತು. ಕೆಲವು ಸಲ ಹಾಸ್ಯ ಮಾಡುವ ಉದ್ದೇಶವೇ ಇಲ್ಲದೆ ಸಹಜವಾಗಿ ಆಡಿದ ಮಾತು ನಗುವಿಗೆ ಕಾರಣವಾಗುತ್ತದೆ. ಇದು ಹಲವು ವರ್ಷಗಳ ಹಿಂದೆ ನಡೆದ ಸಂಗತಿ. ನಾವು ನಾಲ್ಕು ಜನ ಸ್ನೇಹಿತರಲ್ಲಿ ಒಬ್ಬರಿಗೆ ಮಾತ್ರ ಮದುವೆಯಾಗಿತ್ತು. ತಾವು ನೋಡಲು ಲಕ್ಷಣವಾಗಿರುವುದರಿಂದ ಬೇಗ ಮದುವೆ ಆಯಿತು ಎಂದು ಜಂಭ ಕೊಚ್ಚಿಕೊಳ್ಳುತ್ತಿದ್ದರು. ಅವರಿಗೆ ಮಗು ಆಯಿತು. ಹುಟ್ಟಿ ಒಂದೆರಡು ವಾರದ ಮೇಲೆ ನಾವೆಲ್ಲರೂ ಮಗುವನ್ನು ನೋಡಲು ಹೋದವು. ನಮ್ಮಲ್ಲಿ ಒಬ್ಬರು 'ಮಗು ಎಲ್ಲ ತಂದೆಯನ್ನೇ ಹೋಲುತ್ತೆ ಅಲ್ಲವಾ' ಎಂದರು. ತಕ್ಷಣ ಇನ್ನೊಬ್ಬ ಮಿತ್ರರು ತೀರ ಸಹಜವಾಗಿ, 'ಛೇ ಇಲ್ಲ, ಮಗು ಒಳ್ಳೆ ಲಕ್ಷಣವಾಗಿ ಚೆನ್ನಾಗಿ ಇದೆ' ಎಂದು ಬಿಟ್ಟರು. ನಮಗೆ ನಗು ತಡೆಯಲಾಗಲಿಲ್ಲ. ಮಗುವಿನ ತಂದೆಯ ಮುಖ ಸೊಟ್ಟಗಾದುದನ್ನು ನೋಡಿ ಮತ್ತಷ್ಟು ನಕ್ಕೆವು.

ನಮ್ಮ ಪಿಲ್ಟೂಗೆ 3 ವರ್ಷವಾದಾಗ ''ನಾಳೆ ಸ್ಕೂಲ್ ತೆರೆಯುತ್ತೆ. ಪಿಲ್ಟೂನ ನರ್ಸರಿಗೆ ಸೇರಿಸೋಣ. ಮನೇಲಿ ಕೊಂಚ ಚೇಷ್ಟೆ ಅವಾಂತರಗಳು ಕಡಿಮೆ ಆಗುತ್ತವೆ'' ಎಂದು ರಾತ್ರಿ ನಾನೂ ಲಲಿತಾ ಮಾತಾಡಿಕೊಂಡೆವು. ನಿದ್ರೆ ಮಾಡುತ್ತಿದ್ದಾನೆ ಎಂದು ನಾವು ಭಾವಿಸಿದ್ದ ಪಿಲ್ಟೂ ಎಲ್ಲವನ್ನೂ ಕೇಳಿಸಿಕೊಂಡಿರಬೇಕು. ಮಾರನೆ ದಿನ ಬೆಳಿಗೆ 10 ಘಂಟ ಹೊತ್ತಿನಲ್ಲಿ ಹೊರಗೆ ಹೋಗಿದ್ದ ಪಿಲ್ಟು ಮನೆಗೆ ಬಂದ. ಎಲ್ಲೊ ಹೋಗಿದ್ದೆ ಅಲೆಯೋಕೆ? ಎಂದೆ. ಅವನು ''ಸ್ಕೂಲಿಗೆ ಹೋಗಿದ್ದೆ ಅಪ್ಪಾ. ನನ್ನನ್ನು ಸೇರಿಸ್ಕೊಳ್ಳಿ ಅಂದೆ. ಅದಕ್ಕೆ ಮಿಸ್ಸು ಹಾಗೆಲ್ಲ ಸಣ್ಣ ಮಕ್ಕಳನ್ನ ಸೇರಿಸ್ಕೋಳಲ್ಲ. ನಿಮ್ಮ ತಂದೇನೋ ತಾಯಿನೊ ಕಳಿಸು ಸೇರಿಸ್ಕೋತೀವಿ ಅಂದರು. ನಿಮ್ಮನ್ನಾದ್ರೆ ಸೇರಿಸ್ಕೋತಾರಂತೆ. ನಾನಂತೂ ಆಟಕ್ಕೆ ಹೋಗ್ತೀನಪ್ಪಾ ಎಂದು ಬಹು ಖುಷಿಯಾಗಿ ಓಡಿಹೋದ ಆ ತುಂಟ.

ಮನೆಯಲ್ಲಿ ಹಾಸ್ಯದ ಸಂದರ್ಭಗಳು ಬರುತ್ತಲೇ ಇರುತ್ತವೆ. ಉದಾಹರಣೆಗೆ ಹೇರ್ ಕಟ್ ಮಾಡಿಸಿಕೊಂಡು ಬಂದಾಗ ಎಲ್ಲರೂ ತಲೆಯನ್ನೇ ಸುತ್ತ ನೋಡುತ್ತ ನಗತೊಡಗುತ್ತಾರೆ. ವಾತ್ಸಲ್ಯಮೂರ್ತಿ ತಾಯಿಯೇ ಆಗಲಿ, ಸುಖದುಃಖಗಳಲ್ಲಿ ಸಮಭಾಗಿಯಾಗಿ ಮೆಚ್ಚಿನ ಮಡದಿಯೇ ಆಗಲಿ ಮೊದಮೊದಲು ಗಂಭೀರವಾಗಿದ್ದಂತೆ ತೋರಿಸಿಕೊಂಡರೂ ಕಿಸಕ್ ಎಂದು ನಗುತ್ತ ತಡೆಹಿಡಿದಂತೆ ಮಾಡಿ – ದೂರ ಹೋಗಿ ನಗುವಿನ ಹೆಬ್ಬಾಗಿಲನ್ನು ತೆರೆದುಬಿಡುತ್ತಾರೆ. ಒಂದು ವಾರಗಟ್ಟಲೆ ನಮ್ಮ ತಲೆ ಅವರ ಹಾಸ್ಯಕ್ಕೆ ನಗುವಿಗೆ ಆಹಾರ ಒದಗಿಸುತ್ತೆ.

ಒಂದು ಸಲ ಮಟ ಮಟ ಮಧ್ಯಾಹ್ನ ಎನ್ನುವ ವೇಳೆಯಲ್ಲಿ ನನ್ನ ತಂಗಿ ತನ್ನ ಮಗ 7 ವರ್ಷದ ಸತೀಶನನ್ನು ಕರಕೊಂಡು ನಮ್ಮ ಮನೆಗೆ ಬಂದಳು. ಬೆಳಗ್ಗೆ ಯೆಲ್ಲಾ ಸುತ್ತಿ ಸುಸ್ತಾಗಿ ಬಂದವನೆ ಊಟ ಮಾಡಿ 1 ಘಂಟೆ ನಿರಾತಂಕವಾಗಿ ನಿದ್ರೆ ಮಾಡೋಣ ಎಂದು ಸಜ್ಜು ಮಾಡಿಕೊಳ್ಳುತ್ತಿದ್ದೆ. ಸತೀಶನಿಗೆ ಹೇರ್‌ಕಟ್ ಮಾಡಿಸಬೇಕು, ನಿಮ್ಮ ಮನೆ ಹತ್ತಿರದ ಬಾರ್ಬರ್

ಅಂದರೆ Smooth ಆಗಿ ಮಾಡ್ತಾನೆ ಅಂತ ಅಂದಳು. ಸತೀಶನಿಗೆ ಹೇರ್‌ಕಟ್ ಅಂದರೇ ಆಳು. ಅದು ಅವನ ಹಿಂದಿನ ಕಟು ಅನುಭವ, ನನ್ನ ಮಧ್ಯಾಹ್ನದ ನಿದ್ರೆ ಖೋತಾ ಆದುದಕ್ಕೆ ಒಳಗೇ ಸಿಟ್ಟು ನನಗೆ, ಸತೀಶನನ್ನೇ ಈಗ ನಾನು ಆಶ್ರಯಿಸಬೇಕು. ಹೋಗೋಣವೇನೊ, ಅಳೋದಿಲ್ಲ ತಾನೆ ಎಂದೆ. ಓ, ಅಳಲ್ಲ. ನಿಮ್ಮ ಬಾರ್ಬರ್ ಆದರೆ ಚೆನ್ನಾಗಿ ಮಾಡ್ತಾನೆ ಅಂತ ಅಂದು ಬಿಟ್ಟ. ನನ್ನ ತಂಗಿ ಒಳಗೆಲ್ಲೊ ಹೋದಾಗ ಸತೀಶನಿಗೆ ಹೇಳಿದೆ. ಕರೆಕ್ಟ್, ಬಹಳ ಚೆನ್ನಾಗಿ ಮಾಡ್ತಾನೆ. ಅವನು ಕತ್ತರಿ ಮಿಷನ್ನು ಏನೂ ಹಾಕಲ್ಲ. ಒಂದು ಪುಟ್ಟ ಕತ್ತೆಮರಿ ಇಟ್ಟುಕೊಂಡಿದಾನೆ. ಒಂದು ಸೈಡಿಂದ ಮೇಯೋಕೆ ಬಿಟ್ ಬಿಡ್ತಾನೆ. ಐದು ನಿಮಿಷದಲ್ಲಿ ಅದು ಆ ಕಡೆಯಿಂದ ಈ ಕಡೆ ಮೇದು ಹಾಕ್ಬಿಡುತ್ತೆ. ಅಷ್ಟೆ ಆಗೋಯ್ತು ಹೇರ್ ಕಟ್ - ಬಾ. ಹೋಗೋಣ. ಎಲ್ಲವನ್ನೂ ಕಣ್ಣರಳಿಸಿ ಕೇಳಿದ ಸತೀಶ್. ಹೆದರಿ ಕತ್ತೆಮರೀನೆ? ಎಂದ. ‘‘ಮತ್ತೆ ಕಳೆದ ಸಲ ನಾನು ಹೇರ್‌ಕಟ್ ಮಾಡಿಸಿಕೊಂಡು ಬಂದಾಗ ನಿಮ್ಮಮ್ಮ ನೋಡಿ ಹೇಳ್ಲಿಲ್ವಾ, ಕತ್ತೆ ಮೇದ ಹಾಗಿದೆ ಅಂತ ಎಂದು ನೆನಪಿಸಿದೆ. ಅತ್ಯಪ್ಪಾ-ಹಂಗಾರೆ ಬೇಡಪ್ಪಾ-ಅಮ್ಮಾ ನಾ ಹೇರ್‌ಕಟ್ ಮಾಡಿಸ್ಕೊಳ್ಳಲ್ಲಾಮ್ಮ-ಎಂದು ರಾಗ ಎಳೆದು ಅಳುತ್ತ - ಮಾಡಿಸ್ಕಳಲ್ಲ ಮಾಡಿಸ್ಕಳಲ್ಲ ಮಾಡಿಸ್ಕಳಲ್ಲ ಎಂದು ಮೂರು ಸಲ ತಲಾಖ್ ಎಂದು ಹೇಳಿದ ಹಾಗೆ ಹೇಳಿಬಿಟ್ಟ. ಅದಾದ ಮೇಲೆ ಅವರಮ್ಮನಿಗೆ ಗೊತ್ತು ಇನ್ನು ಅವತ್ತು ಹೇರ್‌ಕಟ್ ಮಾತನ್ನೇ ಎತ್ತೋಹಾಗಿಲ್ಲ ಅಂತ. ನಾನು ಆರಾಮವಾಗಿ ನಿದ್ರೆ ಮಾಡಿದೆ. ಚಾಪೆ-ತಲೆದಿಂಬು ಸಿದ್ದತೆ ವೇಸ್ಟ್ ಆಗಲಿಲ್ಲ.

ತರಕಾರಿಯಿಂದ ಹಿಡಿದು ವೇಷಭೂಷಣಗಳವರೆಗೆ ನಾವು ಕೊಳ್ಳುವಾಗ ತೋರುವ ಜಾಣತನ, ಬೀಳುವ ಬೇಸ್ತು ಮನೆಮಂದಿಯನ್ನೆಲ್ಲ ನಗಿಸುತ್ತವೆ. ಮನೆಗೆ ಸಮೀಪದಲ್ಲಿ ರಸ್ತೆಯ ಬದಿ 70 ಪೈಸೆಗೆ ಕೊತ್ತಂಬರಿ ಸೊಪ್ಪಿನ ಒಂದು ಕಂತೆ. 75 ಪೈಸೆಗೊಂದು ನಿಂಬೆ ಹಣ್ಣು ಎಂದು ಕೇಳಿದಾಗ ಲಾಯರ್ ಶ್ರೀಧರ ಅವರಿಗೆ ಬಹಳ ಕೋಪ ಬಂತು. ಸಾತ್ವಿಕ ಆಕ್ರೋಶ ಸಿಟಿ ಮಾರ್ಕೆಟ್ ರೇಟಿಗೂ ಬಡಾವಣೆಯ ರೇಟಿಗೂ ಏನೊ ಐದು ಹತ್ತು ಪೈಸೆ ವ್ಯತ್ಯಾಸವಿರಲಿ. ಆದರೆ ಇಷ್ಟು ಸುಲಿಗೆಯೇ ಎಂದು ಸೀದಾ ಸಿಟಿ ಮಾರ್ಕೆಟ್ಟಿಗೆ ಸ್ಕೂಟರ್ ಹತ್ತಿ ಹೋದರು. 2 ಕಂತೆ ಕತ್ತೊಂಬರಿ ಸೊಪ್ಪು, 4 ನಿಂಬೆಹಣ್ಣು ಕೊಂಡು ತಂದು ಹೊಂಡತಿಗೆ ಹೇಳಿದರು 80 ಪೈಸೆ ಉಳಿಸಿದುದಾಗಿ.

ಕೇಳಿ ನಾವೆಲ್ಲ ನಕ್ಕೆವು. ಎರಡು ರೂಪಾಯಿ ಪೆಟ್ರೋಲ್ ಕುಡಿದ ಸ್ಕೂಟರ್ ಅವತ್ತೋ ನಕ್ಕಿರಬೇಕು.

ಮೊನ್ನೆ ಮಾರ್ಕೆಟ್ ಬಳಿ ನನ್ನ ಹಳೆಯ ಸ್ನೇಹಿತ ಗುಂಡ ಸಿಕ್ಕಿದ್ದ. ಎಷ್ಟೋ ವರ್ಷಗಳಾಗಿತ್ತು. ಏನೋ ಸಮಾಚಾರ. ಈಚೆಗೆ ಮದುವೆಗಿದುವೆ ಆಗಿದೀಯೊ ಇಲ್ಲಾ ಮೊದಲಿನ ಹಾಗೇ, ನಿನ್ನ ಅನ್ನ ನೀನೇ ಬೇಯಿಸಿಕೊಳ್ಳೋದು - ನಿನ್ನ ಬಟ್ಟೆ ನೀನೇ ಒಗೆದು ಹಾಕುವುದು, ಕಿತ್ತು ಹೋದಗುಂಡಿ ನೀನೇ ಹಚ್ಚಿಕ್ಕೊಳ್ಳೋದು, ನೀನೆ ಹರಿದ ಬಟ್ಟೆ ರಿಪೇರಿ ಮಾಡಿಕೊಳ್ಳೋದು ಇತ್ಯಾದಿ ಫಜೀತಿಗಳಲ್ಲಿ ಇನ್ನೂ ಒದ್ದಾಡ್ತಾ ಇದೀಯೊ ಎಂದು ಕೇಳಿದೆ. ಆವನು ನನ್ನನ್ನು ನೋಡುತ್ತಲೂ ಖುಷಿಯಿಂದ ಮುಖ ಅರಳಿಸಿ - ಈ ಕಿವಿಯಿಂದ ಆ ಕಿವಿವರೆಗೂ ನಗೆಯನ್ನು ಹೀಚಿದ್ದವನು ಈ ಪ್ರಶ್ನೆ ಕೇಳುತ್ತಲೂ ಹ್ಯಾಪಲು ಮುಖಕ್ಕೆ ಬದಲಾಯಿಸಿ - ಹ್ಞೂ, ಹೌದು

ಎಂದು ಮುಲುಗಿದ. ಏನೋ ಹಾಗೆಂದ್ರೆ ಯಾವುದಕ್ಕೆ ಹೌದೂನೋ ಎಂದೆ. ಆತ ''ಎರಡಕ್ಕೂ ಮದುವೇನೂ ಆಗಿದ್ದೀನಿ. ಮೊದಲಿನ ಹಾಗೆ ಆ ಕೆಲಸಗಳನ್ನು ಮಾಡ್ತಾ ಒದ್ದಾಡ್ತಾನೂ ಇದೀನಿ ಎಂದ'' ಛೇ! ನಾನೀ ಪ್ರಶ್ನೇನೆ ಹಾಕ ಬಾರದಾಗಿತ್ತು. ವೃಥಾ ನನ್ನನ್ನು ಕಂಡ ಅವನ ಮೂಡ್ ಹಾಳು ಮಾಡಿದೆ ಎಂದು ಖೇದ ಪಟ್ಟುಕೊಂಡೆ. ಗುಂಡನೇ ಈಗಲೂ ಅಡಿಗೆ ಮಾಡಬೇಕಾಗಿ ಬಂದಿರುವುದು ನೋಡಿದರೆ ಅವನು ಮದುವೆಯಾದ ಹೆಂಡತಿ ಅದೃಷ್ಟವಂತೆಯೂ-ಗಟ್ಟಿಗಿತ್ತಿನೋ ಎಂದು ಯೋಚಿಸತೊಡಗಿದೆ.

ಗುಂಡನೇ ಅಡಿಗೆ ಮಾಡಬೇಕಾಗಿ ಬಂದಿದ್ದರೆ ಅದರಲ್ಲಿಲ ತಪ್ಪೇನೂ ಇಲ್ಲ, ನಗುವಂತ ಹುದೂ ಇಲ್ಲ. ಆತ ಚೆನ್ನಾಗಿ ಆಡಿಗೆ ಮಾಡಬಲ್ಲ. ನನ್ನಂತಹವನಾಗಿದ್ದರೆ ಕಷ್ಟ. ನಾನು ಮದುವೆ ಮಾಡಿಕೊಳ್ಳುವಾಗ ನಮ್ಮ ಹಿರಿಯರೊಬ್ಬರು ಆಪ್ತವಾಗಿ ಹೇಳಿದ್ದರು. ''ನೋಡು ಅಣ್ಣಯ್ಯ, ರುಚಿಯಾಗಿ ಆಡಿಗೆ ಮಾಡಬಲ್ಲವಳು ಸಿಕ್ಕಿದರೆ ನಿನ್ನ ದಾಂಪತ್ಯ ಜೀವನದ ಸುಖ ಅರ್ಧ ಖಚಿತವಾದಂತೆ, ''ಹಾಗೆಂದೇ ಆಶೀರ್ವಾದ ಮಾಡಿ ಮಾಮಾ'', ಎಂದು ಕೇಳಿಕೊಂಡೆ, ಶುದ್ಧವಾದ ಭಾವದಿಂದ. ಕುಹುಕದಿಂದಲ್ಲ. ಅವರಾದರೂ ಮನಃಪೂರ್ವಕವಾಗಿ ಆಶೀರ್ವಾದ ಮಾಡಿದರು ಎಂದು ಕಾಣುತ್ತೆ. ಕಾಣುವುದೇನು. ಆಶೀರ್ವಾದ ಫಲಿಸಿದುದು ಅನುಭವಕ್ಕೆ ಬಂದಿದೆ. ನಾನೀಗ ಸವಿ ಸವಿಯಾದ ಊಟ-ತಿಂಡಿ ಪಡೆಯುತ್ತ ಸುಖವಾಗಿ ಇದ್ದೇನೆ ನಿಜ. ಆದರೆ ರುಚಿಗೆ ಕಟ್ಟುಬಿದ್ದು ದೇಶ-ವಿದೇಶಾಟನೆಗಳಿಗೆ ನಾಲಾಯಕ್ಕಾಗಿ ಬಿಟ್ಟಿದ್ದೇನೆ. ಬೇರೆ ಯಾವ ಶೈಲಿಯ ಊಟವೇ ರುಚಿಸದೆ-ಪ್ರವಾಸದ ಯೋಚನೆಯನ್ನೇ ಬಿಟ್ಟುಬಿಟ್ಟಿದ್ದೇನೆ.

ಆಕೆ ತೌರು ಮನೆಗೆ ಹೊರಟು ಹೋದಳೊ ಒಂದೆರಡು ವಾರ, ಯಾಕೆ ಆಕೆ ಬರುವವರೆಗೂ ನನಗೆ ಹೋಟೆಲೇ ಗತಿ, ''ಒಂದು ಅನ್ನಕೂಡ ಮಾಡುವುದಕ್ಕೆ ಬರೋಲ್ಲವಲ್ರೀ. ಛೇ. ನಾಚಿಕೆಗೇಡು'', ಎಂದು ಆಕೆ ಹೀಯಾಳಿಸಿದರೂ ನಾನು ಸುಧಾರಿಸಲಿಲ್ಲ. ''ಅನ್ನ! ಅದೇನು ಮಹಾ. ಫಸ್ಟ್ ಕ್ಲಾಸಾಗಿ ಒಳ್ಳೆ ಮಲ್ಲಿಗೆ ಹೂವಿನ ಹಾಗೆ ಮೃದುವಾಗಿರೊ ಅನ್ನ ಮಾಡಿ ತೋರಿಸಿದರಾಯಿತೂ ಇಲ್ಲವೋ. ಹಾಗೆ ನೋಡಿದರೆ ಸಾರು ಪಲ್ಯ ಎಲ್ಲಾನೂ ಮಾಡ ಬಲ್ಲೆ- ನೀನು ಕೊಂಚ ಏನೇನು ಎಷ್ಟೆಷ್ಟು ಹಾಕಬೇಕು'', ಎಂದು ಹೇಳಿ ಕೊಟ್ಟರೆ ಅದೇನು ಬ್ರಹ್ಮ ವಿದ್ಯೆಯೇ ಎಂದು ಜಂಭ ಕೊಚ್ಚುತ್ತಾ ಇದ್ದೆ. ಮಾಡುವ ಗೋಜಿಗೂ ಹೋಗುತ್ತಿರಲಿಲ್ಲ. ಕಲಿಯುವ ಶ್ರದ್ಧೆಯನ್ನೂ ತೋರುತ್ತಿರಲಿಲ್ಲ. ಅವಳಿಗೂ ಅದು ಚೆನ್ನಾಗಿ ಗೊತ್ತು. ಎಲ್ಲಿಬನ್ನಿ ಮಾಡಿ. ನೋಡೋಣ ಎಂದಾಗಲಿ-ಕಲಿಸುತ್ತೇನೆ-ನಡೆಯಿರಿ ಅಡಿಗೆ ಮನೆಗೆ ಎಂದಾಗಲಿ ಅವಳು ಯಾವತ್ತೂ ಛಾಲೆಂಜ್ ಮಾಡಿ ನನ್ನ ಮಾನ ತೆಗೆಯಲಿಲ್ಲ. ಜಾಮೂನು, ಕೇಸರಿಬಾತು ಚಕ್ಕುಲಿ, ಕೋಡಬಳೆ ಮಾಡುವಾಗ ನಾನು ಉತ್ಸಾಹಿತನಾಗಿ ಏನಾದರೂ ಸಣ್ಣ ಪುಟ್ಟ ನೆರವು ನೀಡಲೇ ಎಂದು ಒಳಗೆ ಹೋದರೆ-''ದಮ್ಮಯ್ಯಾ ನಿಮ್ಮ ಪಾಡಿಗೆ ನೀವು ಮಹಾರಾಯರ ಹಾಗೆ ಅದೇನೊ ಬರೆಯುವುದಿದೆ ಎಂದಿರಲ್ಲ ಅದನ್ನು ಬರೀತಾ ಕೂತಿರಿ'', ಎಂದು ಅಟ್ಟುತ್ತಿದ್ದಳು. ಅಡಿಗೆ ಮನೆಯ ಯಾವ ವಿದ್ಯಮಾನಕ್ಕೂ ಮಧ್ಯೆ ತಲೆಹಾಕಲು ಬಿಡುತ್ತಿರಲಿಲ್ಲ.

ಒಂದು ಸಲ ಮಾತ್ರ ಅದೇನು ಬುದ್ಧಿ ಬಂತೋ-ಸ್ವಲ್ಪ ಚೇಷ್ಟೆ ಮಾಡಿ ಬುದ್ಧಿ ಕಲಿಸೋಣ ಎಂದು ಅನಿಸಿತೊ. 'ಅದೇನು ಮಹಾ ಅನ್ನ-ಮಲ್ಲಿಗೆ ಹೂನ ಹಾಗೆ' ಎನ್ನುತ್ತಲೂ ಒಪ್ಪಿಬಿಟ್ಟಳು. ಅನ್ನ ಯಾವಾಗಲಾದರು ಒಮ್ಮೆ ಇಲ್ಲಾ ಕಿಚಡಿ-ಇಲ್ಲಾ ಮಿಡ್ಡೆ ಅದಾಗ ನಾನು ಮೂದಲಿಸುತ್ತಿದ್ದುದು ನೆನಪಿಗೆ ಬಂತೋ ಏನೋ-ಅಂತೂ ರಾತ್ರಿ ಅನ್ನ ಮಾಡುವ ಅನುಮತಿ ಸಿಕ್ಕಿತು. ಮಕ್ಕಳು ತಾಯಿ ಪರವಾಗಿಯೊ ನನ್ನ ಪರವಾಗಿಯೊ ಬಹು ಉತ್ಸಾಹದಿಂದ ಕುಣಿದಾಡಿದರು. ನಾನು ಅನ್ನ ಮಾಡಿ ಕರೆಯುವವರೆಗೆ ಯಾರೂ ಅಡಿಗೆ ಮನೆಯೊಳಗೆ ಬರಕೂಡದೆಂದು ನಿಬಂಧನೆ ಹಾಕಿದೆ. ವಿನಾಕಾರಣ ತಲೆ ಹಾಕಿ ನನ್ನ ಆತ್ಮ ವಿಶ್ವಾಸವನ್ನು ಕುಗ್ಗಿಸಬಹುದು ಎಂಬ ಅಳುಕಿನಿಂದ ಹೀಗೆ ಮಾಡಬೇಕಾಯಿತು. ಅಕ್ಕಿ ತೊಳೆಯೊದು ಸರಿಯಾದ ನೀರಿನ ಮಟ್ಟ ಇರಿಸೋದು, ಕುಕ್ಕರ್ ರೆಡಿಮಾಡಿ ತಲೆ ಮೇಲಿರಿಸೋದು ಒಲೆ ಹೊತ್ತಿಸೋದು ಹೀಗೆ ಎಲ್ಲ ಕೆಲಸಗಳನ್ನೂ ಕ್ರಮಬದ್ಧವಾಗಿ ಮಾಡಿದೆ. ಯಾವ ಟೆನ್ಷನ್ನೂ ಇರಿಸಿಕೊಳ್ಳದೆ ಹಾಯಾಗಿ ಪ್ರಸನ್ನ ಚಿತ್ತನಾಗಿ ಹೋಗಿ ಓದುತ್ತ ಮಲಗಿದೆ. ಕುಕ್ಕರ್ ಕೂಗಿದ್ದು ಸ್ಟೋವ್ ಆರಿಸಿದ್ದು ಎಲ್ಲ ಕಾಲಕಾಲಕ್ಕೆ ಆಯಿತು. ನನ್ನ ಹೆಂಡತಿಯೂ ತನ್ನ ಪಾಡಿಗೆ ಏನೊ ಮಾಡಿಕೊಂಡಿದ್ದಳು.ರಾತ್ರಿ 9 ಆಯಿತು. ಬನ್ನಿ ಊಟಕ್ಕೆ ಎಂದೆ. ಆಕೆಗೆ ಅನ್ನ ಹೇಗಾಗಿದೆ ಮೊದಲು ನೋಡಬೇಕು ಎಂಬ ಕುತೂಹಲ. ಮಕ್ಕಳಿಗೂ ಅತೀವ ಕುತೂಹಲ. ನಾನೇ ಹೋಗಿ ಕುಕ್ಕರ್ ಇಳಿಸಿ ಮುಚ್ಚಳ ತೆಗೆದೆ. ನೋಡು ತೇನೆ ಖಾಲಿ! ಅನ್ನದ ಡಬರಿಯೇ ಇಲ್ಲ! ಏನು ಚೋದ್ಯ! ಅಂದು ಆ ಕಡೆ ನೋಡಿದರೆ ಅಕ್ಕಿ ತೊಳೆದು ನೀರಿನ ಮಟ್ಟ ನೋಡಿ ಇರಿಸಿದ ಪಾತ್ರೆ ಅಲ್ಲೇ ಹೊರಗೇ ಇದೆ! ನನ್ನ ಹೆಂಡತಿ ಕಿಸಕ್ಕನೆ ನಕ್ಕು-ಬಾಯಿ ಹಿಡಿದು ತಡೆದುಕೊಂಡಳು ವಿಷಯವೇನೆಂದು ತಿಳಿದ ಮಕ್ಕಳು ಹಸಿದಿದ್ದ ಆ ಸ್ಥಿತಿಯಲ್ಲೂ ಹೋ ಎಂದು ನಕ್ಕವು. ನಾನು ಮಾತಾನಾಡಲಿಲ್ಲ. ಊಟ 1/2 ಘಂಟೆ ತಡ ಆಯಿತು. ಈಗಲೂ ನನ್ನ ಹೆಂಡತಿ ಆ ಸುದ್ದಿ ಎತ್ತಿ ಹಂಗಿಸುತ್ತಿರುತ್ತಾಳೆ. ಅಂದೊಂದು ಮರೆವಿನ ತಪ್ಪಾಗದೆ ಇದ್ದಿದ್ದರೆ ಅನ್ನ ಹೇಗಿರಬೇಕು ಎಂಬುದನ್ನು ಪ್ರತ್ಯಕ್ಷ ತೋರಿಸುತಾ ಇದ್ದೆ ಎಂದು ಈಗಲೂ ವಾದಿಸುತ್ತೇನೆ. ಆದರೆ ಅನ್ನ ಮಾಡಲು ಮಾತ್ರ ನನ್ನಾಕೆ ಇದುವರೆಗೂ ಬಿಟ್ಟಿಲ್ಲ ಅನ್ನದ ಸವಾಲಿನ ಮಾತು ಬಂದಾಗಲೆಲ್ಲ ಎಲ್ಲರಿಗೂ ನಗುವುದಕ್ಕೆ ಒಂದು ಅವಕಾಶ ಸಿಕ್ಕುತ್ತಿದೆ.

---

## ಜಸ್ಟ್ ಮಿಸ್

ಮೊದಲ ದೀಪಾವಳಿಗೆ
ಅಳಿಯ ಮಾವನ ಮನೆಗೆ
ಹೋಗಲೇ ಇಲ್ಲ
ಏಕೆಂದರೆ ಮಾವ
ಪೋಲೀಸ್ ಇನ್ಸ್‌ಪೆಕ್ಟರ್
ಪೋಲೀಸ್ ಭಾಷೆಯಲ್ಲಿ
ಮಾವನ ಮನೆ ಎಂದರೆ
ಗೊತ್ತಲ್ಲ

# ವ್ಯಂಗ್ಯ ಮೆಲುಕು

- ಪ್ರಕಾಶ್ ಶೆಟ್ಟಿ

*ಹಿಂದೆ ದೀಪಾವಳಿ ಬಂತೆಂದರೆ ವಿಶೇಷಾಂಕಗಳಲ್ಲಿ ಕಾರ್ಟೂನ್‌ಗಳದ್ದೇ ಕಾರುಬಾರು.*
ದಿ.ಅಶ್ರಫ್, ದಿ.ನಾಡಿಗ್ ಮತ್ತು ಶೇಖರ್ *ಅವರು ಹೀಗೆ ಸಿಡಿಸಿದ್ದ*
*ವ್ಯಂಗ್ಯ ಸುರುಸುರುಬತ್ತಿಗಳನ್ನು ಆಸ್ವಾದಿಸಿ ನೋಡಿ !*



"ಅಪ್ಪಾ.. ಈಗ್ಲೇ ಇಷ್ಟು ದುಬಾರಿ. ಮುಂದಿನ ವರ್ಷ ಇನ್ನೂ ಏರೀತು. ಅದನ್ನು ಈಗ್ಲೇ ಕೊಂಡ್ಕೊಳ್ಳೋಣ."




"ಸಾಕು, ಸಾಕು.. ಮೂರು ಪ್ಯಾಕೆಟ್ ಹಿಂದೆಯೇ ದಿವಾಳಿಯಾದೆ !"




"ದೀಪಾವಳಿ ಸಮಯದಲ್ಲಿ ಸಭೆಗಳಿಗೆ ಬರಬಾರದೂಂತ ಈಗ ತಿಳಿಯಿತು "